೭೫ ನೇ ಅಖಿಲ ಭಾರತ
ಅಮೃತ ಮಹೋತ್ಸವ
ಕನ್ನಡ ಸಾಹಿತ್ಯ ಸಮ್ಮೇಳನ
ಚಿತ್ರದುರ್ಗ

# ಗಳಗನಾಥ ಮಾಸ್ತರರು

ಶ್ರೀನಿವಾಸ ಹಾವನೂರ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮.

೭೫ ನೇ ಅಖಿಲ ಭಾರತ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನ - ಚಿತ್ರದುರ್ಗ

# ಗಳಗನಾಥ ಮಾಸ್ತರರು

ಶ್ರೀನಿವಾಸ ಹಾವನೂರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೧೮

GALAGANATHA MASTARARU
by : Srinivasa Havanura
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 126 + x Price : Rs. 45-00 : 2009

ಮೊದಲನೇ ಮುದ್ರಣ : ೧೯೭೨
ಎರಡನೇ ಮುದ್ರಣ : ೨೦೦೯
ಪ್ರತಿಗಳು : ೧೦೦೦
ಬೆಲೆ : ನಲವತ್ತೈದು ರೂಪಾಯಿಗಳು





ಚಿತ್ರ : ಶ್ರೀ ಸಾ. ರೇವನ್

ಮುಖಪುಟ ವಿನ್ಯಾಸ : ಶ್ರೀ ಪ.ಸ. ಕುಮಾರ್

ಮುದ್ರಣ : ಲಕ್ಷ್ಮೀ ಮುದ್ರಣಾಲಯ, ೧೧೭/೨, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

# ಅಧ್ಯಕ್ಷರ ನುಡಿ

ಬಿ.ಎಂ.ಶ್ರೀ. ಅಚ್ಚುಕೂಟ ಪ್ರಾರಂಭವಾದಾಗಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರಿಗೆ ಬೇಕಾಗುವ ಸಾಹಿತ್ಯವನ್ನು ಕಾಲಕಾಲಕ್ಕೆ ಕೊಡುತ್ತಾ ಬಂದಿದೆ. ಪರಿಷತ್ತು ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದ ಈ ದೀರ್ಘ ಅವಧಿಯಲ್ಲಿ ಅಧ್ಯಕ್ಷರು ಮತ್ತು ಪ್ರಕಟಣಾ ಸಮಿತಿ ಸಹೃದಯ ಓದುಗರ ಅಭಿರುಚಿಗೆ ಸ್ಪಂದಿಸಿರುವುದಲ್ಲದೆ ಸದಭಿರುಚಿಯನ್ನು ನಿರ್ಮಾಣ ಮಾಡುವ ಕೆಲಸವನ್ನು ಎಚ್ಚರದಿಂದ ಮಾಡುತ್ತಾ ಬಂದಿದ್ದಾರೆ. ಎಲ್ಲ ಕ್ಷೇತ್ರಗಳಿಂದ ಹರಿದುಬರುವ ಜ್ಞಾನಧಾರೆಗಳನ್ನು ಹಿಡಿದುಕೊಟ್ಟು ಲೋಕಜ್ಞಾನವನ್ನು ಓದುಗರಲ್ಲಿ ತುಂಬುವ, ಅವರ ಅರಿವಿನ ದಿಗಂತಗಳನ್ನು ವಿಸ್ತರಿಸುವ, ಆತ್ಮವಿಶ್ವಾಸವನ್ನು ಹುಟ್ಟಿಸುವ ಕೆಲಸಕ್ಕೆ ಪರಿಷತ್ತು ವೇದಿಕೆಯಾಗಿದೆ. ವಿವಿಧ ಜ್ಞಾನ ಶಿಸ್ತುಗಳಲ್ಲಿ ಪರಿಣಿತರಾದವರನ್ನು ಗುರುತಿಸಿ ಅವರಿಂದ ಪುಸ್ತಕ ಬರೆಸಿದೆ. ಸ್ವಯಂಪ್ರೇರಿತರಾಗಿ ಪ್ರಕಟಣೆಗೆ ಹಸ್ತಪ್ರತಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಅವುಗಳಲ್ಲಿ ಉತ್ತಮವಾದವುಗಳನ್ನು ಆಯ್ದು ಪ್ರಕಟಿಸಿದೆ. ವಿಚಾರ ಸಂಕಿರಣಗಳನ್ನು ನಡೆಸಿ, ಅಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಾತಿನಿಧಿಕವೆನಿಸುವ ಕೃತಿಗಳನ್ನು ಹೊರತಂದಿದೆ. ಪುಸ್ತಕ ದತ್ತಿಯಿಂದ ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಕರ್ನಾಟಕ ಸರ್ಕಾರದ ಧನಸಹಾಯದ ನೆರವಿನಿಂದಲೂ ಎಲ್ಲರಿಗೆ ಎಲ್ಲ ಕಾಲಗಳಲ್ಲೂ ಉಪಯುಕ್ತವಾಗುವ ನಿಘಂಟು, ಕೋಶಗಳನ್ನು ಪ್ರಕಟಿಸಿದೆ.

ವಿವಿಧ ಸಂದರ್ಭಗಳಲ್ಲಿ ಹೊರಬಂದ ಕೃತಿಗಳಲ್ಲಿ ಕೆಲವು ಮತ್ತೆ ಮತ್ತೆ ಪ್ರಕಟವಾಗುವ ಭಾಗ್ಯವನ್ನು ಪಡೆದುಕೊಂಡಿವೆ. ಹಳಗನ್ನಡ ಕಾವ್ಯಗಳ ಗದ್ಯಾನುವಾದ, ಜೀವನ ಚರಿತ್ರೆ, ಸಾಹಿತ್ಯ ಪರೀಕ್ಷೆಗಳ ಪಠ್ಯಪುಸ್ತಕಗಳು, ನಾಟಕ ಸಂಪುಟ, ವಿಮರ್ಶೆ, ಸಂಶೋಧನೆ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಹೆಚ್ಚು ಬೇಡಿಕೆ ಇರುವ ಪುಸ್ತಕಗಳನ್ನು ಮರುಮುದ್ರಣದ ಮೂಲಕ ಸಹೃದಯರಿಗೆ ತಲುಪಿಸುವುದು ಪರಿಷತ್ತಿನ ಕರ್ತವ್ಯವಾಗಿದೆ. ಅಯ್ಯೋ, ಇಂಥ ಪುಸ್ತಕ ಸಿಗಲಿಲ್ಲವಲ್ಲ ಎಂದು ಕನ್ನಡಿಗರು ಕೊರಗದಂತೆ ನೋಡಿಕೊಳ್ಳಬೇಕಾಗಿದೆ.

ನಾಡು ನುಡಿಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡು ಕನ್ನಡಿಗರ ಮನಸ್ಸಿನಲ್ಲಿ ಚಿರಸ್ಮರಣೀಯರಾಗಿರುವ ಮಹನೀಯರ ಜೀವನ–ಕಾರ್ಯಗಳನ್ನು ಪರಿಚಯಿಸುವ ಪುಸ್ತಕಗಳು, ಕುವೆಂಪು, ಡಿ.ವಿ.ಜಿ., ಕೆ.ಎಸ್.ನ., ಎ.ಎನ್.ಮೂರ್ತಿರಾವ್, ಗೊರೂರು, ಶಂ.ಬಾ.ಜೋಶಿ, ಆಲೂರು ವೆಂಕಟರಾಯರು ಮುಂತಾದ ಸಾಹಿತ್ಯ ದಿಗ್ಗಜಗಳ ಪುಸ್ತಕಗಳು, ಕನ್ನಡ ನಾಡಿನ ಚರಿತ್ರೆಯನ್ನು ಸಾದ್ಯಂತವಾಗಿ ಕಟ್ಟಿಕೊಡುವ ಹಿರಿಯ ಸಂಶೋಧಕರ ಪುಸ್ತಕಗಳು, ಹಳಗನ್ನಡದ ಮಹಾಕವಿಗಳ ಮಹತ್ವವನ್ನು

ಸಾದರಪಡಿಸುವ ಪುಸ್ತಕಗಳು, ಹಳಗನ್ನಡ, ನಡುಗನ್ನಡದ ಶ್ರೇಷ್ಠ ಕಾವ್ಯಗಳು ಅಮೃತ ಮಹೋತ್ಸವ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿದ್ದು, ಇವು ಕನ್ನಡಿಗರ ಮನೆಗಳಲ್ಲಿ ಅತ್ಯವಶ್ಯಕವಾಗಿ ಸೇರ್ಪಡೆಗೊಳ್ಳುವಂಥವಾಗಿವೆ ; ಆಗಾಗ ತಿರುವಿಹಾಕಲು, ಮನನ ಮಾಡಲು ಯೋಗ್ಯವಾದವುಗಳಾಗಿವೆ.

ಇವತ್ತಿನ ಸಂದರ್ಭದಲ್ಲೂ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳು ಹೊರತರುತ್ತಿರುವ ಕೃತಿಗಳ ಜೊತೆಯಲ್ಲಿ ಹೋಲಿಸಿದರೆ ಪರಿಷತ್ತಿನ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ. ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ಈ ನೀತಿಗೆ ಬೆನ್ನೆಲುಬಾಗಿದೆ. ತಮಿಳು, ತೆಲುಗು, ಮಲೆಯಾಳಂ ಮಾತೃಭಾಷೆಯವರೂ ಕರ್ನಾಟಕದಲ್ಲಿ ಕನ್ನಡಿಗರಾಗಿರಬೇಕೆಂದು ಬಯಸುವ ಪರಿಷತ್ತು ಅಂಥವರಿಗೆ ಸಹಾಯಕವಾಗುವಂತೆ ಸ್ವಯಂಬೋಧಿನಿಗಳನ್ನು ರೂಪಿಸಿರುವುದು ಅಕ್ಕಪಕ್ಕದ ರಾಜ್ಯಗಳವರ ಜೊತೆ ಪರಿಷತ್ತು ತೋರುತ್ತಾ ಬಂದಿರುವ ಭ್ರಾತೃ ವಾತ್ಸಲ್ಯದ ಸಂಕೇತವಾಗಿದೆ.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಪುಸ್ತಕಗಳನ್ನು ಮತ್ತು ಹೊಸ ಪುಸ್ತಕಗಳನ್ನು ಚಿತ್ರದುರ್ಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೫ನೆಯ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ. "ಮಾತಿಗೆ ನಾಶಪಡಿಸುವ ಹಾಗೂ ಶಮನಗೊಳಿಸುವ ಶಕ್ತಿಯಿದೆ. ಸತ್ಯ ಮತ್ತು ದಯೆಯನ್ನು ಸಮ್ಮಿಲನಗೊಳಿಸುವ ಶಕ್ತಿ ಉಂಟು. ಅಷ್ಟೇ ಅಲ್ಲ ಮಾತಿಗೆ ವಿಶ್ವವನ್ನು ಬದಲಾಯಿಸುವ ಶಕ್ತಿ ಇದೆ" ಎಂದಿದೆ ಬುದ್ಧವಾಣಿ. ಇದು ಮಾತಿಗಿರುವ ಶಕ್ತಿ ಮತ್ತು ಮಾತನ್ನೇ ಕೃತಿಯಾಗಿಸುವ ಬರಹಕ್ಕಿರುವ ಶಕ್ತಿ. ಇಂಥ ಶಕ್ತಿಸ್ಫೋಟ ಪರಿಷತ್ತಿನ ಪುಸ್ತಕಗಳ ಮೂಲಕ ಆಗುತ್ತದೆನ್ನುವ ವಿಶ್ವಾಸ ನಮ್ಮದಾಗಿದೆ.

ದಿನಾಂಕ : ೧೬-೧-೨೦೦೯

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

# ಲೇಖಕನ ಹೇಳಿಕೆ

## (ಮೊದಲನೆ ಮುದ್ರಣದ ಆವೃತ್ತಿ)

ದಿವಂಗತ ಗಳಗನಾಥರ ಜೀವನ ಹಾಗೂ ಕೃತಿಗಳ ಬಗ್ಗೆ ಈಗಾಗಲೇ ಅನೇಕ ಲೇಖನಗಳು ಮತ್ತು ಹಲವು ಪುಸ್ತಕಗಳು ಪ್ರಕಟವಾಗಿವೆ. ಅವರ ಜೀವನವನ್ನು ಕುರಿತ ಪ್ರತ್ಯೇಕ ಪುಸ್ತಕವಿರಲಿಲ್ಲ. ಆ ದೃಷ್ಟಿಯಿಂದ ಈ ಗ್ರಂಥವನ್ನು ಬರೆಯಲಾಗಿದೆ. ಶೀರ್ಷಿಕೆಯಲ್ಲಿರುವ 'ಮಾಸ್ತರರು' ಎಂಬ ಅಭಿಧಾನವು ಈ ನಿಲುಮೆಯನ್ನು ಸಮರ್ಥಿಸುವಂತಿದೆ. ಏಷ್ಟೆಂದರೂ ಅವರು ಅಮರಣಾಂತ ಮಾಸ್ತರರಾಗಿಯೆ ಉಳಿದರು. ಮೊದಲಿಗೆ ಶಾಲಾ ಶಿಕ್ಷಕರಾಗಿ, ಅನಂತರ ತಮ್ಮ ಬರವಣಿಗೆಯ ಮೂಲಕ ಜನತೆಗೆ ಒಳಿತನ್ನು ಬೋಧಿಸಿದರು.

ದೂರದ ಮುಂಬಯಿಯಲ್ಲಿರುವವನಾದ್ದರಿಂದ ಗಳಗನಾಥರ ಬಗೆಗಿನ ವಿಷಯ ಸಂಗ್ರಹ ಸಾಧ್ಯವಾಗದು-ಎಂದು, ಯೋಚಿಸಿ, ಈ ಕೆಲಸವನ್ನು ಒಪ್ಪಿಕೊಳ್ಳಬಾರದು ಎಂದು ಮಾಡಿದ್ದೆ. 'ನೀವು ಬರೆಯಲೇಬೇಕು' ಎಂದು ಡಾ. ರಂ.ಶ್ರೀ.ಮುಗಳಿಯವರೂ, ಶ್ರೀ ಜಿ. ನಾರಾಯಣರೂ ಒತ್ತಾಯಪಡಿಸಿದರು.

ಹಾವನೂರ ಗ್ರಾಮದಲ್ಲಿ ನಿವೃತ್ತಿ ಜೀವನ ನಡೆಸುತಿರುವ ನನ್ನ ಪ್ರಾಥಮಿಕ ಶಾಲಾಗುರುಗಳಾದ ಶ್ರೀ ಹುಚ್ಚಪ್ಪ ಮಾಸ್ತರರು ನನ್ನನ್ನು ಮನೆಗೆ ಕರೆದು, ಗಳಗನಾಥರ ಕೆಲವು ದುರ್ಮಿಳ ಪುಸ್ತಕ-ಪತ್ರಿಕೆಗಳನ್ನು ಕೊಟ್ಟು ಬರೆಯಲು ಹುರಿದುಂಬಿಸಿದರು. ನನ್ನ ತಂದೆ ಶ್ರೀ ನರಸಿಂಹಾಚಾರ್ಯ ಗಲಗಲಿಯವರು ಗಳಗನಾಥರ ಸಂಬಂಧಿಕರಿರುವ ಊರುಗಳಿಗೆ ಎಡತಾಕಿ ಅಷ್ಟಿಷ್ಟು ವಿಷಯ ಸಂಗ್ರಹಿಸಿದರು.

ಗಳಗನಾಥರ ಪಾಠಶಾಲಾ ವಿದ್ಯಾರ್ಥಿಗಳಾಗಿದ್ದ ಶ್ರೀ ಗಣೇಶಭಟ್ಟ ಜೋಷಿಯವರು ನಾನು ಕೇಳುವುದೇ ತಡ, ಬೇಕಾದಷ್ಟು ಮಾಹಿತಿಯನ್ನು ಒದಗಿಸಿದರಲ್ಲದೇ, ಪತ್ರಮುಖೇನ ವಿವರಗಳನ್ನು ಬರೆಯುತ್ತ ತಮ್ಮ ಸಹಾಯ ತತ್ಪರತೆಯನ್ನು ತೋರಿಸಿದರು.

ಗಳಗನಾಥರ ಸಂಬಂಧಿಕರಾದ ಶ್ರೀ ಶಂಕರಪ್ಪ ಜೋಶಿ, ಶ್ರೀಧರ ಜೋಶಿ, ಕೆ.ಎಚ್. ಕುಲಕರ್ಣಿ ಮತ್ತು ಗುತ್ತಲ ಶಾಲೆಯ ಶಿಕ್ಷಕ ವೃಂದ ಹಾಗೂ ಅಲ್ಲಿಯ ನಿವಾಸಿ ಬಾಳಣ್ಣ (ಕಲಾವಿದ) - ಇವರೆಲ್ಲ ಮುಕ್ತ ಮನಸ್ಸಿನಿಂದ ನನಗೆ ಮಾಹಿತಿಯನ್ನು ಒದಗಿಸಿದ್ದಾರೆ.

ಗಳಗನಾಥರ ಬಗ್ಗೆ ಈಗಾಗಲೇ ಪ್ರಕಟವಾದ ಸಾಮಗ್ರಿಯ, ವಿಶೇಷತಃ ಸರ್ವಶ್ರೀ ಕೃಷ್ಣಮೂರ್ತಿ ಕಿತ್ತೂರ, ಬೆಟಗೇರಿ ಕೃಷ್ಣಶರ್ಮ, ಬೀಚಿ-ಹೊಂಬಳ ಮಾಸ್ತರರು-ಇವರ ಲೇಖನಗಳ ಉಪಯೋಗವನ್ನು ಪಡೆದಿದ್ದೇನೆ. ಶ್ರೀ ದ.ಲ. ಕೆರೂರ, ಶ್ರೀ ಗೋ.ವೆಂ. ಚುಳಕಿ ಇವರ ಸಹಾಯ ಬೇರೊಂದು ರೀತಿಯದು.

"ನಮ್ಮ ತಂದೆಗೆ ಹಿರಿಯ ಸಾಹಿತಿಗಳ ಬಗ್ಗೆ ಬಹಳಷ್ಟು ಆದರ, ಆದರೆ ಬದುಕಿದ್ದವರ ಉಸಾಬರಿಗೆ ಹೋಗುವುದಿಲ್ಲ; ಸತ್ತವರನ್ನು ಬಿಡುವುದಿಲ್ಲ !"

ಎಂದು ಚೇಷ್ಟೆ ಮಾಡುತ್ತಲೇ ನನ್ನ ಇಬ್ಬರು ಮಕ್ಕಳು ನಾಗೇಶ, ಸಂಜಯರು ಪ್ರತಿ ಮಾಡುವಲ್ಲಿ, ತಿದ್ದುವಲ್ಲಿ ನೆರವಾಗಿದ್ದಾರೆ.

ಹಸ್ತಪ್ರತಿಯನ್ನು ಓದಿದವರು ಮುಂಬಯಿಯ ಡಾ॥ ಚಿದಂಬರ ಕುಲಕರ್ಣಿ ಮತ್ತು ಶ್ರೀ ವೆಂಕಟೇಶ ಸಾಂಗಲಿಯವರು. ಇವರು ಮಾಡಿದ ಮಹತ್ವದ ಸಲಹೆಗಳ ಮೇರೆಗೆ ಹಲವು ಪುಟಗಳನ್ನು ನವೀಕರಿಸಿ ಬರೆಯಬೇಕಾಯಿತು. ನಾಮಸೂಚಿಯನ್ನು ಸಿದ್ಧಪಡಿಸುವಲ್ಲಿ ಮಗಳು ನಿವೇದಿತಾ ಪಾಲುಗೊಂಡಿದ್ದಾಳೆ.

ಹಲವಾರು ಚಿತ್ರಗಳಿಂದ ಅಲಂಕೃತವಾಗಿದೆ ಈ ಪುಸ್ತಕ. ಅದರ ಹೊಣೆಯನ್ನು ನಿರ್ವಹಿಸಿದವರು ಆತ್ಮೀಯ ಗೆಳೆಯ ನಾನಾ ದೇಸಾಯಿಯವರು. ನನಗಾಗಿ ಅವರು ಗಳಗನಾಥ, ಆನಂದವನಗಳಿಗೆ ಹೋಗಿ ಛಾಯಾ ಚಿತ್ರ ತೆಗೆದಿದ್ದಾರೆ. ಗಳಗನಾಥರ ರೇಖಾಚಿತ್ರವನ್ನು ಸೊಗಸಾಗಿ ಬಿಡಿಸಿದ್ದಾರೆ. ಅಚ್ಚಿನ ಮನೆಯಿಂದ ಸದ್ದಿಲ್ಲದೆ ಹೊರತಂದವರು ಶ್ರೀ ಆರ್.ಎಸ್. ರಾಮರಾಯರು.

ಹೀಗೆ ಈ ಕೃತಿಯ ಮೇಲಣ ಮಹನೀಯರ ವಿವಿಧ ಬಗೆಯ ನೆರವಿನಿಂದ ಮೈದಾಳಿದೆಯಾದ್ದರಿಂದ ನನ್ನದೆನ್ನುವುದು ಅತಿ ಸ್ವಲ್ಪ. ನಾನು ಲೇಖಕನೆನ್ನುವುದು ಒಂದು ಆಕಸ್ಮಿಕ.

ಮುಂಬಯಿ

೧೨-೫-೧೯೭೨

ಶ್ರೀನಿವಾಸ ಹಾವನೂರ

# ಪರಿವಿಡಿ



ಗಳಗನಾಥ ಗ್ರಾಮದ ಬಳಿಯಲ್ಲಿ ವರದೆ-ತುಂಗಭದ್ರೆಯರ ಸಮ್ಮಿಲನ



ಗಳಗೇಶ್ವರ



ದೇವಾಲಯ

೧೮೬೯-೧೯೦೭

# ಆದರ್ಶ ಶಿಕ್ಷಕ

'ಶ್ರೀ ಸದ್ಗುರು ಪ್ರಭಾವ ಪೋಷಿತನಾದ ವೆಂಕಟೇಶನೆಂಬ ಹೆಸರಿನ ನಾನು ಕಣ್ವ ಶಾಖೆಯ ಸ್ಮಾರ್ತ ಬ್ರಾಹ್ಮಣನು. ನನ್ನ ಪೂಜ್ಯ ಪಿತೃಗಳಲ್ಲಿ ನನ್ನ ತಂದೆಯವರ ಹೆಸರು ತ್ರಿವಿಕ್ರಮಭಟ್ಟರು. ಅಜ್ಜಂದಿರ ಹೆಸರು ರಾಮಭಟ್ಟ, ಮುತ್ತಜ್ಜಂದಿರ ಹೆಸರು ವೆಂಕಣ್ಣಭಟ್ಟರು. ನನ್ನ ಕುಲದೈವತವು ಶ್ರೀ ವೆಂಕಟೇಶನು.

ನಾನು ಕೇವಲ ಗಾವಿಲನೆಂತಲೇ ಹೇಳಬಹುದು. ಯಾಕೆಂದರೆ ನಾನು ಹುಟ್ಟಿದ (೫-೧-೧೮೬೯) ಹಾವನೂರೆಂಬ ನನ್ನ ಮಾತಾಮಹರ ಊರು ಹಳ್ಳಿಯು. ನಾನು ಕಲಿತ ನಾಲ್ಕೂ ಪಾಠಶಾಲೆಗಳೂ ಒಂದಕ್ಕಿಂತ ಒಂದು ಸಣ್ಣವಾದ ಹಳ್ಳಿಯವೆ! ಇಂತಹ ಗಾವಿಲನಾದ ನನಗೆ ದೊರೆತ ಶಿಕ್ಷಣವೆಂದರೆ ಧಾರವಾಡ ಕನ್ನಡ ಟ್ರೇನಿಂಗ್ ಕಾಲೇಜದ ಮೂರು ವರ್ಷದ ಕೌದಿಯ ಚಂದದ ಹಂಡಬಂಡ ಶಿಕ್ಷಣವು!

ಭಾಷೆಯ ಜ್ಞಾನವು ಕೇವಲ ಜನ್ಮಭಾಷೆಯೆಂಬ ಪ್ರಧಾನ ಕಾರಣದಿಂದ ವಿಸ್ತೃತವಾಗಬಹುದಾದಷ್ಟರ ಮಟ್ಟಿಗೆ ಬೆಳವಣಿಗೆ ಹೊಂದಿದ್ದು, ಕೊಂಕಣಸ್ಥರ ಸಹವಾಸದಿಂದ ತಿಳಿಯಬಹುದಾದಷ್ಟು ಮಹಾರಾಷ್ಟ್ರ ಭಾಷೆಯು ನನಗೆ ತಿಳಿಯುತ್ತಿರುವುದು. ನನ್ನ ಸಂಸ್ಕೃತ ಭಾಷೆಯ ಜ್ಞಾನವು ನಾನು ಟ್ರೇನಿಂಗ್ ಕಾಲೇಜದಲ್ಲಿಯ ಪರೀಕ್ಷೆಗಳಿಗಾಗಿ ಮೂರು ವರ್ಷ ಓದಿದ ತೀರ ಸಾಮಾನ್ಯವಾದ ತಾಳತಂತು ಇಲ್ಲದ, ಪುಸ್ತಕೀಯ ಜ್ಞಾನದಲ್ಲಿ ಹರಿದು ಮುರಿದು ಉಳಿದದ್ದು. ಇಂಗ್ಲೀಷ್ ಭಾಷೆಯ ಮೂಲಾಕ್ಷರಗಳನ್ನೂ, ಸಾಲಾಗಿ ನನಗೆ ಬರೆಯಲಿಕ್ಕೆ

ಬರುವುದಿಲ್ಲ. ಒಟ್ಟಿಗೆ ನಾನು ಯಾವ ಭಾಷೆಯ ಅಥವಾ ಶಾಸ್ತ್ರದ ಅಭ್ಯಾಸವನ್ನೂ, ಸಂಕಲ್ಪಪೂರ್ವಕವಾಗಿ ಗುರುಮುಖದಿಂದ ಮಾಡಿದವ ನಲ್ಲವಾದ್ದರಿಂದ, ನನ್ನಲ್ಲಿ ಯಾವ ಪಾಂಡಿತ್ಯವು ಇರುವುದಿಲ್ಲ. ತೆರಪಿಲ್ಲದೆ ನನ್ನಲ್ಲಿ ವಾಸಮಾಡಿಕೊಂಡಿರುವದೆಂದರೆ ಪಾಮರತ್ವವು!'

–ಹೀಗೆ ತಮ್ಮ ಬಾಲ್ಯ ಹಾಗೂ ಶಿಕ್ಷಣವನ್ನು ಕುರಿತು ಗಳಗನಾಥರೇ ಒಂದೆಡೆ ಹೇಳಿದ್ದಾರೆ. ಹಾವನೂರಿಗೆ ಮೂರು ಮೈಲು ದೂರವಿರುವ ಗಳಗನಾಥವೇ ಅವರ ಊರು. ಎಂತಹ ರಮ್ಯ ಸ್ಥಳವದು! ಊರಿನ ಬದಿಯಲ್ಲಿಯೇ ವರದೆ–ತುಂಗಭದ್ರೆಯರ ಸಮ್ಮಿಲನ. ಆ ಕೂಟ ಸ್ಥಳಕ್ಕೆ ತಾಗಿ ಇತಿಹಾಸ ಪ್ರಸಿದ್ಧವಾದ ಗಳಗೇಶ್ವರ ದೇವಸ್ಥಾನ. ಬಯಲುಸೀಮೆಯಾದರೂ ಊರಿನ ಸುತ್ತೆಲ್ಲ ವೃಕ್ಷಗಳ ಗುಂಪು, ವಿಶೇಷತಃ ಆ ಮಾವಿನ ತೋಪುಗಳು! ನೊಂದ ಮನಸ್ಸಿಗೆ ನೆಮ್ಮದಿ ನೀಡುವಂತಹ ವಾತಾವರಣ ಅಲ್ಲಿದೆ.

ವೆಂಕಟೇಶನು ತನ್ನ ಶೈಶವದ ದಿನಗಳನ್ನು ಅಲ್ಲಿಯೇ ಕಳೆದನು. ತಂದೆಯದು ವೈದಿಕ ಮನೆತನ, ಧಾರ್ಮಿಕ ಆಚರಣೆಗೆ ಅಲ್ಲಿ ವಿಶೇಷ ಮಹತ್ವ. ವೃತ್ತಿಯಲ್ಲಿ ಅವರು ಶ್ಯಾನುಭೋಗರು; ಬರಹೋಗುವವರ ಸಂಖ್ಯೆ ದೊಡ್ಡದು. ಅವರ ಆತಿಥ್ಯ–ನಿತ್ಯವೂ ಇದ್ದುದೆ. ಇವೆರಡೂ ವೆಂಕಟೇಶನ ಮುಂದಿನ ಜೀವನದಲ್ಲಿ ಪ್ರಭಾವ ಬೀರಿದ ಅಂಶಗಳು.

ಗೋಲಿ ಗುಂಡು, ಮುಟ್ಟಾಟ ಆಡುತ್ತಲೇ ವೆಂಕಟೇಶನು ಸ್ತೋತ್ರಗಳನ್ನು ಬಾಯಿಪಾಠ ಮಾಡಿದನು. ಮುಂದೆ ಶಾಸ್ತ್ರಾಭ್ಯಾಸ ಮಾಡಿ ಸುಲಭವಾಗಿ ಅವನು 'ಶಾಸ್ತ್ರಿ' ಆಗಬಹುದಿತ್ತು, ಇಲ್ಲವೆ ಮನೆತನದ ಶ್ಯಾನುಭೋಗಿಕೆಯನ್ನು ಮುಂದುವರಿಸಬಹುದಿತ್ತು. ಹಾಗೆ ಆಗಿದ್ದರೆ, ನಮ್ಮ ಚರಿತ್ರ ನಾಯಕನ ಕಾರ್ಯಕ್ಷೇತ್ರ ಗಳಗನಾಥ ಗ್ರಾಮ, ಹೆಚ್ಚೆಂದರೆ ಅಗಡಿಯ ಅಗ್ರಹಾರಕ್ಕೆ ಸೀಮಿತವಾಗಿರುತ್ತಿತ್ತು. ಆದರೆ ದೈವ ಅವರನ್ನು ಸಾಹಿತ್ಯ ರಂಗಕ್ಕೆ ಕರೆದೊಯ್ಯಿತು.

ಪ್ರಾಥಮಿಕ ಶಿಕ್ಷಣಕ್ಕಾಗಿ ವೆಂಕಟೇಶನು ಗಳಗನಾಥವನ್ನು ಬಿಟ್ಟು ಹೊರಡಬೇಕಾಯಿತು. ಆ ದಿನಗಳಲ್ಲಿ ಕಕ್ಕ ಬಿಷ್ಟೋಪಂತ ಶಂಕರ ಜೋಶಿಯವರು ನೆರವನ್ನು ನೀಡಿದರು. ಮುಂದೆ ಶಿಕ್ಷಕ ವೃತ್ತಿಯಿಂದಾಗಿ ಊರೂರು ಅಲೆಯಬೇಕಾಗಿ ಬಂದಿದ್ದಾಗ, ಹುಟ್ಟೂರಿನ ಸಂಪರ್ಕ ಇನ್ನಷ್ಟು ಕಡಿಮೆಯಾಯಿತು. ಗಳಗನಾಥದಲ್ಲಿಯ ಮನೆಯು ಜ್ಞಾತಿ ಬಂಧುವಾದ ತಾಳ್ಕೋ ಕೃಷ್ಣ ಕುಲಕರ್ಣಿ ಎಂಬವರಿಗೆ ದಾನವಾಗಿ ಸಂದಿತು. ಅವರ

ಗ್ರಾಮದೇವತವಾದ ಗಳಗೇಶ್ವರನನ್ನು ಮರೆಯಬಹುದೆ? ಅಲ್ಲಿ ನಿತ್ಯ ನಂದಾದೀಪಕ್ಕೆ ಅನುಕೂಲವಾಗುವಂತೆ ಗಳಗನಾಥರು ವರ್ಷಂಪ್ರತಿ ತಪ್ಪದೇ ಹಣವನ್ನು ಕಳುಹಿಸುತ್ತಿದ್ದರು. ಏನಿದ್ದರೂ ವೆಂಕಟೇಶ ತಿರಕೋ ಕುಲಕರ್ಣಿ - ಈ ಹೆಸರಿಗೆ ಗಳಗನಾಥ ಎಂಬುದು ಉಪನಾಮವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ಶಾಶ್ವತ ಹೆಸರಾಗಿ ಉಳಿಯಿತು.

ಈ ಕನ್ನಡ ಗಾವಿಲನಿಗೆ ದೊರೆತ ಶಿಕ್ಷಣ, ಹೆಚ್ಚೆಂದರೆ ಟ್ರೇನಿಂಗ್ ಕಾಲೇಜಿನದು - ಎಂದು ಮೇಲೆ ಉಲ್ಲೇಖವಾಗಿದೆಯಷ್ಟೆ. ಆದರೆ ಆಗಿನ ಕಾಲಕ್ಕೆ ಕನ್ನಡದ ಮಟ್ಟಿಗೆ ಅದುವೆ ಶ್ರೇಷ್ಠ ಶಿಕ್ಷಣಮಂದಿರವೆನಿಸಿದ್ದಿತು. ೧೮೮೦ನೆಯ ದಶಕದ ಮುಂಬಯಿ ಕರ್ನಾಟಕದಲ್ಲಿ ಕಾಲೇಜು ಮಟ್ಟದ ಅಥವಾ ಪಂಡಿತ ಪರೀಕ್ಷೆಯ ಮಟ್ಟದ ಬೇರಾವ ವಿದ್ಯಾಸಂಸ್ಥೆಯೂ ಇರಲಿಲ್ಲ. ಹೆಚ್ಚಿನ ವಿದ್ಯಾಭ್ಯಾಸ ಪಡೆಯಬೇಕೆನ್ನುವವರು ಪುಣೆ-ಮುಂಬಯಿಗಳಿಗೆ ಹೋಗುತ್ತಿದ್ದರು. ಅಲ್ಲಿ ಹೋಗಿ ಬಂದರೆಂದರೆ ಮರಾಠೀ ದೀಕ್ಷೆಯನ್ನೆ ಪಡೆದು ಬಂದಂತೆ. ಜೊತೆಗೆ ಕನ್ನಡದ ಬಗ್ಗೆ ಅಸಡ್ಡೆಯನ್ನು ಬೆಳೆಯಿಸಿಕೊಳ್ಳುತ್ತಿದ್ದುದೇ ಹೆಚ್ಚು! ಇಂಥ ಸ್ಥಿತಿಯಲ್ಲಿ ಕನ್ನಡ ಸಸಿಯು ಚಿಗುರಿದ್ದುದು ಟ್ರೇನಿಂಗ್ ಕಾಲೇಜಿನ ಆವಾರದಲ್ಲಿ ಮಾತ್ರ. ಅಲ್ಲಿಯ ಶಿಕ್ಷಕರು ಕನ್ನಡದ ಮೇಲಿನ ನಿಷ್ಠೆಯನ್ನು ಅವಿಚ್ಛಿನ್ನವಾಗಿ ಕಾಯ್ದುಕೊಂಡು ಬಂದಿದ್ದರು. ಟ್ರೇನಿಂಗ್ ಕಾಲೇಜಿನ ನಂದಾದೀಪದಿಂದ ತನ್ನ ಕಿರುಸೊಡರನ್ನು ಹೊತ್ತಿಸಿಕೊಂಡು ಹೋದ ಟ್ರೇಂಡ್ (Trained) ಶಿಕ್ಷಕರು ಕನ್ನಡದ ಬೆಳಕನ್ನು ಹಳ್ಳಿ ಹಳ್ಳಿಗೆ ಕೊಂಡೊಯ್ದರು. ಅಲ್ಲಿಯ ಕನ್ನಡ ಪ್ರಭಾವ ಎಷ್ಟಿತ್ತು ಎಂದರೆ, ಚಿಂತಾಮಣಿ ಪೇಟಕರ ಕರಂದೀಕರ ಮೊದಲಾದ ಶೈಕ್ಷಣಿಕ-ಅಧಿಕಾರಿಗಳ ಮನೆಮಾತು ಮರಾಠಿ ಆಗಿದ್ದರೂ, ಕನ್ನಡದ ಏಳಿಗೆಗಾಗಿ ಅವರು ಶ್ರಮಿಸುವಂತಾಯ್ತು! ಹೀಗೆ ಕನ್ನಡಾಭಿಮಾನದ ದೀಕ್ಷಾಮಂದಿರವಾಗಿದ್ದ ಈ ಟ್ರೇನಿಂಗ್ ಕಾಲೇಜನ್ನು ೧೮೮೬ರಲ್ಲಿ ವೆಂಕಣ್ಣನು ಪ್ರವೇಶಿಸಿದನು. ಅವನಿಗೆ ಕನ್ನಡ ಭಾಷೆ-ಸಾಹಿತ್ಯಗಳನ್ನು ಕಲಿಸಿದವರು ಧೋಂಡೋ ನರಸಿಂಹ ಮುಳಬಾಗಲರು. ಇತಿಹಾಸ ವಿಷಯದ ಅಧ್ಯಾಪಕರಾಗಿದ್ದ ರಾ.ಹ. ದೇಶಪಾಂಡೆಯವರು ವೆಂಕಣ್ಣನಲ್ಲಿಯ ಲೇಖನ ಕಲೆಯನ್ನು ಕುದುರಿಸಿದರು. ಇವರಿಬ್ಬರಿಗಿಂತ ಹೆಚ್ಚು ಪ್ರಭಾವವನ್ನು ಬೀರಿದವರೆಂದರೆ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ರಾವಜೀ ಬಾಳಾಜೀ ಕರಂದೀಕರು.

ಕ್ರಿ.ಶ. ೧೮೮೯ರಲ್ಲಿ ಟ್ರೇ.ಕಾ. ಶಿಕ್ಷಣವನ್ನು ಮುಗಿಸಿದ ಮೇಲೆ ಶಿರಗುಪ್ಪೆಯ ಪ್ರಾಥಮಿಕ ಶಾಲೆಯಲ್ಲಿ ವೆಂಕಣ್ಣನ ಮಾಸ್ತರಿಕೆಯು ಮೊದಲಾಯಿತು. ಜೀವೂಬಾಯಿಯೊಡನೆ ಮದುವೆಯೂ ಆಯಿತು. ಯೌವನಕಾಲ. ಅನುಕೂಲೆಯಾದ ಸಹಧರ್ಮಿಣಿ. ಪ್ರೀತಿಯ ಶಾಲಾ ಶಿಕ್ಷಣದ ಕೆಲಸ. 'ಕೆಲಸದಲ್ಲಿ ನನ್ನ ಪ್ರೀತಿ ಹೆಚ್ಚು, ನನ್ನಿಷ್ಟಕ್ಕೆ ನಾನಿರುವುದರಲ್ಲಿ ನನ್ನ ಆಸಕ್ತಿ ಬಹಳ. ಕೆಲಸ ಬಿಟ್ಟು ಸಿಕ್ಕಾಗ ಸಿಕ್ಕತ್ತ, ಸುಮ್ಮನೆ ಎಡತಾಕುವ ಚಾಳಿಯಂತೂ ನನಗೆ ಗೊತ್ತೇ ಇಲ್ಲ. ಒಟ್ಟಿಗೆ ನಾನು ನನ್ನ ಜೀವನಾಧಾರವಾದ ಶಿಕ್ಷಣದ ಕೆಲಸವನ್ನು ನಿರ್ವಂಚನೆಯಿಂದ ಮಾಡುತ್ತಲಿದ್ದೆ' ಎಂಬುದಾಗಿ ಗಳಗನಾಥರು ತಮ್ಮ ಆಗಿನ ದಿನಗಳನ್ನು ಬಣ್ಣಿಸಿದ್ದಾರೆ.

ವೆಂಕಣ್ಣ ಮಾಸ್ತರರ ಮುಂದಿನ ಹತ್ತು ವರ್ಷದ ಜೀವನ ಸುಖವಾಗಿ ಸಾಗಿತು. ಮುಂಡರಗಿ, ಉಪ್ಪಿನ ಬೆಟಗೇರಿ, ಬಂಕಾಪುರ, ನರೇಂದ್ರ ಮೊದಲಾದ ಊರುಗಳಲ್ಲಿ ಮಾಸ್ತರಿಕೆಯು ಮುಂದುವರಿಯಿತು. ಜಿಲ್ಲಾ ಸ್ಥಳವಾದ ಮತ್ತು ತಮ್ಮ ಗುರುಗಳಿರುತ್ತಿದ್ದ ಧಾರವಾಡ ನಗರಕ್ಕೆ ಮೇಲಿಂದ ಮೇಲೆ ಹೋಗಿ ಬರುತ್ತಿದ್ದರು. ರಾ. ಹ. ದೇಶಪಾಂಡೆಯವರ ವಿಶೇಷ ಪರಿಶ್ರಮದ ಫಲವಾಗಿ ಸ್ಥಾಪನೆಗೊಂಡಿದ್ದ ವಿದ್ಯಾವರ್ಧಕ ಸಂಘವು (೧೮೯೦) ಇನ್ನೊಂದು ಆಕರ್ಷಣೆಯಾಗಿದ್ದಿತು.

ಕರ್ನಾಟಕ ವಿದ್ಯಾವರ್ಧಕ ಸಂಘ! ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವ ಯಾವುದೇ ಸಂದರ್ಭವಿರಲಿ, ಅದನ್ನು ಹೆಸರಿಸದೆ ಮುಂದುವರಿಯು ವಂತಿಲ್ಲ. ಟ್ರೇನಿಂಗ್ ಕಾಲೇಜಿನ ಕೆಲವು ಅಧ್ಯಾಪಕರೇ ಈ ಸಂಘದ ಸ್ಥಾಪನೆಯ ಕಾರ್ಯದಲ್ಲಿ ಮುಂದಾದರು. ಕನ್ನಡಿಗರಲ್ಲಿಯೇ ಮನೆಮಾಡಿಕೊಂಡಿದ್ದ ಸ್ವಭಾಷೆಯ ಮೇಲಿನ ಅನಾದರವನ್ನು ಕಳೆಯುವಲ್ಲಿ ಸಂಘವು ಮಾಡಿದ ಕಾರ್ಯ ಅಷ್ಟಿಷ್ಟಲ್ಲ. ಟ್ರೇ.ಕಾ.ನಲ್ಲಿ ಕನ್ನಡ ನುಡಿಯ ಬಗ್ಗೆ ಆಸ್ಥೆ–ಅಭಿಮಾನಗಳು ಕುದುರಿದುವಾದರೆ, ಸಂಘದಲ್ಲಿ ಅದಂತೂ ಸರಿಯೆ. ಜೊತೆಗೆ ಸಾಹಿತ್ಯ ನಿರ್ಮಿತಿಗೆ ಪ್ರೋತ್ಸಾಹಕೊಡುವ ಕಾರ್ಯ ನಡೆಯಿತು. ಯುದ್ಧರಂಗದ ಸೋಲಿನ ಪರಿಸ್ಥಿತಿಯಲ್ಲಿ ಯಾರೊಬ್ಬ ಸೈನಿಕನು ಧೈರ್ಯದಿಂದ ಧ್ವಜವನ್ನು ಎತ್ತಿ ಹಿಡಿದಾಗ, ಇತರ ಸೈನಿಕರು ಹುರುಪುಗೊಂಡು ಯುದ್ಧಕ್ಕೆ ಅಣಿಯಾಗುವಂತೆ, ಅಂದಿನ ಕನ್ನಡ ಲೇಖಕರು, ಕಾರ್ಯಕರ್ತರು ಈ ಕನ್ನಡ ಧ್ವಜಸ್ತಂಭವನ್ನು ಸುತ್ತುವರಿದರು.

ಕನ್ನಡದಲ್ಲಿ ಗ್ರಂಥರಚನೆ ಮತ್ತು ಅವುಗಳ ವಾಚನ-ಪ್ರಸಾರಗಳೇ ಸಂಘದ ಮುಖ್ಯ ಧ್ಯೇಯವಾಗಿದ್ದುವು. ಗ್ರಂಥಕರ್ತರಿಗೆ 'ಇನಾಮು' ಕೊಡುವುದು, ಗ್ರಂಥಗಳನ್ನು ಮುದ್ರಿಸುವುದು, ಪತ್ರಿಕೆ ಹೊರಡಿಸುವುದು ಮತ್ತು ವಾಚನಾಲಯಗಳನ್ನು ಸ್ಥಾಪಿಸುವುದು - ಇವು ಆ ಧ್ಯೇಯದ ರೂಪ-ರೇಷೆಗಳಾಗಿದ್ದವು. ಅದರಿಂದ ಲೇಖಕರಿಗೆ ಮರುಭೂಮಿಯಲ್ಲಿ ಜಲಾಶಯವನ್ನು ಕಂಡಂತಾಯಿತು. ಕನ್ನಡದಲ್ಲಿ ಸ್ವತಂತ್ರ ಕೃತಿಗಳನ್ನು ರಚಿಸಬೇಕೆಂಬ ಆಸೆಯನ್ನು ಹಲವರಲ್ಲಿ ಹುಟ್ಟಿಸಿತು.

ಕನ್ನಡದಲ್ಲಿ ಸರಿಯಾಗಿ ನಾಲ್ಕು ವಾಕ್ಯ ಬರೆಯುಲು ಅಥವಾ ಮಾತಾಡಲು ಬಾರದಿದ್ದ ಕಾಲವದು. ಅಂತೆಯೇ ಸಂಘವು ಕನ್ನಡದಲ್ಲಿ ಭಾಷಣ, ಲೇಖನಗಳ ವಿವಿಧ ಸ್ಪರ್ಧೆಗಳನ್ನು ಪ್ರತಿವರ್ಷ ನಡೆಯಿಸುತ್ತಿದ್ದಿತು. ಇಂಥ ಅಭಿವ್ಯಕ್ತಿಗೆ ಹಳಗನ್ನಡ ಕವಿ-ಕಾವ್ಯಗಳಲ್ಲದೆ ನಗರಸಭೆಗಳ ಕಾರ್ಯದಂತಹ ಆಧುನಿಕ ವಿಷಯಗಳನ್ನು ಆರಿಸಲಾಗುತ್ತಿತ್ತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ, ವಾರ್ಷಿಕೋತ್ಸವದ ದಿವಸ, ಮೈಸೂರು ವಿಭಾಗದಿಂದ ವಿದ್ವಾಂಸರನ್ನು ಕರೆಯಿಸಿ, ಪಾರಿತೋಷಕಗಳನ್ನು ಕೊಡಿಸುತ್ತಿದ್ದರು. ವೆಂಕಣ್ಣಮಾಸ್ತರರು ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಹೀಗೆ ೯-೧೦ ವರ್ಷ ತಪ್ಪದೇ ಅವರು ನಾನಾ ಉಚಿತಗಳನ್ನು ಪಡೆದದ್ದರಿಂದ ಸಂಘದವರು ಅವರಿಗೆ 'ಪಂಢರಪುರದ ವಾರಕರಿ' ಎಂದು ವಿನೋದದಿಂದ ಅನ್ನುತ್ತಿದ್ದರಂತೆ.

ವೆಂಕಣ್ಣ ಮಾಸ್ತರರ ಲೇಖನಿಯ ಉಗಮ ಇಲ್ಲಿದೆ. ಪುಸ್ತಕ ರೂಪದಲ್ಲಿ ಮಾತ್ರ ಮೊದಲಿಗೆ ಹೊರಬಂದ ಕೃತಿ ಪದ್ಯಾರ್ಥಸಾರ ಎಂಬುದು (೧೮೯೬). ಇದು ಆರನೆಯ ಇಯತ್ತೆಯ ವಿದ್ಯಾರ್ಥಿಗಳಿಗಾಗಿ ಬರೆದ ಕೈಗನ್ನಡಿ. ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಬರೆದ ಇನ್ನೊಂದು ಕೃತಿಯೆಂದರೆ **ಲಘು ನಿಬಂಧ ಸಂಗ್ರಹ ಮತ್ತು ಪತ್ರವ್ಯವಹಾರ** (೧೮೯೯). ಇದರಲ್ಲಿ ಮೊದಲಿಗೆ ನಿಬಂಧ ರಚನೆಯ ಪದ್ಧತಿಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ವಿದ್ಯಾರ್ಥಿಗಳು ಸಂಸ್ಕೃತ ಇಲ್ಲವೆ ಅನ್ಯದೇಶೀಯ ಶಬ್ದಗಳನ್ನು ಅಗತ್ಯಕ್ಕಿಂತ ಹೆಚ್ಚು ಬೆರೆಸುವುದರಿಂದ ಭಾಷೆ ಚಂದವಾಗುತ್ತದೆಂಬ ಭಾವನೆಯನ್ನು ಬಿಟ್ಟು ಅಚ್ಚಗನ್ನಡ ಭಾಷೆಯನ್ನು ಬರೆಯಬೇಕು ಹಾಗೂ ಶೈಲಿಯು ಆವೇಶಯುಕ್ತವಾಗಿರಬೇಕು, ಅಳುಬುರುಕ ಭಾಷೆ ಇರಕೂಡದು - ಎಂದು

ಅದರಲ್ಲಿ ಹೇಳಿದೆ. ಇದೇ ಬಗೆಯ ಭಾಷೆಯನ್ನು ಗಳಗನಾಥರು ಮುಂದೆ ತಮ್ಮ ಗ್ರಂಥಗಳಲ್ಲಿ ಬಳಸಿದರೆಂಬುದನ್ನು ಗಮನಿಸಬೇಕು.

ಈ 'ಸಂಗ್ರಹ'ದಲ್ಲಿ ಬಂದಿರುವ ೪೫ ನಿಬಂಧಗಳೊಳಗೆ ಹೆಚ್ಚಿನವು ಚಿಂತನಪರ ನಿಬಂಧಗಳಾಗಿವೆ. ಸ್ತ್ರೀಶಿಕ್ಷಣ, ದೇಶಾಭಿಮಾನ, ವಕ್ತೃತ್ವಕಲೆ ಸತ್ಸಮಾಗಮ, ಗ್ರಂಥಾವಲೋಕನ – ಮುಂತಾದವುಗಳನ್ನು ಕುರಿತು ನಾವು ಅವರ ಪ್ರಗತಿಪರ ವಿಚಾರಗಳನ್ನು ಕಾಣುತ್ತೇವೆ. ಅಲ್ಲದೆ, ಅನೇಕ ಕಡೆಗಳಲ್ಲಿ ಅವರ ಸ್ವಂತದ ವ್ಯಕ್ತಿತ್ವ, ಒಲವು-ನಿಲುವು ಹಾಗೂ ಜೀವನ ಧ್ಯೇಯಗಳನ್ನು ಬಿಂಬಿಸುವಂತಹವಾಗಿವೆ.

'ಏನಾದರೂ ಹೊತ್ತು ಸಿಕ್ಕರೆ ನನ್ನ ಯೋಗ್ಯತೆಯ ಸಾಮಾನ್ಯ ಜನರೇ ಮನಮೆಚ್ಚಿ ಓದುವಂತಹ ಪುಸ್ತಕಗಳನ್ನು ಬರೆಯಬೇಕೆಂದು' ಇಟ್ಟುಕೊಂಡ ಅವರ ಆಗಿನ ನಿಲುಮೆಗೆ ಅನುಗುಣವಾಗಿ **ಉತ್ತರರಾಮ ಚರಿತ್ರಸಾರ*** ಹಾಗೂ **ಗಿರಿಜಾ ಕಲ್ಯಾಣ** ಎಂಬ ಎರಡು ಪುಸ್ತಕಗಳು ಹೊರಬಂದವು. ಅವನ್ನು ನೋಡಿ, 'ಗಳಗನಾಥನು ನೆಟ್ಟಗೆ ಬರೆಯುವನು' ಎಂದು ಜನರು ಅನ್ನಹತ್ತಿದರಂತೆ.

ಇದೆಲ್ಲ ವೆಂಕಣ್ಣ ಮಾಸ್ತರರ ಬರವಣಿಗೆಯಾಯಿತು! ಲೇಖಕ ಗಳಗನಾಥರ ಉದಯವಾದದ್ದು, **ಪದ್ಮನಯನಾ** ಎಂಬ ಸ್ವತಂತ್ರ ಕಾಲ್ಪನಿಕ ಕಾದಂಬರಿಯಿಂದ (೧೮೯೮). ಈ ಕೃತಿಯ ಪ್ರಸ್ತಾವನೆಯಿಂದ ಅದರ ಹಿನ್ನೆಲೆ ಮತ್ತು ಪ್ರೇರಣೆಯ ಬಗೆಯನ್ನು ಅರಿತುಕೊಳ್ಳಬಹುದು.

'ಮಾತೃಭಾಷಾ ಸೇವೆಯನ್ನು ಮಾಡಲೆಳಸಿ ನಾನು ಈ ಕಾದಂಬರಿ ರೂಪವಾದ ಅಲ್ಪಪ್ರಯತ್ನವನ್ನು ಮಾಡಿರುತ್ತೇನೆ.... ಈ ಕಾದಂಬರಿಯು ಮುಖ್ಯವಾಗಿ ಶೃಂಗಾರ – ವೀರ – ಶೋಕಾದ್ಭುತ ರಸಪ್ರಾಧಾನ್ಯವಾಗಿರುವುದು. ಕಥಾ ಸಂವಿಧಾನವು ನನ್ನ ಕಲ್ಪನೆಯದಿದ್ದು ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟಿವೆ.

---

* ಈ ಕೃತಿಗೆ, ೧೮೯೨ರಲ್ಲಿ ಪ್ರಕಟವಾದ, ಮುಳಬಾಗಲರ ಉತ್ತರ ರಾಮಚರಿತದ ಕನ್ನಡ ನಾಟಕಾನುವಾದವು ಮೂಲಸಾಮಗ್ರಿಯನ್ನು ಒದಗಿಸಿರಲೂಬಹುದು.

ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ಎಂಜಲವು ಬಹುತರವಾಗಿ ದೊರೆಯಲಾರದು.'

ಈ ವಿವರಣೆಯನ್ನು ಕೊಟ್ಟಿದ್ದರ ಕಾರಣವೆಂದರೆ, ಸ್ವತಂತ್ರವಾದ ಕಾದಂಬರಿಯನ್ನು ಬರೆದವರಿಗೆ ಇನಾಮು ಕೊಡುವುದಾಗಿ ಸಂಘವು ಸಾರಿದ್ದಿತು. ಹೀಗೆ ಗಳಗನಾಥರ ಬರವಣಿಗೆಗೆ ಪ್ರೇರಣೆ ಸಂಘದಿಂದಲೇ ದೊರೆಯಿತಲ್ಲದೆ, ಕಾರ್ಯಕರ್ತರಾದ ರಾ.ಹ. ದೇಶಪಾಂಡೆ, ವೆಂಕಟ ರಂಗೋಕಟ್ಟಿ, ಧೋ.ನ. ಮುಳಬಾಗಲ ಇವರು ಹಸ್ತಪ್ರತಿಯನ್ನು ಓದಿ ಪ್ರೋತ್ಸಾಹಿಸಿದ್ದಾರೆ.

ರಮ್ಯತೆಯೇ ಪ್ರಧಾನವಾಗಿರುವ ಈ ಕೃತಿಯು* ಸಂಸ್ಕೃತದಲ್ಲಿ ಭಾಷಾಂತರವಾಗಿದೆ. ಹಳ್ಳಿಯ ಜನರು ಆ ಕಾಲಕ್ಕೆ ಇದರ ಆಟಗಳನ್ನು ಕಟ್ಟಿ ಆಡಿದರಂತೆ. ಅದಕ್ಕಿಂತ ಹೆಚ್ಚಾಗಿ ಈ ಕೃತಿಯು ಅನ್ಯ ಲೇಖಕರನ್ನು ಸೃಷ್ಟಿಸಿತು!

"ಪ್ರಬುದ್ಧ ಪದ್ಮನಯನಾ - ಗಳಗನಾಥರ ಪ್ರಥಮ ಕಾದಂಬರಿ. ನಾನು ಓದಿದ ಪ್ರಪ್ರಥಮ ಕಾದಂಬರಿಯೂ ಅದೇ. ಈಗಲೂ ನನಗೆ ನೆನಪಿದೆ. ಮನೆಯ ಪಡಸಾಲೆಯಲ್ಲಿ ಹೊಗೆ ಕಾರುವ ಚಿಮಣಿದೀಪವೆದುರು ಕುಳಿತು ರಾತ್ರಿಯಿಡೀ ನಿದ್ದೆಗೆಟ್ಟು ನಾನು ಆ ಕಾದಂಬರಿಯನ್ನೋದಿ ಮುಗಿಸಿದ್ದೆ. ಗಳಗನಾಥರ ಆ ರಮ್ಯ ಕಥಾಲೋಕ, ವಿಚಿತ್ರ ಹೆಸರುಗಳ ಅವರ ಪಾತ್ರಗಳು. ವಾಸ್ತವ ಜೀವನವನ್ನು ಮರೆಯಿಸಿ ವಾಚಕರನ್ನು ಸುಂದರವಾದ ಕಲ್ಪನಾ ಪ್ರಪಂಚಕ್ಕೆ ವಿಹಾರಮಾಡಿಸುವ ಕೈಚಳಕ - ಇವು ನನ್ನಲ್ಲಿ ಸಾಹಿತ್ಯ ಪ್ರೀತಿಯನ್ನು ಹುಟ್ಟಿಸಿದುವು. ನಾನು ಕಾದಂಬರಿಕಾರನಾಗಲು ಮೂಲಪ್ರೇರಣೆಯನ್ನೊದಗಿಸಿದ ಕೀರ್ತಿ ಗಳಗನಾಥರ 'ಪದ್ಮನಯನೆ'ಯದು!"

---

* ಹಲವು ಆವೃತ್ತಿಗಳನ್ನು ಕಂಡ ಈ ಕೃತಿಯ ನಾಲ್ಕನೆಯ ಮುದ್ರಣದ ಕಾಲಕ್ಕೆ (೧೯೨೩) ಗಳಗನಾಥರು ಇದನ್ನು 'ಪ್ರಬುದ್ಧ ಪದ್ಮನಯನಾ' ಎಂದು ಕರೆದರು. 'ಇನ್ನು ಮೇಲೆ ಪದ್ಮನಯನೆಯು ವೃದ್ಧೆ ಎಂಬ ವಿಶೇಷಣವನ್ನು ಪಡೆದು ಪ್ರಸಿದ್ಧವಾಗಲಿಕ್ಕಿಲ್ಲವೆಂದು ಯಾರು ಹೇಳಬೇಕು?' ಎಂದು ನಗೆಯಾಡಿದ್ದಾರೆ. ಸತ್ಯಮಾರ್ಗವನ್ನು ಬಿಂಬಿಸುವ ದೃಷ್ಟಿಯಿಂದ ಮುಂದಿನ ಆವೃತ್ತಿಗಳಲ್ಲಿ ಹೆಚ್ಚಿನ ವಿಷಯ ಸೇರಿಸಿದ್ದಾರೆ.

– ಇದು ಬಸವರಾಜ ಕಟ್ಟೀಮನಿಯವರ ಋಣಸಲ್ಲಿಕೆ. ಈ ಕಾದಂಬರಿ ಪ್ರಕಟವಾದ ೧೮೯೮ನೆಯ ವರ್ಷವು ಗಳಗನಾಥರ ಜೀವನದಲ್ಲಿ ಇನ್ನೊಂದು ಕಾರಣದಿಂದ ಗಮನಿಸುವಂತಹದಾಗಿದೆ. ಆಗ ಅವರು ನರೇಂದ್ರದಲ್ಲಿ ಶಿಕ್ಷಕರಾಗಿದ್ದರು. ಆರೇ ಮೈಲು ದೂರದಲ್ಲಿರುವ ಧಾರವಾಡದ ಸಾಹಿತ್ಯಿಕ ಸಂಪರ್ಕದಿಂದಾಗಿ ದಿನಗಳು ಉಲ್ಲಸಿತವಾಗಿ ಕಳೆಯುತ್ತಿದ್ದ ಕಾಲದಲ್ಲಿ ಜೀವನದ ಪ್ರಥಮ ಆಘಾತ ಒದಗಿತು. ಹೆಂಡತಿಯು ತೀರಿಕೊಂಡಾಗ ಅವರ ಮನಸ್ಸು ಬರಿದಾಯಿತು. ಲೇಖನ, ವಾಚನ ಯಾವುದೂ ಬೇಡವಾಯಿತು.

ಅಲ್ಲಿಂದ ಬಂಕಾಪುರಕ್ಕೆ ವರ್ಗವಾಗಿ ಬಂದರು. ಹಿರಿಯರ ಒತ್ತಾಯಕ್ಕೆ ಮಣಿದು ಮರುಮದುವೆಯಾದರು. ಅವರೇ ಗಂಗೂಬಾಯಿ. ಗಾಲಿ ಮುರಿದಿದ್ದ ಬದುಕಿನ ಬಂಡಿ ಮತ್ತೆ ಮುಂದುವರಿಯಿತು. ಆಗಲೇ ಅವರು ೩೦ ರೂಪಾಯಿ ಸಂಬಳದ 'ಹೆಡ್‌ಮಾಸ್ತರಿಕೆಯ ಬಡತಿಯನ್ನು ಹೊಂದಿದ್ದರು. ತಾವು ಮುಖ್ಯರಾಗಿದ್ದ ಶಾಲೆಯನ್ನು ಸುಧಾರಿಸಿ, ತಮಗೆ ಒಪ್ಪಿದ ರೀತಿಯಲ್ಲಿ ಶಿಸ್ತು-ವ್ಯವಸ್ಥೆಗಳನ್ನು ರೂಢಿಸುವುದಕ್ಕೆ ಅವಕಾಶ ದೊರೆಯಿತು. ಅದು ಬಂಕಾಪುರ ಶಾಲೆಯಲ್ಲಿಯೇ ಕ್ರಿಯಾರೂಪ ತಾಳಿತು. ಮುಂಡರಗಿ, ಗುತ್ತಲಗಳಲ್ಲಿ ವಿಸ್ತಾರವನ್ನು ಪಡೆಯಿತು. ಆಗಿನ ಅವರ ಶಿಕ್ಷಣ ಪದ್ಧತಿ ಹೇಗಿದ್ದಿತು ಎಂಬುದನ್ನು ತಿಳಿಯಲಿಕ್ಕೆ ಸ್ಪಷ್ಟ ನಿದರ್ಶನಗಳಿಲ್ಲದಿದ್ದರೂ ಶಿಕ್ಷೆಯು ಎಂಬ ಅವರ ಲೇಖನವೊಂದರ ಮೂಲಕ ಹಲವು ಅಂಶಗಳು ಹೊರಪಡುತ್ತವೆ.

ಆಗಿನ ದಿನಗಳಲ್ಲಿ ಎಲ್ಲ ಶಿಕ್ಷಕರೂ ಟ್ರೇನಿಂಗ್ ಕಾಲೇಜಿನ ಕಟ್ಟೆಹತ್ತಿದವರಿರಲಿಲ್ಲ. ಅವರಲ್ಲಿ ಅನೇಕರು 'ಬೇಕಾದಾಗ ಸಾಲಿಗೆ ಬರುವ ಮೇಜಿನ ಮೆಲೆ ಕಾಲು ಚಾಚಿ ಖುರ್ಚಿಯ ಮೇಲೆ ಬೊಕ್ಕತಲೆಯಿಂದ ಕುಳಿತು ಎಲೆ ಅಡಿಕೆ ತಿನ್ನುವ, ಅಂಗಿಯ ಕಳಿಯನ್ನು ಕಟ್ಟಿಕೊಳ್ಳದ ವಿದ್ಯಾರ್ಥಿಗಳ ಸ್ವೇಚ್ಛಾಚಾರವನ್ನು ಪ್ರತಿಬಂಧಿಸಲಾರದ ಮಾಸ್ತರರಾಗಿದ್ದರು. ವಾರ್ಷಿಕ ಪರೀಕ್ಷೆಯಲ್ಲಿ ಹ್ಯಾಗಾದರೂ ವಿದ್ಯಾರ್ಥಿಗಳು ಪಾಸಾಗಿ ತಮಗೆ ಬಡತಿ ದೊರೆತರಾಯಿತೆಂದು ಅವರು ಸಾಧಾರಣವಾಗಿ ತಿಳುಕೊಂಡಿರುವರು. ಅಂದ ಬಳಿಕ ಅವರ ಪಾಲಿಗೆ ವಿದ್ಯಾರ್ಥಿಯು ಜಾಣನಾದ ಭಾಗ್ಯವೂ ಅಷ್ಟೇ, ದಡ್ಡನಾದ ಹಾನಿಯೂ ಅಷ್ಟೇ, ಸದಾಚಾರಿಯಾದ್ದರಿಂದ ಬರುವ ಕೀರ್ತಿಯೂ ಅಷ್ಟೇ.'

'ಇವರ ಇನ್ನೊಂದು ವೈಶಿಷ್ಟ್ಯವೆಂದರೆ ಕೈಯಲ್ಲಿ ಛಡಿ ಹಿಡಿದು ಮಾತುಮಾತಿಗೆ ಅದನ್ನು ಪ್ರಯೋಗಿಸುವುದು. ದೇಹದಂಡವನ್ನು ಮಾಡದೇ ಒಂದು ತಾಸಾದರೂ ಕೆಲಸ ನಡೆಸಲಾರದ ಅಸತ್ ಶಿಕ್ಷಕರ ವಿಷಯವಾಗಿ ನನ್ನಲ್ಲಿ ತಿರಸ್ಕಾರವು ಉತ್ಪನ್ನವಾಗುತ್ತದೆ. ಇಂಥ ನನ್ನ ಉಪಶಿಕ್ಷಕರು ಕೋಪ ಪರವಶರಾಗಿ ಹೇಸದೇ ಈ ನೀಚ ಉಪಾಯವನ್ನು ಮಾಡುವಾಗ್ಗೆ ಬಹುತರವಾಗಿ ನಾನು ಎಂದೂ ಕ್ಷಮಿಸಿ ಪ್ರತಿಬಂಧಿಸದೆ ಬಿಟ್ಟಿಲ್ಲ. ಆದರೆ ಇಂಥ ಪ್ರಸಂಗಗಳಿಂದ ನನಗೂ ನನ್ನ ಉಪಶಿಕ್ಷಕರಿಗೂ ವಿಶೇಷ ತರದ ವೈಮನಸ್ಸು ಉಂಟಾಗಿ ಕಡೆಗೆ ದುಷ್ಪರಿಣಾಮವು ಈ ಮುದ್ದತಿನವರೆಗೆ ಒದಗಲಿಲ್ಲೆಂಬುದು ಆನಂದದ ಸಂಗತಿಯು.'

ಉಪಶಿಕ್ಷಕರನ್ನು ಹೀಗೆ ನಿರೋಧಿಸುತ್ತಿದ್ದ ಗಳಗನಾಥರು ಸ್ವತಃ ಛಡಿಯನ್ನು ಹಿಡಿದು ಹುಡುಗರ ಮೇಲೆ ಪ್ರಯೋಗಿಸಲೆ ಇಲ್ಲವೇ?

'ಕಲಿಸುವಾಗ್ಗೆ ಬಹುತರ ನಾನು ಎಂದೂ ಕಯ್ಯಲ್ಲಿ ಛಡಿಯನ್ನು ಹಿಡಿದಿಲ್ಲ. ಕೋಪಪರವಶನಾದಾಗ್ಗೆ ಈ ಅನ್ಯಾಯದ ಉಪಾಯುವನ್ನು ಅಪರೂಪವಾಗಿ ಯೋಜಿಸಿರುವೆನು. ಯೋಜಿಸಿದ ನಂತರ ಪರಮಾವಧಿ ವ್ಯಸನವಾಗಿ ನನ್ನ ವಿದ್ಯಾರ್ಥಿಗಳ ಮುಂದೆ ನನ್ನ ನಾದಾನ್‌ತನವನ್ನು ಒಡನುಡಿದು ದುಃಖ ಪ್ರದರ್ಶನ ಮಾಡಿರುವೆನು: ನನ್ನ ಹನ್ನೊಂದು ವರ್ಷದ ನೌಕರಿಯ ಮುದ್ದತಿನಲ್ಲಿ ಎರಡು ಸಾರೆ (ಹಾಗೆ ಮಾಡಿದ್ದರಿಂದ) ನಾನು ಹುಡುಗರ ತಾಯಿತಂದೆಗಳ ಕ್ಷಮೆ ಬೇಡಬೇಕಾಯಿತು. ಕೆಲವು ಸಾರೆ ನನ್ನ ವಿದ್ಯಾರ್ಥಿಗಳ ಕ್ಷಮೆಯನ್ನೂ ಬೇಡಿರುವೆನು. ಈ ನೀಚ ಪ್ರಸಂಗಗಳು ನನ್ನ ಕಯ್ಯೊಳಗಿನ ವಿದ್ಯಾರ್ಥಿಗಳಿಗಿಂತ ಉಪಶಿಕ್ಷಕರ ಕಯ್ಯೊಳಗಿನ ವಿದ್ಯಾರ್ಥಿಗಳಲ್ಲಿ ಹೆಚ್ಚು. ಕಿಂಬಹುನಾ ಎಲ್ಲ ಪ್ರಸಂಗಗಳು ಅವರಲ್ಲಿಯೆ ಒದಗಿರುವವೆಂದು ನನ್ನ ಸ್ಮರಣದಲ್ಲಿರುವದು.'

ಮಕ್ಕಳನ್ನು ಹೊಡೆಯುವುದಕ್ಕಿಂತ ಹೊಡೆತದ ಹೆದರಿಕೆ ಅವರಲ್ಲಿ ಮೂಡುವಂತೆ ಶಿಕ್ಷಕರ ನಡತೆ ಇರಬೇಕು ಎಂಬುದು ಗಳಗನಾಥರ ಆಶಯುವಾಗಿದ್ದಿತು. ಅದಕ್ಕಾಗಿ ಅವರು 'ಹೊತ್ತಿಗೆ ಸರಿಯಾಗಿ ಸಾಲೆಗೆ ಬರೋಣ, ಉಡಿಗೆ ತೊಡಿಗೆಗಳನ್ನು ಸ್ವಚ್ಛವಾಗಿಯೂ ವ್ಯವಸ್ಥಿತವಾಗಿಯೂ ಇಟ್ಟುಕೊಳ್ಳೋಣ, ಶಿಕ್ಷಣದ ಸಾಧನಗಳನ್ನು ತಕ್ಕಂತೆ ಉಪಯೋಗಿಸೋಣ'- ಇವುಗಳ ಕಡೆಗೆ ತಾವೂ, ತಮ್ಮ ಉಪಶಿಕ್ಷಕರೂ ಗಮನಕೊಡುತ್ತಿದ್ದುದಾಗಿ

ಹೇಳಿದ್ದಾರೆ. ವಿದ್ಯಾರ್ಥಿಗಳ ಅವ್ಯವಸ್ಥೆಯ ಸಣ್ಣ ಸಣ್ಣ ಅಂಶಗಳಿಗೂ ಗಮನಕೊಟ್ಟು ಅವರನ್ನು ಎಚ್ಚರಗೊಳಿಸುತ್ತಿದ್ದರು. ಹುಡುಗರಿಗೆ ಒಂದಿಲ್ಲೊಂದು ಅಭ್ಯಾಸದ ಕೆಲಸಕೊಟ್ಟು ಅವರ ಲಕ್ಷ್ಯವು ಬೇರೆಡೆಗೆ ಹರಿಯದಂತೆ ಸೋಮಾರಿಗಳಾಗದಂತೆ ನೋಡಿಕೊಳ್ಳುತ್ತಿದ್ದರು.

ಬಂಕಾಪುರದ ಶಾಲೆಯಲ್ಲಿ ನಡೆದ ಒಂದು ಘಟನೆಯಿದು - ಗಳಗನಾಥರ ಚಾಕು ೬ನೆಯ ವರ್ಗದಲ್ಲಿದ್ದಾಗ ಕಳುವಾಯಿತು. ನಿತ್ಯವೂ ಉಪಯೋಗಿಸುತ್ತಿದ್ದ ಆ ಚಾಕುವಿನ ಮೇಲೆ ಅವರದು ವಿಶೇಷ ಮೋಹ. ಆಗ ಕ್ಲಾಸಿನಲ್ಲಿ ದೃಷ್ಟಾಂತಗಳನ್ನು ಕೊಟ್ಟು ಕಳವಿನ ಬಗ್ಗೆ ಮಾರ್ಮಿಕವಾದ ಪಾಠ ಹೇಳಿದಾಗ, ಕಳವು ಮಾಡಿದ ವಿದ್ಯಾರ್ಥಿ ಅಳುತ್ತ ಅದನ್ನು ಅವರ ಮೇಜಿನ ಮೇಲೆ ಇಟ್ಟು ಕ್ಷಮೆ ಬೇಡಿದನಂತೆ.

ಆಗಿನ ಅವರ ಕೆಲಸದ ಬಗ್ಗೆ, ಪ್ರಿನ್ಸಿಪಾಲ್ ಕರಂದೀಕರು 'ಗಳಗನಾಥನು ಸಮರ್ಥ ಶಿಕ್ಷಕನು. ಅಲ್ಲದೆ ಗೊತ್ತಿದ್ದ ವಿಷಯವನ್ನು ಸರಿಯಾಗಿ ಬರೆಯುವವನು' ಎಂದು ತಿಳಿದದ್ದರ ಪರಿಣಾಮವಾಗಿ ಅವರನ್ನು ಒಂದು ವಿಶೇಷ ಕಾರ್ಯದಲ್ಲಿ ತೊಡಗಿಸಿದರು. ಕನ್ನಡ ಪಠ್ಯಪುಸ್ತಕಗಳನ್ನು ನವೀಕರಿಸುವ ಸರಕಾರೀ ಕಮಿಟಿಯಲ್ಲಿ ಕರಂದೀಕರರು ಕನ್ನಡ ಮೆಂಬರಿದ್ದು ಗಳಗನಾಥರನ್ನು 'ವಿಶೇಷ ಸಹಾಯಕ'ರೆಂಬುದಾಗಿ ಪುಣೆಗೆ ಕರೆದೊಯ್ದರು. ಗಳಗನಾಥರು ಪುಣೆಯಲ್ಲಿದ್ದುದು ಡಿಸೆಂಬರ್ ೧೯೦೪ರಿಂದ ಮಾರ್ಚ್, ೧೯೦೫ರ ವರೆಗೆ. ಅಲ್ಲಿ ಗುರುವರ್ಯ ಕರಂದೀಕರರು 'ನನ್ನನ್ನು ಮೈಮುರಿದು ದುಡಿಸಿ ನನಗೆ ಲೇಖನ ಕಲೆಯ ಓಡಿತಗಳು ತಿಳಿಯಲಿಕ್ಕೆ ಆಸ್ಪದ ಮಾಡಿಕೊಟ್ಟರು' ಎಂಬುದಾಗಿ ಗಳಗನಾಥರು ಆ ವಾಸ್ತವ್ಯವನ್ನು ನೆನೆದಿದ್ದಾರೆ.

ಪುಣೆಯ ವಾಸ್ತವ್ಯ ಇನ್ನೊಂದು ದೃಷ್ಟಿಯಿಂದ ವಿಶೇಷ ಪ್ರಯೋಜನಕಾರಿಯಾಯಿತು. ಮರಾಠಿಯಲ್ಲಿ ಹರಿನಾರಾಯಣ ಆಪ್ಟೆಯವರ ಕಾದಂಬರಿಗಳು ಜನಪ್ರಿಯವಾಗಿದ್ದ ಕಾಲವದು. ಗಳಗನಾಥರು ಆ ಮುಂದೆ ಕನ್ನಡದಲ್ಲಿ ತಂದ, ಆಪ್ಟೆಯವರ 'ವಿಷಃಕಾಲ,' 'ಚಂದ್ರಗುಪ್ತ', 'ರೂಪ ನಗರಚೀ ರಾಜ ಕನ್ಯಾ' ಮುಂತಾದ ಕಾದಂಬರಿಗಳು ಆಗಲೇ ಪ್ರಕಟವಾಗಿದ್ದುವು. ಗಳಗನಾಥರ ಆದ್ಯ ಅನುವಾದಿತ ಕಾದಂಬರಿಯಾದ **ಕಮಲ ಕುಮಾರಿಯ** ಮೂಲ ಕೃತಿ 'ಗಡ ಆಲಾ ಪಣ ಸಿಂಹ ಗೇಲಾ' ಅದೇ ಹೊರಬಂದಿದ್ದಿತು (೧೯೦೩). ಅದನ್ನು ಅವರು ಒಂದೇ ಮೆಟ್ಟಿಗೆ ಓದಿ ಮುಗಿಸಿದರು. ಅಲ್ಲದೆ

ಆ ಕಾದಂಬರಿಯ ಉತ್ಪತ್ತಿಯ ಮೂಲ ಕಾರಣವಾದ ಸಿಂಹಗಡವನ್ನು ನೋಡುವ ಸುಯೋಗವೂ ಅವರಿಗೆ ಒದಗಿತು.

ಪಠ್ಯಪುಸ್ತಕದ ಕಾರ್ಯವನ್ನು ಪೂರೈಸಿ ಗಳಗನಾಥರು ಗುತ್ತಲಕ್ಕೆ ಮುಖ್ಯ ಶಿಕ್ಷಕರಾಗಿ ಬಂದರು. ಆ ಹುದ್ದೆಯಲ್ಲಿ ಕೆಲಸ ಮಾಡಿದ ಕೊನೆಯ ಊರು ಎಂದರೆ ಗುತ್ತಲವೇ. ಅಲ್ಲಿ ಕಳೆದ ಮೂರು ವರ್ಷಗಳು ಅವರ ಮಾಸ್ತರಿಕೆಯ ವೈಭವದ ಕಾಲವೆನ್ನಬೇಕು. ಅವರು ಆದರ್ಶ ಶಿಕ್ಷಕರಾಗಿದ್ದ ರೆನ್ನುವುದರ ಕುರುಹುಗಳು ಈ ಶಾಲೆಯಲ್ಲಿನ ಒಂದೆರಡು ಘಟನೆಗಳಿಂದ ಮತ್ತು ವರದಿಗಳಿಂದ ತಿಳಿದುಬರುವಂತಿವೆ. ಅಲ್ಲಿಗೆ ಬಂದ ಕೆಲವೇ ತಿಂಗಳುಗಳಲ್ಲಿ ತಮ್ಮ ಶಿಸ್ತು, ವ್ಯವಸ್ಥೆಗಳ ಮಂತ್ರದಂಡವನ್ನು ಮುಂದೆ ಮಾಡಿ ಶಾಲೆಯ ವಾತಾವರಣವನ್ನೆ ಬದಲಿಸಿಬಿಟ್ಟಿತು. ೬೫ ವರ್ಷಗಳಷ್ಟು ಹಿಂದಿನ 'ವಿಸಿಟ್ ಬುಕ್' ಸುದೈವದಿಂದ ಇನ್ನೂ ಶಾಲೆಯಲ್ಲಿ ಉಳಿದುಕೊಂಡಿದ್ದು ಅದರಲ್ಲಿರುವ ಕೆಲ ಅವತರಣಿಕೆಗಳು ಇಂತಿವೆ.

ದಿನಾಂಕ ೨೫ ಸೆಪ್ಟೆಂಬರ್ ೧೯೦೫ರಂದು, ಊರಿನ ಓರ್ವ ಸದ್ಗೃಹಸ್ಥರು ಹೀಗೆ ಬರೆದಿದ್ದಾರೆ : "ನಾನು ಸುಮಾರು ೨೫ ವರ್ಷಗಳ ಲಾಗಾಯಿತು ಈ ಶಾಲೆಯ ಕಮೀಟಿದಾರಯಿದ್ದು.... ಯೀಗಿರುವಷ್ಟು ಯೆಲ್ಲ ವಿಧದಿಂದಲೂ ವಳ್ಳೇ ಸ್ಥಿತಿಯಲ್ಲಿ ಯೆಂದೂ ನೋಡಲಿಲ್ಲ. ಮಿ॥ ಗಳಗನಾಥ ಮಾಸ್ತರರು ಬಂದಾರಭ್ಯಾ ಶಾಲೆಯ ಯಲ್ಲ ಬಗೆಯ ಸ್ಥಿತಿಯಲ್ಲಿ ಯಾವ ರೀತಿಯಿಂದಲೂ ಆಕ್ಷೇಪಿಸುವಂತೆ ಯಿಲ್ಲ. ಯಿಷ್ಟೇ ಅಲ್ಲ, ಬಹಳ ಚಂನಾಗಿ ನಡೆದಿದೆಯಂತಾ ಜನರ ಬಾಯಿಂದಾ ಕೇಳೇನಿ."

ಓರ್ವ ಸರ್ಕಾರೀ ಅಧಿಕಾರಿಯು ಬರೆದ 'ಶರಾ' ಮೇಲಿನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ:

> "The Headmaster takes exceptionally deep interest in the discharge of his duties... very few schools in this district can boast of such all round efficiency. Dated 21-10-1905."

ಗಳಗನಾಥರ ಕಾರ್ಯದ ವಿಶೇಷತೆಯೆಂದರೆ ಕೈಕೆಳಗಿನ ಶಿಕ್ಷಕರಿಗೂ ಶಿಸ್ತಿನ ಹಾಗೂ ಮೇಲ್ಮಟ್ಟದ ಅಧ್ಯಾಪನದ ದೀಕ್ಷೆಯನ್ನು ಹಾಕಿಕೊಟ್ಟುದು.

೧೯೦೭ರಲ್ಲಿ ಶಾಲೆಯ ವಾರ್ಷಿಕ ತಪಾಸಣೆಗೆ ಬಂದಿದ್ದ ಅ.ಡೆ.ಎ. ಇನ್ಸ್‌ಪೆಕ್ಟರನು ಅದನ್ನು ಎತ್ತಿ ತೋರಿಸಿದ್ದಾನೆ -

> "..........during the past twelve months, the school has progressed marvellously both in number and efficiency. Full credit should be given to the Head Master Mr. V.T. Kulkarni, who is an able and indefatigable teacher. He has introduced the new method of instruction and discipline patiently. The various registers and log books show how systematically, regularly and honestly the work of instruction is conducted. The assistants instead of disliking the new rigorous discipline appear well-pleased and show their appreciation of even in the absence of the Head Master who has gone to Dharwar."

ಆಗಿನ ಕಾಲದಲ್ಲಿ ಖ್ಯಾತಿ ಹೊಂದಿದ್ದ ಧಾರವಾಡ ಜಿಲ್ಲೆಯ ಕಲೆಕ್ಟರ್ - ಎಂಡರ್ಸನ್ ಗುತ್ತಲಕ್ಕೆ ಬಂದಿದ್ದಾಗ ಚುಟುಕಿನ 'ಶರಾ' ಬರೆದಿದ್ದಾನೆ:

'Examination results excellent, Discipline good.'

Discipline! ಪ್ರಾಥಮಿಕ ಶಾಲೆಗಳಲ್ಲಿಯ ಪಾಲಕರು ನಡುನಡುವೆ ಶಾಲೆಗೆ ಬಂದು ಕಿರುಕುಳ ಕೊಡುವದನ್ನು ಗಳಗನಾಥರು ಸಹಿಸುತ್ತಿದ್ದಿಲ್ಲ. ಮತ್ತು ಅವರನ್ನು ಬೈದು ಕಳುಹಿಸುತ್ತಿದ್ದರು. ಅದರಿಂದ ತಮಗೆ ಅಪಮಾನವಾಯಿತೆಂದೆನಿಸಿದ ಗುತ್ತಲದ ಕೆಲವರು ಮೇಲಧಿಕಾರಿಗಳಿಗೆ ಮೂಗರ್ಜಿಯನ್ನು ಬರೆದು ಗಳಗನಾಥರನ್ನು ಅಲ್ಲಿಂದ ವರ್ಗಮಾಡಬೇಕೆಂದು ಹವಣಿಸಿದರು.

ಇವಕ್ಕೆ ಬಾವಿಯ ಪ್ರಕರಣವೂ ಜತೆಗೂಡಿತು. ಆ ಊರಿನಲ್ಲಿ ಅದೊಂದು ಅಪೂರ್ವ ಘಟನೆಯಾಗಿ ಇಂದಿಗೂ ಜನಜನಿತವಾಗಿದೆ. ಗುತ್ತಲ ಊರಿನ ಬಳಿ ಹೊಳೆ ಹಳ್ಳ ಯಾವುದೂ ಇಲ್ಲ. ಬಾವಿಗಳಿಂದಲೇ ನೀರು

ಬರಬೇಕು. ಸಿಹಿ ನೀರಿನದು ಇನ್ನಷ್ಟು ಕೊರತೆ. ಜನರು ನೀರಿಗಾಗಿ ಪರದಾಡುವದು ಗಳಗನಾಥ ಮಾಸ್ತರರ ಹೃದಯಕ್ಕೆ ತಾಗಿತು. ಶಾಲೆಯ ಕಾಂಪೌಂಡಿನಲ್ಲಿಯೇ ದೊಡ್ಡದಾದ ಬಾವಿಯನ್ನು ತೋಡಿಸಬೇಕೆಂದು ಸಂಕಲ್ಪಿಸಿದರು. ಹುಡುಗರ ಮುಖಾಂತರ ಚಂದಾ ಹಣವನ್ನು ಕೂಡಿಸತೊಡಗಿದರು. 'ಇದೆಲ್ಲಿಯ ಉಸಾಬರಿ' ಎಂದು ಊರಲ್ಲಿಯ ಕೆಲವರು ಟೀಕೆ ಮಾಡಿದರು. ಹಲವರು, ಅಲ್ಲೆಲ್ಲಿ ನೀರು ಬಿದ್ದೀತು – ಎಂದು ಅಪಸ್ವರ ಎಳೆದರು. ಗೌಡರು, ನಾಯಕರು ಮೊದಲಾದ ಊರ ಪ್ರಮುಖರಿಗೆ ಇದು ಆತ್ಮಪ್ರತಿಷ್ಠೆಯ ಪ್ರಶ್ನೆಯಾಯಿತು. ಊರ ಹಿರಿತನ ತಮ್ಮದಿರುವಾಗ ಈ ಮಾಸ್ತರನ ಉಪದ್ವ್ಯಾಪ ಏಕೆ ಎಂದು ಮುಖ ತಿರುಹಿದರು. ಗಳಗನಾಥರೂ ಛಲದಂಕರು, 'ನೀವು ಕೊಟ್ಟರೂ ಬೇಡ' ಎಂದು ಕೆಲಸವನ್ನು ಆರಂಭಿಸಿಬಿಟ್ಟರು. ಓರ್ವ ವೀರಶೈವ ಸ್ವಾಮಿಗಳ ಹತ್ತಿರ ಹೋಗಿ "ಇದು ಊರ ಹಿತದ ಕೆಲಸ. ನಿಮ್ಮ ಸಹಾಯವಾಗಬೇಕು" ಎಂದರು. ಅದೇನು–ಎಂಬ ಶಂಕೆ ಸ್ವಾಮಿಗಳಿಗೆ. ಆಗ ಗಳಗನಾಥರು ಕೇಳಿದುದು ಇಷ್ಟೇ: ನಿಮ್ಮ ಆಶೀರ್ವಾದ ರೂಪಿಯಾಗಿ ಒಂದು ರೂಪಾಯಿ ವಂತಿಗೆ ಕೊಡಬೇಕು ಮತ್ತು ಗುದ್ದಲಿ ಪೂಜೆ ನೆರವೇರಿಸಬೇಕು!

ಬಾವಿಯನ್ನು ಅಗೆಯುವ ಕೆಲಸ ಮುಂದುವರಿಯಿತು. ಆದರೂ ಊರ ಹಿರಿಯರು ತಮ್ಮ ಬಿಗುಮಾನವನ್ನು ಬಿಟ್ಟುಕೊಡಲಿಲ್ಲ! ಆಗ ಉಪಶಿಕ್ಷಕರೂ ವಿದ್ಯಾರ್ಥಿಗಳೂ ಒಡ್ಡರೊಡನೆ ಪಾಲುಗೊಂಡರು. ಇಂದು ಅಲ್ಲಲ್ಲಿ ಕೇಳಬರುವ ಶ್ರಮದಾನ ಪದ್ಧತಿಯನ್ನು ಗಳಗನಾಥರು ೬೦ ವರ್ಷಗಳ ಹಿಂದೆಯೇ ಆರಂಭಿಸಿದ್ದರೆನ್ನಬಹುದಲ್ಲವೆ?

ಒಂದು ದಿನ ಬೆಳಿಗ್ಗೆ ಗಳಗನಾಥರು ಸೂಳೆಯರ ಕೇರಿಗೆ ಹಾಜರು! ಮಾಸ್ತರರು ಬಂದರೆಂದು ಅಲ್ಲಿಯ ಜನ ಗಜಿಬಿಜಿಸಿ, ಬೇವಿನ ಮರದ ಕೆಳಗೆ ಗೊಂಗಡಿ ಹಾಸಿ ಅವರನ್ನು ಕೂಡ್ರಿಸಿದರು. ಗಳಗನಾಥರು ತಿಳಿಯಾದ ಸರಣಿಯಲ್ಲಿ ಊರವರಿಗೆ ಆ ಬಾವಿಯ ಉಪಯೋಗ ಎಂತು – ಎಂಬುದನ್ನು ತಿಳಿಸಿ ಹೇಳಿದಾಗ, ಊರ ಪ್ರಮುಖರ ಉಪಪತ್ನಿಯರು ನೂರು ರೂಪಾಯಿಗಳ ವರೆಗೂ ವಂತಿಗೆಯನ್ನು ಕೂಡಿಸಿಕೊಟ್ಟರಂತೆ! ಆಗ ಊರಿಗೆ ಊರೇ ಜಾಗೃತವಾಯಿತು. ವಂತಿಗೆ ಆಣೆ, ಬಿಲ್ಲಿಗಳ ರೂಪದಲ್ಲಿಯೂ ಹರಿದುಬಂತು. ಸುದೈವಕ್ಕೆ ಬಾವಿಯಲ್ಲಿ ಸೆಲೆಯೊಡೆಯಿತು, ಬೇಕಾದಷ್ಟು ನೀರು! ಅದರ

ಪ್ರಾರಂಭೋತ್ಸವವೆನ್ನಬಹುದಾದ ಮುದ್ರೆಯ ಕಲ್ಲು ಕೂಡ್ರಿಸುವ ಸಮಯದಲ್ಲಿ ಗಳಗನಾಥರು ಊರಿಗೆ ಹಿರಿಯರೆನಿಸಿದ ನಾಯಕರಲ್ಲಿ ಮತ್ತೊಮ್ಮೆ ಹೋದರು. ಅಷ್ಟರಲ್ಲಿ ಆ ಹಿರಿಯರ ಬಿಗುಮಾನ ಕರಗಿ ನೀರಾಗಿದ್ದಿತು. 'ಬರುತ್ತೇನೆ. ಆದರೆ ನನ್ನಿಂದ.... ರೂಪಾಯಿ ವಂತಿಗೆ ಇಸಕೊಳ್ಳಬೇಕು' ಎಂದರಂತೆ. ಇಂದಿಗೂ ಶಾಲೆಯ ಆ ಬಾವಿಯು ಊರ ಜನರಿಗೆ ನೀರನ್ನು ಪೂರೈಸುತ್ತ ಗಳಗನಾಥರ ಹೆಸರನ್ನೆ ಹೊತ್ತು ನಿಂತಿದೆ!

ಗಳಗನಾಥರ ವಿರುದ್ಧ ದೂರುಗಳು ಹೋಗಿದ್ದುವಷ್ಟೆ. ಅದರ ವಿಚಾರಣೆಗಾಗಿ ಓರ್ವ ಯುರೋಪಿಯನ್ ಅಧಿಕಾರಿಯು ಗುತ್ತಲಕ್ಕೆ ಬಂದ. ಆಗ ಗಳಗನಾಥರು ೭ನೆಯ ವರ್ಗಕ್ಕೆ ಪಾಠ ಹೇಳುತ್ತಿದ್ದರು. ತಾನು ಬಂದದ್ದು ಕಾಣುವಂತೆ ನಿಂತರೂ ಗಳಗನಾಥರು ಪಾಠವನ್ನು ನಿಲ್ಲಿಸಿ ಅವನನ್ನು ಎದುರುಗೊಳ್ಳಲು ಹೋಗಲಿಲ್ಲ. ಅಲ್ಲಿಯೇ ಪಾಠ ಹೇಳುತ್ತಿದ್ದ ಇತರ ಶಿಕ್ಷಕರಿಗೆ, ಅದರಂತೆ ಹುಡುಗರಿಗೆ ಇದು ಕಂಡರೂ ಗಳಗನಾಥರು ಶಿಸ್ತನ್ನು ಮುರಿಯುವವರಲ್ಲವೆಂಬುದನ್ನು ತಿಳಿದು ಸುಮ್ಮನುಳಿದರು. ಆಗ ಸಾಹೇಬರು ತಮ್ಮ ಸಿಪಾಯಿಯನ್ನು ಒಳಗೆ ಕಳಿಸಿದರು. ಒಳ್ಳೇ ಆಢ್ಯತೆಯಿಂದ ಒಳಬಂದ ಸಿಪಾಯಿಯನ್ನು ಕಂಡವರೇ ಗಳಗನಾಥರ ಸಾತ್ವಿಕ ಸಂತಾಪ ಕೆರಳಿತು. "ಯಾವನಲೇ ಅವ? ಹೇಳದೇ ಕೇಳದೆ ಒಳಗೆ ಬಂದಾನ! ಚಂಡಿಗೆ ಕೈಕೊಟ್ಟು ಹೊರಗ ಹಾಕರಿ" ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ವರ್ಗದ ಮಾನಿಟರ್, ಅದಕ್ಕಾಗಿ ಎದ್ದು ನಿಂತಿರಲೂ ಸಾಕು! ಸಾಹೇಬರ ಕೋಪ ಬ್ರಹ್ಮಾಂಡವನ್ನೇ ಮುಟ್ಟಿದ್ದಿತು. ಪಾಠ ಮುಗಿದ ಮೇಲೆ ಗಳಗನಾಥರು ಅವರನ್ನು ವಿನಯದಿಂದ ಸತ್ಕರಿಸಿದರೂ ಸಿಟ್ಟು ಕೆಳಗಿಳಿಯಲಿಲ್ಲ. "ನಿಮ್ಮನ್ನು ಡಿಸ್‌ಮಿಸ್ ಮಾಡಿದ್ದೇನೆ" ಎಂದು ಗುಡುಗಿದರು.

"ಪಾಠ ಹೇಳುವಾಗ ಅರ್ಧಕ್ಕೆ ಬಿಟ್ಟು ಬರಬೇಕಿತ್ತೆ? ಅದರಿಂದ ಪಾಠದೆಡೆಗೆ ವಿದ್ಯಾರ್ಥಿಗಳ ಲಕ್ಷ್ಯ ಚಂಚಲವಾಗದಿದ್ದೀತೆ? ಯಾರಾದರೂ ಹಾಗೆ ಅಡ್ಡಿ ಮಾಡಿದರೆ ಅದನ್ನು ಮುಖ್ಯಾಧ್ಯಾಪಕನಾದ ನಾನು ನಿವಾರಿಸಬೇಕಲ್ಲದೆ ನಾನೇ ಹಾಗೇ ಮಾಡಬೇಕೆ?" ಎಂದರು ಗಳಗನಾಥರು.

"ನಾನೇ ಸ್ವತಃ ಬಂದಿದ್ದೆ. ಆವಾಗಲೂ ಈ ನಿಯಮವೆ?"

"ನೀವು ಇಲ್ಲಿಗೆ ಬಂದುದು – ಅದೂ ಪೂರ್ವ ಸೂಚನೆಯಿಲ್ಲದೆ – ನಾನು ಹೇಗೆ ಇದ್ದೇನೆ, ಶಾಲೆ ಯಾವ ರೀತಿಯಲ್ಲಿ ನಡೆದಿದೆ ಎಂಬುದನ್ನು

ನೋಡಲಿಕ್ಕೆ. ನಾನೇನಾದರೂ ಅರ್ಧಕ್ಕೆ ಪಾಠ ಬಿಟ್ಟಿದ್ದರೆ, ನೀವೇ ಮಾಡಿದ ಶಾಲಾ ನಿಯಮವನ್ನು ನಾನು ಮುರಿದಂತಾಗುತ್ತಿತ್ತು. ನಾನು ಈ ರೀತಿ ವರ್ತಿಸಿದ್ದಕ್ಕೆ ನೀವು ಅನುಮೋದಿಸುವ ಬದಲು ದಂಡಿಸಿದ್ದಾದರೆ ಅದು ಅನ್ಯಾಯವಷ್ಟೇ ಅಲ್ಲ ಅಪರಾಧವೂ ಆಗುತ್ತದೆ!"

ಗಳಗನಾಥರ ಈ ಸ್ಪಷ್ಟೋಕ್ತಿಗೆ ಸಾಹೇಬರು ತುಸು ಮೆತ್ತಗಾದರೂ ಗಳಗನಾಥರು ಬಾವಿಯನ್ನು ತೋರಿಸಿ ಅದರ ಉಪಯುಕ್ತತೆಯನ್ನು ತಿಳಿಸಿದ ಮೇಲಂತೂ ಆ ಅಧಿಕಾರಿಯು 'ವಿಸಿಟ್ ಬುಕ್'ನಲ್ಲಿ ಪ್ರಶಂಸೆಯ ಶರಾ ಬರೆದು* ಹೋದ.

ಈ ಕಾಲದಲ್ಲಿ ಗಳಗನಾಥರು ಅನ್ಯ ಪತ್ರಿಕೆಗಳಿಗೆ ಬಿಡಿ ಲೇಖನಗಳನ್ನು ಬರೆಯುತ್ತಿದ್ದರೆಂದು ಕಾಣುತ್ತದೆ. ವಿಶೇಷ ಸಂಪರ್ಕವಿದ್ದುದು 'ಕನ್ನಡ ಶಾಲಾ ಪತ್ರಕ'ದೊಂದಿಗೆ. ಈ ಮೊದಲು ಉಲ್ಲೇಖಿಸಲಾದ 'ಶಿಕ್ಷೆ' ಎಂಬ ಲೇಖನವು ಅದರಲ್ಲಿಯೇ ಪ್ರಕಟವಾದುದು. ಇನ್ನೊಂದರಲ್ಲಿ ಕೆರೂರ ವಾಸುದೇವಾಚರ್ಯರ 'ಇಂದಿರಾ' ಕಾದಂಬರಿಯ ವಿಮರ್ಶೆ ಪ್ರಕಟವಾಯಿತು.

'ಆರ್ಯ ಧರ್ಮಾಚರಣೆಯ ವಿಡಂಬನೆ ಮಾಡದೇ' ವ್ಯಕ್ತವಾದ ಪ್ರಗತಿಪರ ವಿಚಾರಗಳನ್ನು ಗಳಗನಾಥರು ಶ್ಲಾಘಿಸಿದ್ದಾರೆ. ಅದರಲ್ಲಿಯ ಭಾಷಾ ದೋಷಗಳನ್ನು ಪ್ರಸ್ತಾಪಿಸಿದ್ದಾರೆ. ಈ ವಿಷಯದಲ್ಲಿ ಗಳಗನಾಥರ ನಿಲುಮೆಯನ್ನು ನೋಡುವ ಹಾಗಿದೆ.

"ಭಾಷೆಯ ಸಂಬಂಧದ ದೋಷಗಳನ್ನು ಮುಂದೆ ಹಾಕಿಕೊಂಡು, ಅವನ್ನು ತೋರಿಸಲು ನಾವು ಇಚ್ಛಿಸುವುದಿಲ್ಲ. ಯಾಕೆಂದರೆ ಎಲ್ಲರೂ ಭಾಷಾ ಪ್ರಾವೀಣ್ಯವನ್ನು ಸಂಪೂರ್ಣವಾಗಿ ಸಂಪಾದಿಸಿಯೇ ಬರೆಯ ತೊಡಗಬೇಕೆಂಬ ವಿಚಾರವು ನಮಗೆ ಸಮ್ಮತವಾಗಿಲ್ಲ. ಆದರೆ ಪ್ರಾವೀಣ್ಯವಿಲ್ಲೆಂಬ ನೆವದಿಂದ ಕನ್ನಡಿಗರು ವಿಶೇಷತಃ ಪದವೀಧರರು ಏನೂ ಬರೆಯದೆ ಕೈಮುಚ್ಚಿಕೊಂಡು ಕುಳಿತದ್ದರಿಂದ ಕನ್ನಡಿಗರ ಹಾನಿಯಾಗುತ್ತದೆ. ಯೋಗ್ಯತೆಯಿದ್ದವರೂ ಹೀಗೆ ಸುಮ್ಮನೆ ಕುಳಿತುಕೊಂಡರೆ ಕನ್ನಡ ಸಮಾಜವು

---


* ಈ ಅಧಿಕಾರಿಯ ಹೆಸರು ತಿಳಿಯದು. ಹಿಂದೆ ಉಲ್ಲೇಖಿಸಿದ ಅವತರಣಿಕೆಗಳಲ್ಲಿ ಒಂದು ಅವನದೇ ಆಗಿರಬೇಕು. ಗಳಗನಾಥರ ಮೊಮ್ಮಗ ಶ್ರೀ ಶ್ರೀಧರ ಜೋಶಿ ಹೇಳಿದ ಘಟನೆಯಿದು.

ವಿಚಾರ ಪುಷ್ಟವಾಗುವ ಬಗೆಯೇನು? ಇಂಥಾ ಭಾಷಾ ದೋಷಗಳಿಗಾಗಿ ಬರೆಯುವವರು ಕೈಕಾಲು ಕೆಡಬಾರದೆಂದು ಹೇಳುವದೂ ಆಪ್ತಾಲೋಚನೆಯ ಮಾತು". ಗಳಗನಾಥರು ಇದನ್ನು 'ವಾಚಕರ ಪತ್ರ'ವಾಗಿ ಬರೆದರಲ್ಲದೆ. ಸಂಪಾದಕರಿಂದ ಈ ಪುಸ್ತಕವು ವಿಮರ್ಶೆಗಾಗಿ ಬಂದದ್ದಲ್ಲ ಎಂಬುದನ್ನು ಗಮನಿಸಬೇಕು. ಗಳಗನಾಥರು ತಮ್ಮ ಮೆಚ್ಚಿನ ವಿಷಯವಲ್ಲದಿದ್ದರೂ ಹೀಗೆ ಸಮಕಾಲೀನ ಹಾಗೂ ಆಧುನಿಕ ಸಾಹಿತ್ಯವನ್ನು ಓದುತ್ತಿದ್ದರೆನ್ನುವುದಕ್ಕೆ ಅವರ ಜೀವನದುದ್ದಕ್ಕೂ ನಿದರ್ಶನಗಳು ದೊರೆಯುತ್ತವೆ.

ಗಳಗನಾಥರು ಗುತ್ತಲದಲ್ಲಿದ್ದುದು ಕ್ರಿ.ಶ. ೧೯೦೮ರ ಕೊನೆಯವರೆಗೆ. ಅನಂತರ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಅಸಿಸ್ಟಂಟ್ ಮಾಸ್ತರ ಎಂದು ಅವರ ನೇಮಕವಾಯಿತು. ಅವರ ಸಂಬಳ ೫೦ ರೂಪಾಯಿಗೆ ಏರಿತು.

ಹೀಗೆಯೇ ಇನ್ನು ಕೆಲವು ವರ್ಷ ಟ್ರೇನಿಂಗ್ ಕಾಲೇಜದ ಶಿಕ್ಷಕರಾಗಿದ್ದರೆ, ಅವರಿಗೆ ತಿಂಗಳಿಗೆ ಒಂದು ನೂರು ರೂಪಾಯಿ ಸಂಬಳವಾದರೂ ಆಗಬಹುದಿತ್ತು. ಆದರೆ ಇನ್ನೂ ಹತ್ತು ವರ್ಷದ ನೌಕರಿಯ ಮುದ್ದತು ಇರುವಾಗ ಅವರು ಪ್ರಯತ್ನಪೂರ್ವಕವಾಗಿ ಪೆನ್ಶನ್ ಪಡೆದರು. 'ನಾನು ಮಾಡುತ್ತಿದ್ದ ಅಧ್ಯಾಪಕ ಕೆಲಸದಲ್ಲಿ ಬೇಸರಮಾಡಿಯಾಗಲಿ, ಇದರಲ್ಲೇನು ಲಾಭವಿಲ್ಲವೆಂಬ ಅಸಂತುಷ್ಟಿಯಿಂದಾಗಲಿ, ಅಚ್ಚ ಲೇಖಕನಾಗಿ ಸ್ವತಂತ್ರನೂ ದುಡ್ಡು ಗಳಿಸುವವನೂ ಎನಿಸಿಕೊಳ್ಳಬೇಕೆಂಬ ಡೌಲಿನಿಂದಾಗಲೀ ದೇಶಭಕ್ತನೆನಿಸಿಕೊಳ್ಳಬೇಕೆಂಬ ಉಬ್ಬಿನಿಂದಾಗಲೀ ನಾನು ನೌಕರಿಯನ್ನು ಬಿಟ್ಟವನಲ್ಲ' ಎಂಬ ವಿವರಣೆಯನ್ನು ಗಳಗನಾಥರು ಕೊಟ್ಟಿದ್ದಾರೆ.

ಹಾಗಿದ್ದರೆ ನೌಕರಿಯನ್ನು ಬಿಡಲು ಏನು ಕಾರಣ? ಟ್ರೇ.ಕಾ.ದಲ್ಲಿ ಸಹಾಯ ಅಧ್ಯಾಪಕನಾಗಿದ್ದಾಗ ಏನಾದರೂ ಹೆಚ್ಚು ಕಡಿಮೆಯಾಯಿತೆ? ಸ್ವಂತವಾಗಿ ಅಭ್ಯಾಸಮಾಡಿಯೇ ಅವರು ಸಂಸ್ಕೃತದಲ್ಲಿ ನೈಪುಣ್ಯವನ್ನು ಪಡೆದಿದ್ದರು. ಆ ವಿಷಯದ ಅಧ್ಯಾಪನವನ್ನು ಬೇರೊಬ್ಬರಿಗೆ - ಅವರು ಪದವೀಧರರೆಂಬ ಕಾರಣ ಮಾತ್ರದಿಂದ ಕೊಡಲಾಯಿತೆಂಬ ಬೇಸರ ಗಳಗನಾಥರಲ್ಲಿ ಮೂಡಿತ್ತೆಂದು ಹೇಳಲಾಗಿದೆ. ಆದರೆ ನೌಕರಿ ಬಿಡುವುದಕ್ಕೆ ನಿಜವಾದ ಕಾರಣವೆಂದರೆ, ಅಗಡಿ (ಆನಂದವನ)ಯ ಶ್ರೀ ಶೇಷಾಚಲ ಸಾಧುಗಳ ಸಂಪರ್ಕ.



ಅಗ್ರಹಾರದ ಮಹಾದ್ವಾರ




ಶೇಷಾಚಲ ಸಾಧುಗಳು



ಗುತ್ತಲ ಶಾಲೆ ಮತ್ತು ಬಾವಿ



ಅಗ್ರಹಾರದ ಒಳನೋಟ



ದೇಹರಕ್ಷಣ - ಕೈಬರಹದ ಪ್ರತಿ

ಗಳಗನಾಥರು ಸೇವಾನಿವೃತ್ತಿಯ ನಿಶ್ಚಯ ಮಾಡಿಕೊಂಡು, ತಮ್ಮ ಲೌಕಿಕ ಗುರುಗಳಾದ ಕರಂದೀಕರರಲ್ಲಿಗೆ ಬಂದರು. ವೆಂಕಣ್ಣ ಮಾಸ್ತರರ ಮೇಲೆ, ಅವರಿಗೆ ಅನೂನ ವಾತ್ಸಲ್ಯ. ಈ ವಿಷಯದಲ್ಲಿ ಅವರು ಸಾಂತ್ವನ ಹೇಳಿದರು. ಉದ್ವಿಗ್ನರಾಗಿದ್ದ ಗಳಗನಾಥರನ್ನು ಮೂರು ದಿನ ತಮ್ಮಲ್ಲಿಯೆ ನಿಲ್ಲಿಸಿಕೊಂಡು, ಬರಿ ಹಾಲಿನ ಮೇಲೆ ಇಟ್ಟಿದ್ದರಂತೆ! ಹಾಗೂ ತಮ್ಮ ಶಿಷ್ಯನ ನಿರ್ಣಯ ಬದಲಾಗದಿದ್ದಾಗ ಉಪಾಯಗಾಣದೆ ಅನುಮತಿ ನೀಡಿದರು. ನಿವೃತ್ತನಾದ ಮೇಲ ತಮ್ಮ ವೆಂಕಣ್ಣನು ಒದ್ದಾಡಬಾರದೆಂದು ಪರಮಾವಧಿ ಪೆನ್ಶನ್ ಬರುವಂತೆ ನೋಡಿಕೊಂಡರು. ೧೯೧೨ರಿಂದಲೇ ಕಲಿಸುವುದನ್ನು ಬಿಟ್ಟಿದ್ದ ಗಳಗನಾಥರಿಗೆ ಅವರು ಒಂದು ವರ್ಷ 'ಫರ್ಲೋ', ಇನ್ನೊಂದು ವರ್ಷ 'ಸೀಕ್' ರಜೆ ಮಂಜೂರು ಮಾಡಿಸಿದರು. ಕೊನೆಗೆ, ದಿ. ೨೭-೭-೧೯೧೪ರಿಂದ ಗಳಗನಾಥರು ರೂ. ೧೯-೬-೦ರ ನಿವೃತ್ತಿ ವೇತನದ ಮೇಲೆ ಸರಕಾರೀ ನೌಕರಿಯಿಂದ ನಿವೃತ್ತರಾದರು.

***

೧೯೦೭-೧೯೧೮

# ಶ್ರೀ ಶೇಷಾಚಲರ ಶಿಷ್ಯ

ಗಳಗನಾಥರ ಜೀವನದ ದಿಕ್ಕನ್ನೆ ಬದಲಿಸಿದ ಈ ಶೇಷಾಚಲ ಸಾಧುಗಳು ಯಾರು? ಗಳಗನಾಥರ ವಾಣಿಯಿಂದಲೇ ನೋಡೋಣ.

'ಜಗತ್ತಿನ ದುಃಖದ ನಿಜವಾದ ಕಾರಣವನ್ನು ಅರಿತು ಅವನ್ನು ದೂರ ಮಾಡಿ ಜನರನ್ನು ಉದ್ಧರಿಸುವುದಕ್ಕಾಗಿ ಸಮರ್ಥವಾದ ಒಂದು ಮುಕ್ತ ಜೀವವು ಅಗಡಿಯ ಶುಕ್ಲ ಯಜುರ್ವೇದದ ಕಣ್ವಶಾಖೀಯ ಚಕ್ರವರ್ತಿಯವರ ಮನೆತನದಲ್ಲಿ ಅವತರಿಸಿ ಶೇಷಭಟ್ಟನೆಂಬ ಹೆಸರಿನಿಂದ ಬೆಳೆಯಹತ್ತಿತು. ಚಿಕ್ಕಂದಿನಿಂದ ಸರಾಸರಿ ಇಪ್ಪತ್ತು ವರ್ಷದವರಾಗುವವರೆಗೆ ಓರಿಗೆಯವರ ಸಂಗಡ ಒಂದೇ ಸವನೆ ಆಟವಾಡುವುದರಲ್ಲಿಯೇ ಶ್ರೀ ಗುರುಗಳ ಕಾಲಹರಣ ವಾಯಿತು. ವಿದ್ಯೆ ಕಲಿಯದೆ ಸಿಕ್ಕ ಹಾಗೆ ತಿರುಗುವುದಕ್ಕಾಗಿ ತಾಯಿ ತಂದೆಗಳು ಯಾವಾಗಲೂ ಗುರುಗಳನ್ನು ತಿರಸ್ಕರಿಸುತ್ತಿದ್ದರು. ಬರಬರುತ್ತ ಶ್ರೀ ಗುರುಗಳು ಆಟಪಾಟಗಳನ್ನು ಬಿಟ್ಟು ಭಕ್ತಿಯಿಂದ ಪೂಜಾ ನಮಸ್ಕಾರಗಳನ್ನು ಮಾಡಹತ್ತಿದರು. ಈ ಕಾಲದಲ್ಲಿ ಶ್ರೀ ಗುರುವು ಮಾಡಿದ ಘೋರ ತಪಶ್ಚರ್ಯವನ್ನೂ ತೀರ್ಥಕ್ಷೇತ್ರಗಳಿಗೆ ಹೋಗಿ ಆತನು ಅನುಗ್ರಹ ಸಂಪಾದಿಸಿದ್ದನ್ನೂ ಮುಮುಕ್ಷುಗಳಿಗೆ ನಿರಾಲೋಚನೆಯಿಂದ ಅನುಗ್ರಹ ಮಾಡಿದ್ದನ್ನೂ ಅಪ್ರಾರ್ಥಿತನಾಗಿ ಭವಿಷ್ಯಾದಿಗಳ ಕಥನ ಮಾಡಿದ್ದನ್ನೂ ತೀರ್ಥ ಭಸ್ಮಾದಿಗಳಿಂದ ರೋಗಾದಿ ಬಾಧೆಗಳ ನಿವಾರಣೆ ಮಾಡಿದ್ದನ್ನೂ ಸ್ವಾಭಾವಿಕವಾಗಿ ಪ್ರಕಟವಾದ ಆತನ ದೈವಿಕ ಕೃತಿಗಳನ್ನೂ ವರ್ಣಿಸಲಿಕ್ಕೆ ಇಲ್ಲಿ ಸ್ಥಳವಿಲ್ಲ.

ಶ್ರೀ ಗುರುವು ಪ್ರತಿನಿತ್ಯ ಬೆಳಗಿನ ಜಾವದಲ್ಲಿ ಎದ್ದು ತೋಟಗಳಿಗೆ ಹೋಗಿ ದ್ವಾದಶ ಪುಷ್ಪಗಳನ್ನು ತರಬೇಕು. ಅನುಷ್ಠಾನದ ಯಾವತ್ತೂ ಅನುಕೂಲತೆಗಳನ್ನು ಪರರ ಹಂಗು ಇಲ್ಲದೆ ತಾನೇ ಕೈಮುಟ್ಟಿ ಮಾಡಿಕೊಳ್ಳಬೇಕು! ಅಲಂಕಾರಯುಕ್ತ ದೇವರ ಪೂಜೆಯಿಂದ ತಾನು ಆನಂದಮಗ್ನನಾಗಿ ಜನರ ಚಿತ್ತವನ್ನು ಹರಣ ಮಾಡಬೇಕು; ಒಂದೊಂದು ದಿನ ಬೆಳತನಕ ನಿಂತು ಭಜನೆ ಮಾಡುವಾಗ ಚಪ್ಪಾಳೆ ಬಡೆದು ಬಡೆದು ಕೈಯಲ್ಲಿ ರಕ್ತ ಬರಬೇಕು. ಈ ಕಾಲದಲ್ಲಿ ಶ್ರೀಗುರುವು ಮಂದಿಯ ಸಂಗಡ ಮಾತಾಡುವದೇ ಕಡಿಮೆ. ಅನುಷ್ಠಾನಕಾಲದಲ್ಲಿಯಂತು ಭಾಷಣವು ತೀರ ವರ್ಜ್ಯ. ಯಾವಾಗಲೂ ಅರ್ಧ ಮುಚ್ಚಿದ ಕಣ್ಣುಗಳಿಂದ ಜನರನ್ನು ನೋಡುವುದು. ಭೇದಭಾವವಿಲ್ಲದೆ ಜನರಿಗೆ ತಲೆಬಾಗಿ ನೆಲಕ್ಕೆ ಕೈಮುಟ್ಟಿ ನಮಸ್ಕರಿಸುವುದು ಸ್ವಭಾವಗುಣವಾಗಿ ಹೋಗಿತ್ತು.

ಹೀಗೆ ಸರಾಸರಿ ೨೮-೨೯ ವರ್ಷದವರಿರುವಾಗ ಶ್ರೀ ಗುರುಗಳ ಅನುಷ್ಠಾನಕ್ಕೆ ಆರಂಭವಾಗಿ ಮುಂದೆ ೭-೮ ವರ್ಷ ಅನುಷ್ಠಾನ ನಡೆದು ಶ್ರೀಗುರುಗಳ ದೈವೀಶಕ್ತಿಯು ಪ್ರಸಿದ್ಧಿಯಾದ ಬಳಿಕ ಒಬ್ಬೊಬ್ಬರೇ ಶಿಷ್ಯರು* ಬರಹತ್ತಿದರು.

ನನ್ನ ಧನ್ಯತೆಗೆ ಕಾರಣನಾದ ಶ್ರೀ ಶೇಷಸದ್ಗುರುನಾಥನು ನನ್ನ ಹಾಗೆಯೇ ಗಾವಿಲನು. ಲೌಕಿಕ ಯೋಗ್ಯತೆಯಲ್ಲಿಯೂ ಓದುಬರಹದಲ್ಲಿಯೂ ಕೆಲಸ ಕೈಗಾರಿಕೆಗಳಲ್ಲಿಯೂ ನಮ್ಮಿಬ್ಬರನ್ನು ಒರೆಗೆ ಹಚ್ಚಿ ನೋಡಿದರೆ ಶಿಷ್ಯನಾದ ನಾನೇ ಗುರುವಿಗಿಂತ ಶ್ರೇಷ್ಠನು! ಆದರೆ ಕೇವಲ ನನ್ನಂತಹ ಮೂಢ ಜನರ ಉದ್ಧಾರಕ್ಕಾಗಿ ಅವತರಿಸಿ, ಅಡ್ಡ ಹಾದಿಗೆ ಹೋಗುತ್ತಿರುವ ಶಿಷ್ಯರನ್ನು ಅವರಿಗೆ ತಿಳಿಯದಂತೆ ಹಾದಿಗೆ ಹಚ್ಚಲು ಸಮರ್ಥನಾದ ನನ್ನ ಸದ್ಗುರುನಾಥನಿಗಿಂತಲೂ ಹೆಚ್ಚಿನವನು ಮತ್ತಾವನಿರುವನು? ಆತನು ಜಗತ್ತನ್ನೆ ಈಶ್ವರ ಸ್ವರೂಪವಾಗಿ ನೋಡಿ ದಾಸಾನುದಾಸನಾಗಿ ಸೇವಕ ವೃತ್ತಿಯಿಂದ ನಡೆದುಕೊಳ್ಳುವನು. ಸದ್ವೃತ್ತಿಸ್ವರೂಪದ ತಾನು ಸ್ವಯಂಸಿದ್ಧ ರಾಜಾಧಿರಾಜನಿದ್ದರೂ ಅನ್ಯರಿಗೆ 'ಮಹಾರಾಜಾ, ಮಹಾರಾಜಾ' ಎಂಬ ವಿನಯೋಕ್ತಿಯಿಂದ ಸಂಬೋಧಿಸಿ

---

* ಅವರಲ್ಲಿ ಭಗವಾನ್ ಎಂಬ ಉಪನಾಮವಿದ್ದ ಲಿಂಗೋ ಭಗವಾನ್, ನಾರಾಯಣ ಭಗವಾನ್, ಶಂಕರ ಭಗವಾನ್ ಎಂಬವರು ಮುಖ್ಯರು.

ಜನರ ಮಾನಸಿಕ ವಿಕಾರಗಳನ್ನು ಬಡಿದು. ಮನಸ್ಸನ್ನು ಶಾಂತಗೊಳಿಸಿ ಅವರನ್ನು ಆನಂದಭಾಜನರನ್ನಾಗಿ ಮಾಡುವನು.'

ಗಳಗನಾಥರು ಗುತ್ತಲಕ್ಕೆ ವರ್ಗವಾಗಿ ಬಂದ ಸಮಯದಲ್ಲಿ ಶೇಷಾಚಲ ಸಾಧುಗಳ ಕೀರ್ತಿಯು ಎಲ್ಲೆಡೆಗೆ ಹಬ್ಬಿದ್ದಿತು. ಲೌಕಿಕ ರೀತ್ಯ ಅವರಿಗೆ ಈಗಾಗಲೇ ಗುರುಗಳು ದೊರೆತಿದ್ದರಾದರೂ ಅಧ್ಯಾತ್ಮ ರಂಗದಲ್ಲಿ ಓರ್ವ ಸದ್ಗುರುವನ್ನು ಪಡೆಯುವ ಹಂಬಲ ಅವರಲ್ಲಿ ಮೊದಲಿನಿಂದಲೂ ಇದ್ದಿತು. ಗುತ್ತಲಶಾಲೆಗೆ ಬಂದಾಗಿನಿಂದ (೧೯೦೫) ಸಹಜವಾಗಿಯೆ ಸಾಧುವರ್ಯರ ನಿಕಟ ಸಂಬಂಧ ಪ್ರಾಪ್ತವಾಯಿತು. ಗಳಗನಾಥರು 'ಧನ್ಯೋಸ್ಮಿ ಅಹಂ' ಎಂದುಕೊಂಡರು. ಹತ್ತು ಹನ್ನೆರಡು ವರ್ಷಗಳಿಂದ ಗಾರ್ಹಸ್ಥ್ಯ ಜೀವನವನ್ನು ನಡೆಸಿದ್ದರೂ ಗಳಗನಾಥರಿಗೆ ಮಕ್ಕಳಿರಲಿಲ್ಲ. ಸದ್ಗುರುವಿನ ಸೇವೆ ಮಾಡಿದ್ದರ ಫಲವಾಗಿ ಮೊದಲನೆಯ ಹೆಣ್ಣುಮಗಳು (ಸುಬ್ಬಕ್ಕ) ಜನಿಸಿದಳು. ಗುರುವಿನ ಮೇಲಿನ ಭಕ್ತಿ ಇನ್ನಷ್ಟು ದೃಢಗೊಳ್ಳಲು ಇದು ನಿಮಿತ್ತವಾಯ್ತು. ಎರಡನೆಯ ಮಗಳು ರೇಣಕ್ಕನೂ ಅಗಡಿಯಲ್ಲಿಯೆ ಜನ್ಮತಾಳಿದಳು.

ಕ್ರಿ.ಶ. ೧೯೦೭ರ ಸುಮಾರಿಗೆ ಶ್ರೀ ಶೇಷಾಚಲರ ಷಷ್ಟ್ಯಬ್ಧಿ ಸಮಾರಂಭವು ನೆರವೇರಿತು. ತುಲಾಭರಣದ ಕಾಲಕ್ಕೆ ಇಂತಿಷ್ಟು ಬಂಗಾರ, ಇಂತಿಷ್ಟು ಗಂಧದ ಕಟ್ಟಿಗೆ ಮೊದಲಾದ್ದನ್ನು ಹಾಕಿ, ಕಡಿಮೆಬಿದ್ದರೆ ಬೆಳ್ಳಿ ಹಾಕಬೇಕೆಂದು ಗೊತ್ತಾಗಿದ್ದಿತು. ಸಾವಿರಾರು ಜನರು ಸೇರಿದ್ದ ಸಂದರ್ಭವದು. ಎಲ್ಲವನ್ನೂ ತುಲಾಭಾರಕ್ಕೆ ಅರ್ಪಿಸಿದಾಗ, ಸುಮಾರು ೨೦೦ ತೊಲಿ ಬೆಳ್ಳಿ ಇನ್ನೂ ಬೇಕಾಯಿತು. ತಾವು ಗೊತ್ತುಮಾಡಿ ತಂದಿದ್ದ ಬೆಳ್ಳಿ ಮುಗಿದು ಹೋಗಿದ್ದಿತಲ್ಲ. ಆಯಿತು, 'ಉಳಿದಿದ್ದಕ್ಕೆ ಗಂಧದ ಕಟ್ಟಿಗೆಯನ್ನು ಹಾಕಿ ಮುಗಿಸಿಬಿಡೋಣ' ಎಂಬುದಾಗಿ ನೆರೆದಿದ್ದ ಪ್ರತಿಷ್ಠಿತರಲ್ಲಿ ಕೆಲವರು ಅಭಿಪ್ರಾಯಪಟ್ಟರು. ಅಲ್ಲಿಯೆ ಇದ್ದ ಗಳಗನಾಥರಿಗೆ ಈ ವಿಚಾರ ಸರಿಕಾಣಲಿಲ್ಲ. ಕೂಡಲೇ ಸ್ತ್ರೀಸಮೂಹದಲ್ಲಿ ನಿಂತಿದ್ದ ತಮ್ಮ ಪತ್ನಿಯ ಬಳಿಗೆ ಹೋಗಿ ಕೈಯಲ್ಲಿಯ ಪಾಟಲಿಗಳನ್ನು ಬಿಚ್ಚಿ ತಾ – ಎಂದು ಕೇಳಲು ಆ ಸತಿಯು ಸಂತೋಷದಿಂದ ತೆಗೆದುಕೊಟ್ಟಳು. ಬಹುಶಃ ಅಲ್ಲಿಯೆ ಇದ್ದ ಅಂಗಡಿಯ ಓರ್ವ ಸಾಹುಕಾರರಲ್ಲಿ ಒತ್ತೆ ಇಟ್ಟು ಸುಮಾರು ೨೦೦ ರೂ. ಇಸಿದುಕೊಂಡು ತುಲಾಭಾರಕ್ಕೆಂದು ದಾನಮಾಡಿದರು. ಒಂದೆರಡು ವರ್ಷಗಳ ಒಡನಾಟದಲ್ಲಿಯೆ ಗಳಗನಾಥರಲ್ಲಿ ಗುರುಭಕ್ತಿಯು ಎಷ್ಟೊಂದು ಆಳವಾಗಿ ಬೇರೂರಿದ್ದಿತು!

ಆರ್ಷೇಯ ಪರಂಪರೆಯಲ್ಲಿ ಅಚಲ ನಿಷ್ಠೆಯಿದ್ದ ಗಳಗನಾಥರಿಗೆ ಗುರುಕುಲದ ಮಾದರಿಯ ಶಿಕ್ಷಣ ಸಂಸ್ಥೆಯನ್ನು ನಡೆಸಬೇಕು; ಅಲ್ಲಿ ಸಂಸ್ಕೃತದ ಮೂಲಕ ವೇದಗಳ ಹಾಗೂ ಚತುಃಶಾಸ್ತ್ರದ ಅಧ್ಯಯನಕ್ಕೆ ಆಸ್ಪದವಿರಬೇಕು - ಎಂಬ ಅದಮ್ಯ ಉತ್ಸಾಹ ಅವರದು. ಜನರೆಲ್ಲ ಇಂಗ್ಲಿಷ್ ಶಿಕ್ಷಣಕ್ಕೆ ಧಡಪಡಿಸುತ್ತಿದ್ದರೆ, ಗಳಗನಾಥರು, ಅದು 'ಆಕಳಿಗೆ ಹುಲಿಯ ಹಾಲು ಕುಡಿಸಿದಂತೆ' ಎಂದು ಭಾವಿಸಿದ್ದರು! ಶೇಷಾಚಲರ ಷಷ್ಟ್ಯಬ್ದಿಯ ಕಾಲಕ್ಕೆ ಅವರ ಹಾಗೂ ಇತರರ ಮುಂದೆ ಪಾಠಶಾಲಾ ಸ್ಥಾಪನೆಯ ಸೂಚನೆಯನ್ನಿರಿಸಿ ಕೂಡಲೆ ಕಾರ್ಯಪ್ರವೃತ್ತರಾದರು. ಪಾಠಶಾಲೆಯನ್ನು ನಡೆಸುವಲ್ಲಿ ಅರ್ಥಿಕ ನೆರವನ್ನು ಪಡೆಯುವುದಕ್ಕೂ, ಅದರ ಪ್ರಸಾರಕ್ಕೂ ಪತ್ರಿಕೆಯೊಂದು ಬೇಕು. ಮತ್ತು ಆ ಪತ್ರಿಕೆಯನ್ನು ಮುದ್ರಿಸಲು ಪ್ರೆಸ್ ಇರಬೇಕು ಎಂದೂ ಕಂಡಿತು. ಸಾಮಾಜಿಕ ಸ್ವರೂಪವುಳ್ಳ ಈ ರೀತಿಯ 'ಧರ್ಮ' ಕಾರ್ಯದಲ್ಲಿ ಗಳಗನಾಥರೇ ಮುಂಬರಿದು ಮಠದಲ್ಲಿದ್ದ ಇತರರ ನೆರವಿನಿಂದ ಕಾರ್ಯಪ್ರವೃತ್ತರಾದರು.

ಅದೆಂಥ ಪಾಠಶಾಲೆ! ಗುರುವಿನ ಬೋಧನೆ, ಪುರಾಣ ಪ್ರವಚನ ಹಾಗೂ ಅನ್ನದಾನಗಳು ನಡೆಯುತ್ತಿದ್ದ ಆನಂದವನದಲ್ಲಿ ಸುವ್ಯವಸ್ಥಿತವಾದ ಗುರುಕುಲವೊಂದು ಸ್ಥಾಪಿತವಾಯ್ತು. ಮುಂದಿನ ಮೂರು -ನಾಲ್ಕು ವರ್ಷಗಳಲ್ಲಿಯೆ ಚತುಃಶಾಖೆಯ ಬ್ರಾಹ್ಮಣರ ಎಂಬತ್ತು ವಿದ್ಯಾರ್ಥಿಗಳಿಗೆ ಅನ್ನ-ವಸ್ತ್ರಗಳನ್ನು ಕೊಟ್ಟು, ವೇದ-ಯಾಜ್ಞಿಕ, ಕಾವ್ಯ-ಶಾಸ್ತ್ರಗಳ ಅಭ್ಯಾಸ ಮಾಡಿಸುವ ಎಂಟು ಜನ ಅಧ್ಯಾಪಕರು ಅಲ್ಲಿ ಇರುವ ಮಟ್ಟಿಗೆ ಅದು ವಿಸ್ತಾರವನ್ನು ಹೊಂದಿತು.

ಈ ಅಧ್ಯಾಪಕರು ಸಾಮಾನ್ಯರಲ್ಲ. ಬಹುದೊಡ್ಡ ಪಂಡಿತರು. ಸದಾಚಾರದ ಪ್ರತಿಮೂರ್ತಿಗಳು.* ಹಾಗಿಲ್ಲದೆ ಗಳಗನಾಥರು ಅವರನ್ನು ಕರೆತರುವವರೇ ಅಲ್ಲ! ಇದ್ದ ಊರಿನಿಂದ ಅವರನ್ನು ಬಿಡಿಸಿ ಸಕುಟುಂಬವಾಗಿ ಅವರನ್ನು ಆನಂದವನದಲ್ಲಿ ನಿಲ್ಲಿಸಿಕೊಂಡು, ಇಡೀ ಕುಟುಂಬದ

---

* ಅವರಲ್ಲಿ ಶ್ರೀನಿವಾಸ ಶಾಸ್ತ್ರಿಗಳೆಂಬವರು ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ಗುರುಬ್ರಹ್ಮಾನಂದರೆಂದು ಹೆಸರು ಪಡೆದಿದ್ದರು. ಈಚೆಗೆ ಅವರು ತೀರಿಕೊಂಡರು (೧೯೬೯). ಸುಪ್ರಸಿದ್ಧ ಜಂತಲಿ ಮಹಾದೇವಶಾಸ್ತ್ರಿಗಳು (ಹಾನಗಲ್) ೧೯೧೫ರ ಸುಮಾರಿಗೆ ಪಾಠಶಾಲೆಯನ್ನು ಸೇರಿದರು.

ಯೋಗಕ್ಷೇಮವನ್ನೇ ಹೊರಬೇಕೆನ್ನುವ ಮನೋಭಾವ ಗಳಗನಾಥರದು. ಈ ಅಧ್ಯಾಪಕವರ್ಗಕ್ಕೆ ಶೇಷಾಚಲರ ಸಾನ್ನಿಧ್ಯದ ಆಕರ್ಷಣೆಯೂ ಇದ್ದುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಆನಂದವನದಿಂದ ಪತ್ರಿಕೆಯೊಂದನ್ನು ಹೊರಡಿಸಬೇಕೆನ್ನುವ ವಿಚಾರವೂ ಗಳಗನಾಥರದೇ. 'ನನ್ನ ಅಕ್ಕರೆಯ **ಸದ್ಬೋಧ ಚಂದ್ರಿಕೆ**ಯೆಂಬ ಮಾಸಪತ್ರಿಕೆಯು ಸದ್ಗುರುನಾಥನ ಕೃಪೆಯಿಂದ ನನ್ನ ಜ್ಯೇಷ್ಠಪುತ್ರಿಯಂತೆ ಆನಂದವನದಲ್ಲಿ ಹುಟ್ಟಿದಳು' ಎಂದು ಗಳಗನಾಥರು ಹೇಳಿದ್ದಾರೆ.

ಸದ್ಬೋಧ ಚಂದ್ರಿಕೆಯು ಶ್ರೀ ಶೇಷಾಚಲರ ಬೋಧನೆಯ ಹಾಗೂ ಪಾಠಶಾಲೆಯ ಮುಖಪತ್ರವಾಗಿಯೆ ಹೊರಡುವ ನಿಯಮವನ್ನು ಹಾಕಿಕೊಂಡಿದ್ದಿತು. ಅಂತೆಯೇ ಆನಂದವನದ ಸುದ್ದಿಗಳೂ ಅದರಲ್ಲಿ ಪ್ರಕಟವಾಗುತ್ತಿದ್ದುವು. ೧೯೧೦-೧೧ರ ಕಾಲದ ಸಂಚಿಕೆಯೊಂದರಲ್ಲಿ ಬಂದ ಸುದ್ದಿಯಿದು: 'ವೇದ ಮತ್ತು ಸಂಸ್ಕೃತ ಶಾಲೆ ಇವು ಚೆನ್ನಾಗಿ ಸಾಗುತ್ತಿರುವವು- ವೇದ ಕಲಿಯುವ ಹುಡುಗರಿಗೆ ಪದವನ್ನು ಪ್ರಾರಂಭಮಾಡಿದೆ. ವೇದ ಕಲಿಯುವದರಿಂದ ಆಗುವ ಮಹತ್ವವನ್ನು ಶ್ರೀಕಂಠಶಾಸ್ತ್ರಿಗಳು ಎಲ್ಲ ವಿದ್ಯಾರ್ಥಿಗಳಿಗೂ ಸ್ಪಷ್ಟವಾಗಿ ತಿಳಿಹೇಳಿ 'ವೇದ' ಈ ವಿಷಯದ ಮೇಲೆ ಸ್ವಲ್ಪ ಹೊತ್ತು ಉಪನ್ಯಾಸ ಮಾಡಿದರು.... ಮತ್ತೊಂದು ದಿನ ಶ್ರೀ ನಾರಾಯಣ ಭಗವಾನರು ಸದಾಚಾರವನ್ನು ವಿದ್ಯಾರ್ಥಿಗಳಿಗೆ ಉಪದೇಶಿಸಿದರು.... ಸಂಸ್ಕೃತದ ಹುಡುಗರು ಕಾವ್ಯವನ್ನು ಕಲಿಯುತ್ತಿರುವವು.

೨. ಮಹಾದ್ವಾರವನ್ನು ಕಟ್ಟುವುದಕ್ಕೆ ಬೇಕಾದ ಕಲ್ಲಿನ ಸಾಮಾನುಗಳನ್ನು ಸಿದ್ಧಪಡಿಸುವ ಕೆಲಸವು ನಡೆದಿದೆ.

೩. ಸ್ವಾರಿಗಳು - ಶ್ರೀ ಸದ್ಗುರು ಮಹಾರಾಜರು ಅತಿಥಿಗಳನ್ನು ಪೂಜಿಸುತ್ತ ಆನಂದವನದಲ್ಲಿಯೇ ಇರುವರು. ಶ್ರೀ ನಾರಾಯಣ ಭಗವಾನರು ಶ್ರೀ ಗುರುಕಾರ್ಯಕ್ಕಾಗಿ ರೋಣ-ಸೂಡಿಯ ಕಡೆಗೆ ಸಂಚಾರ ಮಾಡುತ್ತಿರುವರು. ಶ್ರೀ ಶಂಕರ ಭಗವಾನರು ಮಹಾದ್ವಾರದ ಕೆಲಸದ ಮೇಲ್ವಿಚಾರಣೆಗಾಗಿ ಸದ್ಯಕ್ಕೆ ಇಲ್ಲಿಯೇ ಇರುವರು.'

ಪತ್ರಿಕೆ, ಮುದ್ರಣಾಲಯಗಳ ಕಾರ್ಯವನ್ನು ನೋಡಿಕೊಳ್ಳಲು ಹೋದವರಲ್ಲಿ ಮೂವರು ಮುಖ್ಯರು. ಅವರಲ್ಲಿ ಯಲ್ಲೋ ಗುಡ್ಡೋ ಕುಲಕರ್ಣಿ ಗುತ್ತಲದ ಶ್ಯಾನುಭೋಗ ಮನೆತನದವರು. ಪುಣೆಯಲ್ಲಿ ವ್ಯಾಸಂಗ

ಮಾಡಿದ ಈ ಪದವೀಧರರಿಗೆ ತರುಣ ವಯಸ್ಸಿನಲ್ಲಿಯೆ ಅಧ್ಯಾತ್ಮದ ಕಡೆಗೆ ಒಲವು ಹರಿಯಿತು. ಶೇಷಾಚಲ ಸಾಧುಗಳ ಪ್ರಭಾವಕ್ಕೆ ಒಳಗಾಗಿ ಆನಂದವನದಲ್ಲಿಯೆ ನೆಲೆನಿಂತು, ಸದ್ದಿಲ್ಲದೆ ಸೇವೆ ಸಲ್ಲಿಸಿದರು. ಇನ್ನೊಬ್ಬರು ರಾಮಚಂದ್ರ ತ್ರ್ಯಂಬಕ ಕರ್ಪೂರರರು.

ಪತ್ರಿಕೆಯನ್ನು ಹೊರಡಿಸುವ ಕೆಲಸ ಸುಲಭವಾದದ್ದಿರಲಿಲ್ಲ. ಮತ್ತು ಆನಂದವನದಂತಹ ಹಳ್ಳಿಯಲ್ಲಿ ಅನುಕೂಲತೆಯೂ ಇರಲಿಲ್ಲ. ಸುರುವಿಗೆ ಪತ್ರಿಕೆಯು ಹುಬ್ಬಳ್ಳಿಯ ಶ್ರೀಕೃಷ್ಣ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿತ್ತು. ಕೆಲತಿಂಗಳು ಕಳೆದ ಮೇಲೆ ಗಳಗನಾಥರು ಮತ್ತು ಯ.ಗೋ. ಕುಲಕರ್ಣಿಯವರು ಹುಬ್ಬಳ್ಳಿಯ ರೇಲ್ವೆ ಪ್ರೆಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಭಿ.ಪ. ಕಾಳೆಯವರ ಮನವೊಲಿಸಿ ಕರೆತಂದರು. ಯಂತ್ರಸಾಮಗ್ರಿಯನ್ನೂ ಕೊಳ್ಳಲಾಯಿತು. ಮುದ್ರಣವು ಒಂದು ಸುವ್ಯವಸ್ಥಿತ ವ್ಯವಸಾಯವಾಗಿರದಿದ್ದ ಆಗಿನ ಕಾಲದಲ್ಲಿ ಮೊಳೆಜೋಡಿಸುವುದರಿಂದ ಮೊದಲುಗೊಂಡು ಅತ್ಯಂತ ಅಚ್ಚುಕಟ್ಟಾಗಿ ಮುದ್ರಿಸಿ ಕ್ಲಿಪ್ತಕಾಲಕ್ಕೆ ಪತ್ರಿಕೆಯನ್ನು ಹೊರತಂದು, ಕಾಳೆಯವರು ಗಳಗನಾಥರಿಗೆ ನೀಡಿದ ಬೆಂಬಲ ಅಷ್ಟಿಷ್ಟಲ್ಲ.*

ಅತಿಥಿ ಸೇವೆ, ಪಾಠಶಾಲೆಗಳ ಮುಂದೆ ಪ್ರೆಸ್ ಹಾಗೂ ಪತ್ರಿಕೆಯ ಕೆಲಸವು ವ್ಯಾವಹಾರಿಕವೆಂದು ಕಂಡರೂ ಅವೆರಡೂ ಒಂದಕ್ಕೊಂದು ಪೋಷಕವಾಗಿಯೆ ಇದ್ದುವು. ಪಾಠಶಾಲೆಯ ೮೦-೯೦ ಜನರ ಒಪ್ಪೊತ್ತಿನ ಊಟ ಮತ್ತು ಅಧ್ಯಾಪಕರ ಸಂಬಳ - ಇಷ್ಟು ವೆಚ್ಚವನ್ನು ಪ್ರೆಸ್ಸಿನ ಪತ್ರಿಕೆಯ ಗಳಿಕೆಯಿಂದಲೇ ಪೂರೈಸಲಾಗುತ್ತಿತ್ತು. ವಿದ್ಯಾರ್ಥಿಗಳಿಗಾಗಲೀ, ಪ್ರೆಸ್ಸಿನ ಕೆಲಸಗಾರರಾಗಲೀ ಮೈಗಳ್ಳತನದಿಂದ ವರ್ತಿಸುವುದಕ್ಕೆ ಗಳಗನಾಥರು ಎಳ್ಳಷ್ಟೂ ಅವಕಾಶ ಕೊಡುತ್ತಿದ್ದಿಲ್ಲ. ಬದಲಾಗಿ ಶಿಸ್ತು-ವ್ಯವಸ್ಥೆಗಳನ್ನು ಚೆನ್ನಾಗಿ ನೆಲೆಗೊಳಿಸಿದ್ದರು.

ಕ್ರಿ.ಶ. ೧೯೦೯ರ ಸುಮಾರಿಗೆ, ಸದ್ಬೋಧ ಚಂದ್ರಿಕೆಗೆ ೮೦೦ ಜನ ಮಾತ್ರ ಚಂದಾದಾರರಿದ್ದರು. ಮರುವರ್ಷ 'ಕಮಲ ಕುಮಾರಿ' ಕಾದಂಬರಿಯು

* ಆಮೇಲೆ ಪ್ರೆಸ್ಸಿನ ಕೆಲಸಕ್ಕೆ ಶಿವರಾಮಪಂತ, ಚಿಕ್ಕಪ್ಪ ಕಮಲಪ್ಪ, ಗುಡ್ಡಪ್ಪ, ಪಂಚಪ್ಪ, ಮತ್ತು ಮಹಾರುದ್ರಪ್ಪ ಇವರಿಗೂ ಆ ಯಶಸ್ಸಿನಲ್ಲಿ ಪಾಲು ಇದೆ.)

ಕ್ರಮಾತಃ ಪ್ರಕಟವಾಗತೊಡಗಿತು. ಆಗ ಚಂದಾದಾರರ ಸಂಖ್ಯೆಯು ಏರತೊಡಗಿತು. ಲಾಭಾಂಶದ ವಿಚಾರವಿಲ್ಲದ್ದರಿಂದಲೂ, ಬಂದ ಹಣದಲ್ಲಿ ಕೆಲವೊಂದು ಪಾಲು ಪಾಠಶಾಲೆಯನ್ನು ತೂಗಿಸಿಕೊಂಡು ಹೋಗುವುದಕ್ಕೆಂದು ವೆಚ್ಚವಾಗುತ್ತಿದ್ದುದರಿಂದಲೂ, ಚಂದಾದಾರರ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸುವ ಅಗತ್ಯವಿದ್ದಿತು.

ಒಂದು ಸಲ, ಸಾವಿರಕ್ಕೆ ಮೇಲ್ಪಟ್ಟು ಹೊಸ ಚಂದಾದಾರರನ್ನು ಮಾಡಿಯೇ ತೀರಬೇಕೆಂದು ಸಂಕಲ್ಪಿಸಿ ಗಳಗನಾಥರು ಧಾರವಾಡದ ಟ್ರೇನಿಂಗ್ ಕಾಲೇಜಿಗೆ ಬಂದರು. ೧೯೧೧ನೆಯ ವರ್ಷವದು; ಗಳಗನಾಥರಿಗೆ, ಕಾದಂಬರಿಕಾರರೆಂಬ ಖ್ಯಾತಿ ಅಷ್ಟಾಗಿ ಬಂದಿರಲಿಲ್ಲ. ಹಳೆಯ ಪರಿಚಯದ ವಿದ್ಯಾರ್ಥಿಗಳೆದುರು, ತಮ್ಮ ಉದ್ದೇಶವನ್ನು ಹೇಳಿ, ಭರದಿಂದ ಚಂದಾದಾರರನ್ನು ಮಾಡತೊಡಗಿದರು. ಆ ಕೆಲಸ ನಡೆದಿದ್ದಾಗ 'ಮಗಳಿಗೆ ಜಡ್ಡು ಹೆಚ್ಚಾಗಿದೆ' ಎಂಬ ತಾರು ಬಂತಂತೆ! ಒಬ್ಬಳೇ - ಅದೂ ಅಪರೂಪವಾಗಿ ಹುಟ್ಟಿದ, ಮಗಳು. ಗಳಗನಾಥರು ಹಿಡಿದ ಕೆಲಸದಿಂದ ವಿಚಲಿತರಾಗದೇ 'ಸದ್ಗುರುವು ಮಾಡಿಸಿದ್ದಾಗಲೀ, ನಾನಂತೂ ನನ್ನ ಸಂಕಲ್ಪ ಈಡೇರುವವರೆಗೆ ಧಾರವಾಡವನ್ನು ಬಿಡುವುದಿಲ್ಲ' ಎಂದರು. ವಿದ್ಯಾರ್ಥಿಗಳ ಆಸರೆಯಿಂದ ಆ ಕೆಲಸವನ್ನು ಪೂರೈಸಿಯೇ ಅಗಡಿಗೆ ಹಿಂತಿರುಗಿದರು.

ಗಳಗನಾಥರ ರಸವತ್ತಾದ ಶೈಲಿಯಿಂದ ಕೂಡಿದ ಕಾದಂಬರಿಗಳು ಒಂದೊಂದಾಗಿ ಹೊರಬರುತ್ತಲೂ, ಪತ್ರಿಕೆಯ ವಂತಿಗೆದಾರರ ಸಂಖ್ಯೆ ಅದ್ಭುತ ರೀತಿಯಲ್ಲಿ ಏರತೊಡಗಿತು. ಪತ್ರಿಕೆಯು ನಿಯಮಿತವಾಗಿ ಹೊರಡುತ್ತಿದ್ದುದೂ ಒಂದು ಕಾರಣವಾಗಿದ್ದಿತು.

'ಸದ್ಬೋಧ ಚಂದ್ರಿಕೆಯು ತನ್ನ ತೊದಲು ನುಡಿಯ ಸವಿಯ ಹಾಗೂ ತನ್ನ ಕಿರಿಗೆಜ್ಜೆಗಳ ಇಂಚರ ರೂಪದಿಂದ ಕರ್ನಾಟಕದ ಪ್ರದೇಶವನ್ನೆಲ್ಲ ಆಕ್ರಮಿಸುತ್ತ ಹನ್ನೆರಡು ವರ್ಷಗಳಲ್ಲಿ ಕಾಶಿಯಿಂದ ರಾಮೇಶ್ವರದವರೆಗಷ್ಟೇ ಅಲ್ಲ. ಏಡನದಂಥ ಭರತಭೂಮಿಯ ಹೊರಭಾಗದಲ್ಲಿಯೂ ಇರುವ ಕನ್ನಡಿಗರಲ್ಲಿಯ ಏಳು ಸಹಸ್ರಜನ ಚಂದಾದಾರರ ಮನವನ್ನು ಸೆಳೆದುಕೊಂಡು 'ಅಹಹ! ಸದ್ಬೋಧ ಚಂದ್ರಿಕೆ'ಯು ಎಂಬ ಉದ್ಗಾರವನ್ನು ಹೊರಡಿಸಿದಳು. ಎಂಬುದಾಗಿ ಬಿಚ್ಚುಮನದ ಅಭಿಮಾನದಿಂದ ಗಳಗನಾಥರು ಉಸುರಿದ್ದಾರೆ.

ಪತ್ರಿಕೆ ಹಾಗೂ ಪಾಠಶಾಲೆಯ ಮೂಲಕವಾಗಿ ಆನಂದವನವು ಸಂಭ್ರಮದ ಕರ್ಮಭೂಮಿಯಾಗಿದ್ದಿತು. ಸಹಸ್ರಾರು ಪುಟಗಳ ಮುದ್ರಣವಾದ ಮೇಲೆ ಸಂಚಿಕೆಗಳ ಅಪಾರರಾಶಿಯನ್ನು ಚಕ್ಕಡಿಯಲ್ಲಿ ಹೇರಿಕೊಂಡು ಆರುಮೈಲಿನ ಅಂತರದಲ್ಲಿರುವ ಹಾವೇರಿಯ ಅಂಚೆ ಕಚೇರಿಗೆ ಹೋಗಿ ರವಾನಿಸುವುದು ಸಂಭ್ರಮದ ವಿಷಯವಾಗಿದ್ದಿತು.

ಸುರುವಿಗೆ ಅದರ ಚಂದಾಹಣ ಒಂದೂವರೆ ರೂಪಾಯಿ. ಮಹಾಯುದ್ಧ ಸುರುವಾಗಿ ೧೯೧೬ರ ಸುಮಾರಿಗೆ ಅದರ ಉತ್ಪಾದನಾ ವೆಚ್ಚವೇ ಎರಡೂವರೆ ರೂಪಾಯಿ ಆದಾಗ, ಗಳಗನಾಥರು ಚಂದಾ ಹಣವನ್ನು ಹೆಚ್ಚಿಸಿದರು – ನಾಲ್ಕಾಣೆ ಮಾತ್ರ! ಆದರೂ ಕೆಲವರು ಪತ್ರಿಕೆಯ ವಿ.ಪಿ.ಯನ್ನು ನಿರಾಕರಿಸಿದರಂತೆ. ಗಳಗನಾಥರಿಗೆ ಸ್ವಾಭಾವಿಕವಾಗಿಯೆ ಬೇಸರವಾಯಿತು. 'ಚಂದ್ರಿಕೆಯನ್ನು ಹೀಗೆ ಬಿಡುವುದರಿಂದ ಆನಂದವನದಲ್ಲಿಯ ವಿದ್ಯಾದಾನದ ಕಾರ್ಯಕ್ಕೆ ವ್ಯತ್ಯಯವಾಗುತ್ತದೆ. ಅದಕ್ಕಿಂತ ಅವರ ಕುಟುಂಬದ ಜನರಿಗೇ ಹಾನಿಯಾಗುತ್ತದೆ' ಎಂದು ಎಚ್ಚರಿಸಿದರು.

ಈ ಸ್ಥಿತಿಯಲ್ಲಿ ಪತ್ರಿಕೆಗೆ ಸಾಲವಾಗದೆ ಇದ್ದೀತೆ? ಆಗಿನ ದಿನಗಳಲ್ಲೇ ಇರಬೇಕು – ಗಳಗನಾಥರು ರಾವಜೀ ಕರಂದೀಕರರ ಬಳಿಗೆ ಹೋಗಿ ಸಾಲವನ್ನು ಕೇಳಿದರು. ಆ ಪ್ರಸಂಗವನ್ನು ಗಳಗನಾಥರು ಹೀಗೆ ವಿವರಿಸಿದ್ದಾರೆ:

ಗಳಗನಾಥ : ಸ್ಟೇಶನಿಗೆ ಕಾಗದದ ಪಾರ್ಸಲು ಬಂದಿದೆ. ಡಂಬ್ರೇಜು ಬೀಳುವದು. ಇಂದೇ ನನಗೆ ನಾನೂರು ರೂಪಾಯಿ ಬೇಕಾಗಿರುವುದರಿಂದ ಬಂದೆನು.

ಗುರುಗಳು : ಏನು ನೋಡಿ ನಿನಗೆ ನಾಲ್ಕು ನೂರು ರೂಪಾಯಿ ಕೊಡಬೇಕು?

ಗಳಗನಾಥ : ಪ್ರತ್ಯಕ್ಷ ತಮ್ಮ ಮುಂದೆ ನಿಂತಿರುವ ಗಳಗನಾಥನನ್ನು ನೋಡಿ.

ಗುರುಗಳು : ಗಳಗನಾಥನಿಂದ ಹಣ ಕೂಡುವದಾಗದಿದ್ದರೆ?

ಗಳಗನಾಥ : ಗಳಗನಾಥನು ನಿಮ್ಮ ಹೊಟ್ಟೆಯಲ್ಲಿ ಹುಟ್ಟಿಬರುವನು.

ಗುರುಗಳು : ಗಳಗನಾಥ, ನೀನು ಇಂತಹ ಛಿಡೆಗೆ ನನ್ನನ್ನು ಹಾಕಬೇಡ. ಹಣ ಮುಟ್ಟಿಸುವ ಬಗ್ಗೆ ನನಗೆ ನಂಬಿಗೆ ಮಾಡಿಕೊಟ್ಟ ಹೊರತು ಹಣವು ಸಿಗಲಾರದು.

ಗಳಗನಾಥ : ಏನು ಮಾಡಿದರೆ ತಮಗೆ ನಂಬಿಗೆಯಾಗುವದು?

ಗುರುಗಳು : ನಿನ್ನಲ್ಲಿದ್ದ ವಸ್ತ್ರ ಒಡಿವೆಗಳನ್ನು ಅಥವಾ ಹೊಲವನ್ನು ಅಡವು ಇಡು.

ಗಳಗನಾಥ : ತಮ್ಮ ಮಾತು ಕೇಳಿ ನನಗೆ ಬಹಳ ವ್ಯಸನವಾಗುತ್ತದೆ. ಗಳಗನಾಥನ ಬಳಿಯಲ್ಲಿ ವಸ್ತ್ರ ಒಡಿವೆಗಳೇನೂ ಇಲ್ಲೆಂಬುದು ತಮಗೆ ಗೊತ್ತಿದ್ದ ಸಂಗತಿಯೇ ಆಗಿರುವದು. ಇನ್ನು ಆತನು ತನ್ನ ಹೊಲವನ್ನು ಒತ್ತೀ ಹಾಕಬಹುದು. ಆದರೆ ಗಳಗನಾಥನಿಗಿಂತ ಗಳಗನಾಥನು ಸಂಪಾದಿಸಿದ ವಸ್ತ-ಒಡಿವೆ, ಹೊಲ-ಮನೆಗಳಂಥ ಕ್ಷುದ್ರ ಜಡಪದಾರ್ಥಗಳೇ ಸಾಮಾನ್ಯ ಧನಿಕರಂತೆ ತಮಗೂ ಮಹತ್ವದವಾಗಿ ತೋರಿದವಲ್ಲವೆ!

ಗುರುಗಳು : ಗಳಗನಾಥ, ನಿನ್ನ ಮಾತಿಗೆ ನಾಲ್ಕು ನೂರು ಕೊಡುತ್ತೇನೆ. ತಕ್ಕೊಂಡು ಹೋಗು."

ಸದ್ಬೋಧ ಚಂದ್ರಿಕೆಯ ಮೂಲಕ ಗಳಗನಾಥರು ಅನೇಕ ಲೇಖಕರನ್ನು ಮುಂತಂದರು. ಗ್ರಂಥರಚನೆಗೆ ತಮ್ಮಷ್ಟಕ್ಕೆ ತಾವೇ ಮನಸ್ಸು ಮಾಡದವರು ಸಹ, ಸದ್ಬೋಧ ಚಂದ್ರಿಕೆಯಿಂದಾಗಿ ಲೇಖನಿಯನ್ನು ಕೈಯಲ್ಲಿ ಹಿಡಿಯಬೇಕಾಗಿ ಬಂತು. ಮೇಲೆ ಹೇಳಿದ ಯ.ಗೋ. ಕುಲಕರ್ಣಿ, ಆರ್.ಟಿ. ಕರ್ಪೂರ, ಭಿ.ಪ. ಕಾಳೆ ಇವರಂತೂ ಸರಿಯೇ. ಪಾಠಶಾಲೆಯಲ್ಲಿದ್ದವರೂ ಆಗೀಗ ಬರೆಯುತ್ತಿದ್ದರು. ಅನೇಕ ಲೇಖನಗಳಿಗೆ ಲೇಖಕನ ಹೆಸರೇ ಇರುತ್ತಿರಲಿಲ್ಲ. ಇಂಥ ಅನೇಕ ಬಿಡಿ ಲೇಖನಗಳಲ್ಲಿ ಗಳಗನಾಥರವೂ ಇರುತ್ತಿದ್ದುವೆಂಬುದನ್ನು ಶೈಲಿಯ ಮೇಲಿಂದ ನಿರ್ಧರಿಸಲು ಸಾಧ್ಯ. ೧೯೧೧-೧೨ರ ಸುಮಾರಿಗೆ ಪ್ರಕಟವಾದ **ಸದ್ಬೋಧಾವಲಿ** ಹಾಗೂ **ನೈತಿಕ ಕಥಾಮಾಲೆ**ಗಳು ಅವರವೇ ಇರಬೇಕು.

ಈ ಬಗೆಯ ಲೇಖನಾವಳಿಯನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಿ ಆಮೇಲೆ ಅದನ್ನು ಗ್ರಂಥರೂಪದಲ್ಲಿ ಹೊರತರುವ ಕ್ರಮವು ಆಗಿನ ಮೈಸೂರು ಹಾಗೂ ಮುಂಬಯಿ ಕರ್ನಾಟಕದಲ್ಲಿ ಆಗಲೇ ಬಳಕೆಯಲ್ಲಿದ್ದಿತು. ಅಲ್ಲದೆ ಪುಣೆಯ

ಕರಮಣೂಕ' ಧಾರವಾಡದ 'ವಾಗ್ಭೂಷಣ'ಗಳು ಈ ರೀತಿ ಹೊರಡುತ್ತಿದ್ದುದನ್ನು ಅವರು ಸ್ವತಃ ನೋಡಿದ್ದರು. ಇಂಥ ಆವಳಿ ರೂಪದ ಗಳಗನಾಥರ ಕೃತಿಗಳಲ್ಲಿ ಮೊದಲನೆಯದು **ಚಿದಂಬರ ಚರಿತ್ರೆ.** ಕರ್ನಾಟಕದ ಅಂಚಿನಲ್ಲಿರುವ ಗುರ್ಲ ಹೊಸೂರಿನಲ್ಲಿ ಜನಿಸಿದ ಈ ಚಿದಂಬರರ ಪಾವನ ಚರಿತ್ರೆಯು ಯಾವ ಕಾಲಕ್ಕೂ ಪಠನೀಯವಾದುದು. ಮೇಲಾಗಿ ಶ್ರೀ ಶೇಷಾಚಲರು ಚಿದಂಬರರ ಅನಂತರದ ಅವತಾರವೆಂದೇ ಗಳಗನಾಥರು ನಂಬಿದ್ದರು. ಅವರ ಮುನ್ನುಡಿಯ ಈ ಮಾತುಗಳನ್ನು ಗಮನಿಸಬೇಕು:

"ಶ್ರೀ (ಚಿದಂಬರ) ದೀಕ್ಷಿತರ ಅವತಾರವು ಸಮಾಪ್ತವಾಗಿ ೧೦೦ ವರ್ಷಗಳ ಮೇಲೆ ಆಗಿದ್ದರೂ (೧೯೦೯) ಅವರಿಂದ ಉದ್ಧೃತವಾದ ಕರ್ನಾಟಕದೊಳಗಿನ ಎಷ್ಟೋ ಮನೆತನದವರ ಬಾಯಿಂದ ಈವೊತ್ತಿಗೂ ಆ ಮಹಾತ್ಮನ ಹಲವು ಕೌತುಕದ ಸಂಗತಿಗಳನ್ನು ಕೇಳಬಹುದು. ದೃಢಭಾವವುಳ್ಳವರು ಮಹಾಸ್ವಾಮಿಯ ಸಾಮರ್ಥ್ಯವನ್ನು ಈವೊತ್ತಿಗೂ ಪರೀಕ್ಷಿಸಬಹುದು. ಆದರೆ ಈ ಮಾತು ಸುಲಭವಲ್ಲ. ಮನೆಯಲ್ಲಿ ಹೆಂಡತಿಯು ಮಾಡಿದ ಅಡಿಗೆಯ ಪರೀಕ್ಷೆಯನ್ನು ಸರಿಯಾಗಿ ಮಾಡಲಿಕ್ಕೆ ಬರುವದು ಕಠಿಣವಾಗಿರಲು ಈಶ್ವರನ ಅವತಾರಗಳನ್ನು ಪರೀಕ್ಷಿಸುವದು ಹಾದಿಯ ಮೇಲೆ ಬಿದ್ದಿರುವದಿಲ್ಲ. ಈ ಅವತಾರಗಳ ವಿಷಯವಾಗಿ ಆರ್ಯರಾದ ನಮ್ಮಲ್ಲಿ ಉಂಟಾದ ಅವಿಶ್ವಾಸವೇ ನಮ್ಮ ಅವನತಿಯ ಕಾರಣವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು.

ಶ್ರೀ ಚಿದಂಬರ ಚರಿತ್ರದಲ್ಲಿ ನಾವು ಪಿತೃಭಕ್ತಿ, ಈಶ್ವರ ಭಕ್ತಿ, ರಾಜನಿಷ್ಠೆ, ಪರಧರ್ಮ ಸಹಿಷ್ಣುತೆ, ಭೂತದಯೆ, ಸಮತ್ವ, ನಿರಭಿಮಾನ, ಪೌರುಷ ಪ್ರಿಯತೆ, ಪ್ರಪಂಚದಿಂದ ಪರಮಾರ್ಥವನ್ನು ಸಾಧಿಸುವುದು – ಹೀಗೆ ಒಂದಲ್ಲ ಎರಡಲ್ಲ ಹಲವು ಗುಣಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಹಲವು ಅಮಾನುಷ ಕೃತ್ಯಗಳನ್ನು ಮಾಡಿದಾಗ್ಯೂ ತಾನು ದರಿದ್ರ ಬ್ರಾಹ್ಮಣನೆಂದು ದೀನತೆಯನ್ನು ತೋರಿಸುತ್ತ ಬಂದದ್ದು ನಿರಭಿಮಾನದ ಉದಾಹರಣೆಯಾಗಿದೆ.

ಇಂಥ ಸಾತ್ವಿಕ ವೃತ್ತಿಯ ವಿಭೂತಿಯ ಚರಿತ್ರವು ಕನ್ನಡಿಗರಿಗೆ ಲಭಿಸಿದ್ದರ ಶ್ರೇಯಸ್ಸೆಲ್ಲ ಅವರನ್ನು ಕೂಡಿಕೊಳ್ಳುವದರಿಂದ ಭಾಷಾಂತರ ಕೃತ್ಯವು ಬರಿಗೈಯ ಬಂಟನಾಗಿ ಒಂದೂ ಚಿಂತೆ ಇಲ್ಲದೆ ಸ್ವಸ್ಥವಾಗಿರುವುದು. ಈ ಚರಿತ್ರವನ್ನು ಮಹಾಸ್ವಾಮಿಯವರ ದೌಹಿತ್ರ ಸಂತತಿಗೆ ಸಾಗಿಬಂದಿದ್ದ ಕೈ.ವಾ. ಪೂಜ್ಯ ರಾಂಬ ದೀಕ್ಷಿತರು ಮಹಾರಾಷ್ಟ್ರದ ಓವಿಬದ್ಧವಾದ ಪ್ರಾಸಾದಿಕ ಚರಿತ್ರದಿಂದ

ಆರಿಸಿ, ಭಾಷಾಂತರಿಸಿ ಸಿದ್ಧಪಡಿಸಿರುವುದರಿಂದ ಮೂಲದ್ರವ್ಯದ ಶ್ರೇಯಸ್ಸು ಅವರನ್ನು ಕೂಡಿಕೊಳ್ಳುತ್ತದೆ. ಸ್ವಸ್ಥಮನಸ್ಸಿನಿಂದ, ಮಡಿಯಿಂದ ಕುಳಿತು ಭಾಷಾಂತರಿಸುವ ಅನುಕೂಲ್ಯವೂ ವಿಷಯವನ್ನು ಆರಿಸುವ ಗುಟ್ಟೂ ಗುರುವರ್ಯ ರಾ.ಬಾ. ಕರಂದೀಕರರವರಿಂದ ದೊರೆತದ್ದರಿಂದ ಬಂಡವಲದ ಶ್ರೇಯಸ್ಸು ಅವರನ್ನು ಕೂಡಿಕೊಳ್ಳುವದು. ಸಮರ್ಥನಾದ ಶ್ರೀ ಶೇಷಾಚಲ ಸದ್ಗುರುವು ನಿಂತು ಕೆಲಸ ಮಾಡಿದ್ದರಿಂದ ಶ್ರಮದ ಶ್ರೇಯಸ್ಸೆಲ್ಲ ಆತನನ್ನು ಕೂಡಿಕೊಳ್ಳುವುದು. ಇನ್ನೇನಾದರೂ ಅಲ್ಪ ಸ್ವಲ್ಪ ಶ್ರೇಯೋಭಾಗವಿದ್ದರೆ ಅದು ಆ ಮೊದಲೇ ಕನ್ನಡದಲ್ಲಿ ಚಿದಂಬರ ಚರಿತ್ರೆಯನ್ನು ಬರೆದಿದ್ದ ಮ.ರಾ.ರಾ. ಗುರುನಾಥ ವೆಂಕಟೇಶ ಕಿತ್ತೂರ, ಬಿ.ಎ. ಇವರನ್ನು ಕೂಡಿಕೊಳ್ಳುವುದು.'

ಗಳಗನಾಥರ ಬರವಣಿಗೆಯ ವಿಶಿಷ್ಟಕ್ರಮವು ಮೊದಲಿಗೆ ಕಂಡುಬಂದದ್ದು **ಕಮಲ ಕುಮಾರಿ**ಯಲ್ಲಿ. ಪತ್ರಿಕೆಯ ಒಂದು ಫಾರ್ಮಿನ ಮುದ್ರಣಕ್ಕೆ ಅನುಕೂಲವಾಗುವಂತೆ ಒಂದೊಂದು ಪ್ರಕರಣ, ಮುಂದಿನ ಕಥೆಯನ್ನು ಓದಲು ಕುತೂಹಲ ಹುಟ್ಟುವಂತೆ ಪ್ರತಿಪ್ರಕರಣದ ಶೀರ್ಷಿಕೆಗಳು : 'ಇವರು ಯಾರಿರಬಹುದು?' 'ಪಾಪ ಏನು ಮಾಡಿಯಾರು?' 'ಬಂದವರು ಅಲ್ಲಿಯೇ ಉಳಿದರು' ಇತ್ಯಾದಿ. ಅವರು ಅನುವಾದಿಸಿದ ಅಷ್ಟ ಕಾದಂಬರಿಗಳಲ್ಲಿ ಇದುವೆ ಮೊದಲಿನದು. ಚಿದಂಬರ ಚರಿತ್ರೆಯೊಂದಿಗೆ ಇದು ಕೂಡ ಕ್ರಮಶಃ ಸದ್ಬೋಧ ಚಂದ್ರಿಕೆಯಲ್ಲಿ ಪ್ರಕಟವಾಗಿ, ಅದರ ಜೊತೆಗೇ ೧೯೧೦ರಲ್ಲಿ ಗ್ರಂಥ ರೂಪವಾಗಿ ಹೊರಬಂದಿತು. ಅಲ್ಲದೆ, ಚಂದ್ರಿಕೆಯ ಪತ್ರಿಕಾ ಧೋರಣೆಯಲ್ಲಿ ತುಸು ಮಾರ್ಪಡುವುದಕ್ಕೂ ಇದು ಕಾರಣವಾಯಿತು: "ಧಾರ್ಮಿಕ ಲೇಖನಗಳಿಗೆ ತುಂಬಾ ಆಶ್ರಯ ಕೊಡುತ್ತಿರುವ ಸದ್ಬೋಧ ಚಂದ್ರಿಕೆಯಲ್ಲಿ ಕಮಲಕುಮಾರಿಯು ಪ್ರಸಿದ್ಧವಾದದ್ದಕ್ಕಾಗಿ ನನಗೆ ಬಹಳ ಸಮಾಧಾನವಾಗಿದೆ; ಯಾಕಂದರೆ ಕಮಲಕುಮಾರಿಯಂಥ ಧರ್ಮಿಷ್ಠ ಸಾಧ್ವಿಯು ಹಾಗೂ ತಾನಾಜಿಯಂಥ ಧರ್ಮನಿಷ್ಠ ಹಾಗೂ ರಾಜನಿಷ್ಠ ವೀರನ ಪವಿತ್ರವಾದ ವರ್ಣನೆಗಳಿಗೆ ಇದಕ್ಕಿಂತ ಪವಿತ್ರವಾದ ಸ್ಥಳವು ದೊರೆಯುವುದು ದುರ್ಲಭವು."

ಶಿವಾಜಿಯ ವೀರ ಸೇನಾಪತಿಯಾದ ತಾನಾಜಿಯು ಸಿಂಹಗಡವನ್ನು ಉದಯಭಾನು ಎಂಬ ಔರಂಗಜೇಬನ ಸರದಾರನಿಂದ ಕೈವಶಮಾಡಿಕೊಂಡು ಯುದ್ಧರಂಗದಲ್ಲಿ ವೀರಸ್ವರ್ಗವನ್ನು ಪಡೆದ ಕಥೆಯಿದು. ಮೂಲತಃ ಇದು ಮರಾಟರ ಚರಿತ್ರವಾದರೂ ಕಮಲಕುಮಾರಿ, ಜಗತ್ಸಿಂಗ ಮತ್ತು ಉದಯಭಾನು

– ಈ ರಜಪೂರತ ಘಟನೆಗಳೂ ಮಿಳಿತವಾಗಿವೆ. 'ಕೋಟೆ ಕೈವಶವಾದರೂ ಸಿಂಹವು ಕಾಲವಶವಾಯಿತು' ಎಂಬರ್ಥದ ಮೂಲದ ಶೀರ್ಷಿಕೆಯನ್ನು ಬಿಟ್ಟುಕೊಟ್ಟು ಗಳಗನಾಥರು 'ಕಮಲಕುಮಾರಿ' ಎಂಬುದನ್ನು ಆಯ್ದುಕೊಂಡರಲ್ಲದೆ, ಅವಳ ದುರ್ದೈವದ ಚಿತ್ರಣವನ್ನು ಇನ್ನಷ್ಟು ಬೆಳಗಿಸಿದ್ದಾರೆ. ಕಮಲ ಕುಮಾರಿಯ ಪಾತಿವ್ರತ್ಯ, ದೇವತೆಯ ಅಕೃತ್ರಿಮ ಸ್ನೇಹಪರತೆ, ಜಗತ್ಸಿಂಗನು ಅವಳಲ್ಲಿ ತೋರಿದ ಭಗಿನೀ ಭಾವ, ಶಿವಾಜಿಯ ಉದಾರಚರಿತೆ, ತಾನಾಜಿಯ ಪರಿವಾರದ ಸರಳ ಮನೋಭಾವ ಮುಂತಾದವುಗಳಿಂದ ಈ ಕಥೆ ರಮಣೀಯವಾಗಿದೆ. ಘಟನೆಗಳು ಒಂದಕ್ಕೊಂದು ಪೋಷಣೆಯೀಯುತ್ತ ಕಥನವು ಪರಿಪೂರ್ಣವಾಗಿದೆ. ರಸವತ್ತಾದ ಈ ಕೃತಿಯೇ ಗಳಗನಾಥರ ಜನಪ್ರಿಯತೆಗೆ ಮೊದಲ ಸೋಪಾನವಾಯಿತು. ಶೇಷಾಚಲರು 'ಮಹಾರಾಜಾ, ನಿನ್ನ ಲೇಖಣಿಗೆ ನಿಶಾನ ಹತ್ತುವದು' ಎಂದೆನ್ನುವಂತಾಯ್ತು.

ಭಾರತದ ಬ್ರಿಟಿಷರ ಸಾರ್ವಭೌಮತ್ವವು ಗಳಗನಾಥರಿಗೆ ಇಷ್ಟವಾದ ವಿಷಯ! ೧೯೧೧ರಲ್ಲಿ **'ರಾಜನಿಷ್ಠೆಯೂ ನಮ್ಮ ಪುಣ್ಯಶಾಲಿಗಳಾದ ಸಾರ್ವಭೌಮರೂ'** ಎಂಬ ಪುಸ್ತಕವನ್ನು ಕೃಷ್ಣಾಜಿ ಶಂಕರ ಇಂಗಳೆಕರ ಎಂಬವರೊಡನೆ ಹೊರತಂದರು. ಮುಂದೆ ಕೆಲವು ಕಾದಂಬರಿಗಳ ಪೀಠಿಕೆಗಳಲ್ಲಿಯೂ, ಕುಮುದಿನಿಯಲ್ಲಿಯೂ ಬ್ರಿಟಿಷರನ್ನು ಹೊಗಳಿದ್ದಾರೆ. ಇದೊಂದು ನಮಗೆ ಒಪ್ಪಲಾಗದ ವಿಷಯವಾದರೂ ಸನಾತನ ಧರ್ಮಾಭಿಮಾನಿಗಳಾಗಿದ್ದ ಅವರಿಗೆ ಬ್ರಿಟಿಷರು ಬಹಿರಂಗವಾಗಿಯಾದರೂ ತೋರುತ್ತಿದ್ದ ಧರ್ಮಸಹಿಷ್ಣುತೆ, ಪ್ರಜಾಹಿತದ ಕೆಲವು ಆಡಳಿತಕಾರ್ಯ – ಇವು ಗಳಗನಾಥರ ಈ ವಿಶಿಷ್ಟ ನಿಲುಮೆಗೆ ಕಾರಣವಾಗಿದ್ದವು.

ಮುಂದಿನ ಎಂಟು ವರ್ಷಗಳಲ್ಲಿ ಅಂದರೆ ಆನಂದವನದಲ್ಲಿ ಅವರು ಇದ್ದಷ್ಟು ಕಾಲ, ಎಂಟು ಕಾದಂಬರಿಗಳನ್ನು ಸದ್ಬೋಧ ಚಂದ್ರಿಕೆಯ ಮೂಲಕ ಹೊರತಂದರು. ಅವುಗಳಲ್ಲಿ **ವೈಭವ** (೧೯೧೨) ಮತ್ತು **ಧರ್ಮ ರಹಸ್ಯ** (೧೯೧೪)ಗಳು ಕ್ರಿ.ಶ. ಪೂರ್ವದ ಭಾರತ ಚರಿತ್ರೆಗೆ ಸಂಬಂಧಪಟ್ಟಿವೆ. **ವೈಭವ ಅಥವಾ ಚಾಣಕ್ಯನ ಕಾರಸ್ಥಾನವು** ಹರಿನಾರಾಯಣ ಆಪ್ಟೆಯವರ ಕೃತಿಯನ್ನು ಆಧರಿಸಿದೆ. ವಿಶೇಷವೆಂದರೆ 'ಕಮಲ ಕುಮಾರಿ'ಯಲ್ಲಿ ಅದಾವ ಹೆಚ್ಚು ಕಡಿಮೆಗಳನ್ನು ಮಾಡಿಕೊಳ್ಳದೇ ಅನುವಾದಿಸಿದ್ದಾದರೆ ಇದರಲ್ಲಿ ಮೂಲದ ಎಷ್ಟೋ ಅಂಶಗಳನ್ನು ಬಿಡಲಾಗಿದೆ.

ಚಂದ್ರಗುಪ್ತ -ಚಾಣಕ್ಯ - ರಾಕ್ಷಸರ ಕಥಾನಕವು ಅನೇಕ ವ್ಯತ್ಯಾಸಗಳನ್ನು ಹೊಂದಿ ವಿವಿಧ ರೂಪದಲ್ಲಿ ಪ್ರಚಲಿತವಾಗಿದ್ದಿತು. ಅವುಗಳಲ್ಲಿ ಕೆಂಪು ನಾರಾಯಣನ ಮುದ್ರಾಮಂಜೂಷವೂ ಒಂದು. ಅದರಂತೆ ಆಪ್ಟೆಯವರೂ ತಮ್ಮದೆ ಆದ ದೃಷ್ಟಿಕೋನದಿಂದ ಕಥೆಯನ್ನು ಬೆಳೆಸಿಕೊಂಡು ಹೋಗಿದ್ದಾರೆ. ಮುರಾದೇವಿಯ ರಾಕ್ಷಸೀವೃತ್ತಿ ಮತ್ತು ಚಾಣಕ್ಯನು ಅಮಾತ್ಯರಾಕ್ಷಸನ ವಿಷಯದಲ್ಲಿ ತೋರಿದ ಭಕ್ತ್ಯಾದರ - ಇವು ಈ ಕಾದಂಬರಿಯ ಪ್ರತ್ಯೇಕತೆಯ ಅಂಶಗಳಾಗಿವೆ. ಇದಕ್ಕೂ ಮುದ್ರಾಮಂಜೂಷಕ್ಕೂ ಇರುವ ಭೇದಗಳನ್ನು ಗಳಗನಾಥರೇ ಪ್ರಸ್ತಾವನೆಯಲ್ಲಿ ತೋರಿಸಿದ್ದಾರೆ ಮತ್ತು "ಕೆಲಕೆಲವು ಕಡೆಯಲ್ಲಿ ಮುದ್ರಾಮಂಜೂಷವು ಹೆಚ್ಚು ಸರಸವಾಗಿದ್ದರೂ 'ಸತ್ಯಮೇವ ಜಯತೇ' ಎಂಬ ದೃಷ್ಟಿಯಿಂದ ನೋಡಿದರೆ ವೈಭವವು ಮುದ್ರಾಮಂಜೂಷಕ್ಕಿಂತ ಗಂಭೀರವಾಗಿರುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕ್ರಿ.ಶ. ೧೯೧೨ರಲ್ಲಿ ಹೊರಬಂದ **ಕುಮುದಿನಿ** ಕಾದಂಬರಿಯು ಗಳಗನಾಥರ ವಾಙ್ಮಯ ಸೇವೆಯಲ್ಲಿ ಒಂದು ವಿಶೇಷ ಸಾಧನೆಯಾಗಿದೆ. ಇದು ಅವರ ಸ್ವತಂತ್ರ ಐತಿಹಾಸಿಕ ಕಾದಂಬರಿ. ಜೊತೆಗೆ ಕನ್ನಡ ಇತಿಹಾಸದ ಹಿನ್ನೆಲೆಯ ಅವರ ಪ್ರಥಮ ಕಾದಂಬರಿಯೂ ಆಗಿದೆ. ಹಾಲಭಾವಿ ಅವರ 'ಕಳೆದುಹೋದ ಕನ್ನಡಿಗರ ಸಾಮ್ರಾಜ್ಯ' ಎಂಬ ಕೃತಿಯ ನಾಲ್ಕಾರು ಪುಟಗಳ ಸಾಮಗ್ರಿಯು ಕಾದಂಬರಿಯಾಗಿ ಅರಳಿತು. ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳು ಕಡಿಮೆ. ತಮಗೆ ಇಂಥ ಹೊಸ ಕಾದಂಬರಿಗಳನ್ನು ಬರೆದು ಅನುಭವವಿಲ್ಲ. ಮೇಲಾಗಿ ಕನ್ನಡಿಗರಿಗೆ ಅದ್ಭುತ ಕಾಲ್ಪನಿಕ ಕಾದಂಬರಿಗಳಷ್ಟು ಐತಿಹಾಸಿಕ, ಕಾದಂಬರಿಗಳು ಸೇರವು - ಎಂಬ ಅಳುಕಿನಿಂದ ಬರೆಯಲು ತೊಡಗಿದರು. ಆದರೇನು, ಈ ಮಧ್ಯದ ಮರಾಠೀ ಕಾದಂಬರಿಗಳ ರೂಪಾಂತರ ಕಾರ್ಯದಿಂದ ಹದಗೊಂಡ ಅವರ ಬರವಣಿಗೆ ನಿಜಕ್ಕೂ ಹೃದ್ಯವಾಗಿ ಹೊರಹೊಮ್ಮಿತು.

ಇದರಲ್ಲಿ ಕುಮುದಿನಿಯು ಮುಖ್ಯ ನಾಯಿಕೆಯಾದ್ದರಿಂದ, ಅವಳ ಹೆಸರು ಕಾದಂಬರಿಯ ಶೀರ್ಷಿಕೆಯಾಗಿದೆ. ವಿಜಯನಗರದ ರಾಯರು ತಮ್ಮ ಆನೆಯಂಥ ಸಾಮ್ರಾಜ್ಯವನ್ನು ಕಳಕೊಂಡು ಬಾಲದಂಥ ಚಂದ್ರಗಿರಿಯ ಸಂಸ್ಥಾನಕ್ಕಾಗಿ ತಮ್ಮೊಳಗೆ ಬಡಿದಾಡಿದ್ದನ್ನೂ, ವರ್ಣಿಸಿರುವುದರಿಂದ ಇದಕ್ಕೆ

'ಬಾಲಕ್ಕೆ ಬಡಿದಾಟ' ಎಂಬ ಮತ್ತೊಂದು ಹೆಸರನ್ನು ಕೊಟ್ಟಿದ್ದಾರೆ. ಚಂದ್ರಗಿರಿಯ ಪಟ್ಟಕ್ಕಾಗಿ ರಂಗರಾಯನ ಪಕ್ಷದ ಎಚ್ಚಮನಾಯಕನು ಜಗರಾಯನೊಡನೆ ಹೋರಾಡಿ ವಿಜಯಿಯಾದ ಕಥೆ ಇಲ್ಲಿದೆ. ಜಗರಾಯನು ರಂಗರಾಯನನ್ನು ಸೆರೆಯಲ್ಲಿಟ್ಟಾಗ ಕುಮುದಿನಿಯು ರಾಜಕುವರನನ್ನು ಯುಕ್ತಿಯಿಂದ ಪಾರುಮಾಡಿದ ವೀರರಮಣಿ. ಲಗ್ನವಾದ ಹೊಸತರಲ್ಲಿಯೇ ಪತಿ ಎಚ್ಚಮನಾಯಕನನ್ನು ಪ್ರಾಣಾಪಾಯದಿಂದ ರಕ್ಷಿಸಿದವಳು. ಜೊತೆಗೆ ಸತ್ಸಂಗದಿಂದ ಪುನೀತಳಾದವಳು. ಹಲವಾರು ಸದ್ಗುಣಗಳ ಖಣಿಯಾದ ಅವಳ ಪಾತ್ರಸೃಷ್ಟಿ ಕನ್ನಡ ಕಾದಂಬರೀ ಪ್ರಪಂಚದಲ್ಲಿ ಚಿರಕಾಲ ಉಳಿಯುವಂತಹದಾಗಿದೆ. ಜೊತೆಗೆ ಎಚ್ಚಮನಾಯಕನ ಮಿತ್ರನಂತಿದ್ದ ಚಾಂದಖಾನನೂ ನಮ್ಮ ಆದರಕ್ಕೆ ಪಾತ್ರನಾಗುತ್ತಾನೆ. ಎಚ್ಚಮನಾಯಕನು ಕನ್ನಡ ವೀರರ ಪ್ರತಿರೂಪ! ವೀರಾಗ್ರಣಿಯಾದ ಅವನು ಜಾತ್ಯಾ ಸರಳಮನಸ್ಸಿನವನಾದರೂ ಮನೋದಾರ್ಢ್ಯವಿಲ್ಲದವನೂ, ಸಂಶಯ ಸ್ವಭಾವದವನೂ ಆಗಿದ್ದಾನೆ.

'ಹಾಸ್ಯರಸವೊಂದನ್ನು ಬಿಟ್ಟು ಉಳಿದ ರಸಗಳೆಲ್ಲ ಬಹುತರ ಈ ಕಾದಂಬರಿಯಲ್ಲಿ ಇರುತ್ತವೆ' ಎಂದು ಮುನ್ನುಡಿಯಲ್ಲಿ ಗಳಗನಾಥರು ಹೇಳಿದ್ದಾರೆ. ಅವುಗಳಲ್ಲಿ ವೀರ, ಕರುಣ ಹಾಗೂ ಶೃಂಗಾರ ಈ ಮೂರು ರಸಗಳು ಚೆನ್ನಾಗಿ ಮುಪ್ಪುರಿಗೊಂಡಿವೆ. ಕಾದಂಬರಿಯ ಜೀವಂತಿಕೆಯನ್ನು ಹೆಚ್ಚಿಸಿವೆ.

ಆದರೂ ಗಳಗನಾಥರಿಗೆ ತಮ್ಮ ಈ ಹೊಸ ಪ್ರಯತ್ನವನ್ನು ಓದುಗರು ಸ್ವಾಗತಿಸುವ ಬಗ್ಗೆ ಸಂದೇಹ! 'ವಾಚಕರು ಒಮ್ಮೆಯಾದರೂ ಈ ಕಾದಂಬರಿಯನ್ನು ಪೂರ್ಣವಾಗಿ ಓದಬೇಕು. ಕಾದಂಬರಿಯು ಒಬ್ಬ ಸುಂದರ ಸ್ತ್ರೀಯಂತೆ ಇರುವದರಿಂದ ಅದರೊಳಗಿನ ಅಲ್ಲಿಯೊಂದು ಪಾನು, ಇಲ್ಲಿಯೊಂದು ಪಾನು ಓದಿ ನೋಡಿದರೆ ಒಮ್ಮೆ ಸುಂದರಿಯ ಕಾಲು ಉಗುರನ್ನಷ್ಟು ಮತ್ತೊಮ್ಮೆ ಸುಂದರಿಯ ಕೈಬೆರಳುಗಳನ್ನಷ್ಟು ಇನ್ನೊಮ್ಮೆ ಆಕೆಯ ಕಿವಿಯನ್ನಷ್ಟು ನೋಡಿದಂತಾಗಿ ನಿಜವಾದ ಸೌಂದರ್ಯ ಸ್ವಾರಸ್ಯಗಳ ಅನುಭವವೇ ವಾಚಕರಿಗೆ ಬರಲಿಕ್ಕಿಲ್ಲ. ಪೂರ್ಣ ಕಾದಂಬರಿಯನ್ನು ಓದಲಿಕ್ಕೆ ಅನುಕೂಲವಿಲ್ಲದವರು ಈ ಕಾದಂಬರಿಯ ಮುಖದಂತೆ ಇದ್ದ ಇದರ ಕಡೆಯ ಐದು ಪ್ರಕರಣಗಳನ್ನಾದರೂ ಅವಲೋಕಿಸಬೇಕು' ಎಂದಿದ್ದಾರೆ.

ಗಳಗನಾಥರ ಈ ಅಳುಕು ಅನಗತ್ಯವೆನಿಸುತ್ತದೆ. ಟಿ.ಎಸ್. ವೆಂಕಣ್ಣಯ್ಯನವರಿಗಂತೂ ಇದರಲ್ಲಿ ಯಾವ ಕುಂದುಕೊರತೆಯೂ ತೋರಲಿಲ್ಲ. ಹಾಗೆಂದು ಗಳಗನಾಥರಿಗೆ ಪತ್ರ ಬರೆದಿದ್ದರು (೨೬-೧-೧೯೧೯).

ವಿಟ್ಲ ಗ್ರಾಮದ (ದ.ಕ. ಜಿಲ್ಲೆ) ಎಂ. ಗಣೇಶರಾವ ಎಂಬವರು ಬರೆದ ಪತ್ರದ ಸಾರ, ಅದಕ್ಕೆ ಗಳಗನಾಥರ ಪ್ರತ್ಯುತ್ತರ ಗಮನಿಸುವ ಹಾಗಿದೆ.

'ಕುಮುದಿನಿಯನ್ನು ನಾವು ನಾಲ್ಕು ಜನ ಮಿತ್ರರು ಕೂಡಿ ಓದಿ ಓದುತ್ತಿದ್ದೆವು. ಅದರ ಹನ್ನೆರಡನೆಯ ಪ್ರಕರಣವಾದ 'ಅಂತಕನ ಕೋಲಾಹಲ'ವನ್ನು ಓದುವಾಗ ಅದರೊಳಗಿನ ಚಿನ್ನ ಓಬಲನ ಕ್ರೂರತನವನ್ನೂ ದುಃಖದ ಪ್ರಸಂಗವನ್ನೂ ಓದಿ ನಮ್ಮೊಳಗಿನ ಮಿದುಳಿನ ಅಶಕ್ತತೆಯುಳ್ಳ ಒಬ್ಬ ಮಿತ್ರರು ಮೂರ್ಛಿತರಾದರು. ಯೋಗ್ಯ ಉಪಚಾರದಿಂದ ಎಚ್ಚತ್ತ ಮೇಲೆ ಅವರು ಕಾದಂಬರಿಯನ್ನು ಮುಟ್ಟದಾದರು. ಚಿನ್ನ ಓಬಲನೆಂಬ ವ್ಯಕ್ತಿಯ ಕ್ರೂರತನವು ನಿಜವಾಗಿ ಒದಗಿದ್ದೇ ಆಗಿದ್ದರೆ, ಆ ನೀಚನು ಈಗಲೂ ರೌರವ ನರಕದಲ್ಲಿರಬಹುದು; ಆದರೆ ಚಂದ್ರಿಕೆಯು ಆ ಹೃದಯದ್ರಾವಕ ಪ್ರಸಂಗವನ್ನು ಕಲ್ಪಿಸಿದರೆ ಆಕೆಯು ಪ್ರಾಯಶ್ಚಿತ್ತವನ್ನು ತಕ್ಕೊಳ್ಳಬೇಕಾದೀತು... ಇತಿ."

"ಮಹನೀಯರೇ, ಉತ್ಸಾಹಜನಕವಾದ ತಮ್ಮ ಪತ್ರವು ಲೇಖನಕಾರ್ಯದಲ್ಲಿ ನಮ್ಮನ್ನು ಪ್ರೋತ್ಸಾಹಗೊಳಿಸಿತು. ಮೂರ್ಛಾಗತರ ಹೃದಯದ ಕೋಮಲತೆಗಾಗಿ ಅವರನ್ನು ಧನ್ಯರೆಂದು ತಿಳಿಯಬೇಕಾಗುವದು. ಕುಮುದಿನಿಯು ಐತಿಹಾಸಿಕ ಕಾದಂಬರಿಯು, ಕಾಲ್ಪನಿಕವಲ್ಲ. ನಮ್ಮ ಮತದಂತೆ ಈಗಲೂ ಚಿನ್ನ ಓಬಲನು ರೌರವ ನರಕದಲ್ಲಿರಬಹುದು. ಓಬಲನ ಕಟುಕತನವನ್ನು ಹೃದಯಭೇದಕವಾಗಿ ಬರೆದದ್ದಕ್ಕಾಗಿ ಚಂದ್ರಿಕೆಯು ಪ್ರಾಯಶ್ಚಿತ್ತವನ್ನು ತಕ್ಕೊಂಡರೆ ತಕ್ಕೊಳ್ಳಬಹುದು! ಅದಕ್ಕಾಗಿಯೇ ಆ ಹುಡುಗೆಯು ಈ ವರ್ಷ 'ಧರ್ಮ ರಹಸ್ಯ'ವೆಂಬ ಐತಿಹಾಸಿಕ ಸಾತ್ವಿಕ ಕಾದಂಬರಿಯನ್ನು ಕೊಡುತ್ತಿರುವಳೋ ಏನೋ!"*

ಚಂದ್ರಿಕೆಯಲ್ಲಿ ಧರ್ಮರಹಸ್ಯವನ್ನೇನೋ ಅವರು ಕೊಟ್ಟದ್ದು ನಿಜ. ಈ ಮಧ್ಯೆ **ಈಶ್ವರೀ ಸೂತ್ರವೂ** ಬೆಳಕಿಗೆ ಬಂದಿದ್ದಿತು. ಇದು ಆಪ್ಟೆ ಕಾದಂಬರಿಗಳ

---

* ಇವೆರಡೂ ಕಾದಂಬರಿಗಳನ್ನೂ ಮೈಸೂರು ಸಂಸ್ಥಾನದಲ್ಲಿ ಪಠ್ಯವಾಗಿ ನಿಯಮಿಸಿದ್ದಾಗ, ಕೆಲವು ಶಾಲೆಗಳ ವಿದ್ಯಾರ್ಥಿಗಳು ಅವುಗಳನ್ನು ನಾಟಕಕ್ಕೆ ರೂಪಾಂತರಿಸಿಕೊಂಡು ಅಭಿನಯಿಸಿದರಂತೆ.

ಅನುವಾದ ಮಾಲಿಕೆಯಲ್ಲಿ ಮೂರನೆಯದು. (ಮೂಲ : ಉಷಃಕಾಲ) 'ತಾಯಿ ತಂದೆಗಳ ಮಾತು ಮೀರಿ ದಡ್ಡಿಯನ್ನು ಬಿಟ್ಟುಹೋದ ತುಂಟ ಮರಿ-ಟಗರಿನಂತೆ ಇದ್ದ ಶಿವಾಜಿಯು ಕುರಿಯ ಹಿಂಡನ್ನು ಹೋಲುವ ಮಾವಳರ ಸಹಾಯದಿಂದ, ಮುಸಲ್ಮಾನ ವ್ಯಾಘ್ರಗಳನ್ನು ದಂಗುಬಡಿಸಿ, ಸ್ವರಾಜ್ಯವನ್ನು ಸ್ಥಾಪಿಸಿ. ತಾನೂ ತನ್ನ ಪರಿವಾರವೂ ಸತ್ವಾತಿಶಯದಿಂದ ಕ್ಷಣದಲ್ಲಿ ಸಿಂಹರೂಪವನ್ನು ಹೊಂದಿದ್ದು ಈಶ್ವರೀಸೂತ್ರದಿಂದಲೋ ಕಾರ್ಯ ಕಾರಣ ಭಾವದಿಂದಲೋ ಎಂಬುದನ್ನು ವಾಚಕರೇ ವಿಚಾರಿಸತಕ್ಕದ್ದು......ಆಗ ಮುಸಲ್ಮಾನರು ಬಲಗರ್ವಿತರಾಗಿ ಅಹಂಕಾರದಿಂದ ಅನ್ಯರನ್ನು ಬಲಾತ್ಕರಿಸಿ ವಿಷಯ ಸುಖಗಳನ್ನು ಸೇವಿಸಿ ಗಟ್ಟಿಯಾಗಿ ಬಾಯಿ ಚಪ್ಪರಿಸುತ್ತಿದ್ದರೆ. ಹಿಂದೂ ಜನರು ಹೇಡಿಗಳಾಗಿ ನೀಚಸೇವೆಯಿಂದ ಕಳ್ಳರಂತೆ ವಿಷಯ ಸುಖಕ್ಕೆ ಜೋತು, ಹೊಟ್ಟೆಬೇನೆ ಹಚ್ಚಿಕೊಂಡು ದೊರೆತ ವಿಷಯಗಳನ್ನು ಮುಸುಕಿನಲ್ಲಿ ಭೋಗಿಸಿ ಮೆಲ್ಲನೆ ಬಾಯಿ ಒರಸಿಕೊಳ್ಳುತ್ತಿದ್ದರು! ಇಂಥ ಧರ್ಮಗ್ಲಾನಿಯ ಕಾಲದಲ್ಲಿ ಈಶ್ವರಸೂತ್ರದ ಚಾಲಕತ್ವದ ಅಧಿಕಾರವು ಗುರುಕೃಪೆಯಿಂದ ಶಿವಾಜಿಯಂಥ ಪುಣ್ಯಪುರುಷನ ಕೈಸೇರಿದ್ದರಿಂದ ಆತನು ಅವತಾರಿಕನೆಂದು ಹಿಂದೂ ಜನರಿಂದ ಹೊಗಳಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನು?

–ಇದು ಈ ಕಾದಂಬರಿಯ ಹಿನ್ನೆಲೆ. ಶಿವಾಜಿಯ ಅನುಯಾಯಿಗಳ ಗುಪ್ತ ಚಟುವಟಿಕೆಗಳು ನಡೆಯುತ್ತಿದ್ದ ಆ ಮಾರುತಿ ದೇವಾಲಯ, ಅಲ್ಲಿದ್ದ ಶ್ರೀಧರಸ್ವಾಮಿಗಳನ್ನು ಸೆರೆಹಿಡಿದಾಗ ಶಿವಾಜಿಯು ಅವರನ್ನು ಬಿಡಿಸಿಕೊಂಡು ಬಂದ ಬಗೆ, ನಾನಾ ಸಾಹೇಬನ ಸ್ವರಾಜ್ಯನಿಷ್ಠೆ, ಸೈಯದುಲ್ಲಾಖಾನನ ನೀಚ ಮನೋವೃತ್ತಿ, ಚಂದ್ರಾವತಿ, ರಂಭಾವತಿ, ಮೆಹೆರಜಾನ ಮೊದಲಾದ ಮಹಿಳಾಮಣಿಗಳ ಚಿತ್ರಣ – ಇವೆಲ್ಲಕ್ಕೆ ಮಿಗಿಲಾಗಿ ಸಮರ್ಥ ರಾಮದಾಸರ ಕೃಪಾ ವಿಶೇಷ – ಇವುಗಳಿಂದ ಕಾದಂಬರಿ ಸತ್ವಪೂರ್ಣವಾಗಿದೆ. ಗಳಗನಾಥರ ಅತೀವ ಜನಪ್ರಿಯ ಕಾದಂಬರಿಗಳಲ್ಲೊಂದಾಗಿದೆ.

'ಧರ್ಮ ರಹಸ್ಯ'ವು ಸಮ್ರಾಟ್ ಅಶೋಕನ ಮತ್ತು ಕಲಿಂಗ ವಿಜಯದ ನಿಮಿತ್ತದಿಂದ ಆದ ಅವನ ಮನಃಪರಿವರ್ತನೆಯ ಕಥಾನಕವಾಗಿದೆ. ಅನಂತರ ಅವನು ಬೌದ್ಧಧರ್ಮವನ್ನು ಸ್ವೀಕರಿಸಿದ್ದುದು ಸುಪರಿಚಿತವಾದ ಘಟನೆಯೇ. ಇಲ್ಲಿ ಪ್ರಧಾನವಾಗಿ ಬಂದಿರುವುದು ಅವನ ಕ್ರೌರ್ಯ ಮನೋಭಾವ, ಸುಂದರವಾಗಿ ಚಿತ್ರಿತವಾಗಿದೆ. ಪಾಟಲೀಪುತ್ರದ ಅಶೋಕ, ಅವನ ತಮ್ಮ

ಪೀತಾಶೋಕ, ತಂಗಿ ಇಂದಿರೆ ಇವರಿಗೆ ಪ್ರತಿಯಾಗಿ ಕಲಿಂಗರಾಜ ಮೃಗೇಂದ್ರ ಹಾಗೂ ಅವನ ಮಕ್ಕಳಾದ ಪ್ರಣಯಿನಿ ಮತ್ತು ಜಿತೇಂದ್ರ ಇವರ ಪಾತ್ರ ಸೃಷ್ಟಿಯಿದೆ. ಪ್ರಮೀಲೆಯಂತಹ (ಕಲಿಂಗ ಸರದಾರನೊಬ್ಬನ ಮಗಳು) ದುಷ್ಟ ಸ್ತ್ರೀಯ ಹೀನಕೃತ್ಯವೂ ಇಲ್ಲಿ ಬಂದಿದೆ. ಬೌದ್ಧಭಿಕ್ಷು ಉಪಗುಪ್ತನ ಉಪಕಥೆಯು ತನ್ನಷ್ಟಕ್ಕೆ ಸುರಸವಾಗಿದೆ.

ಈ ಕಾದಂಬರಿಗೆ ಮೂಲಧನವಾಗಿರುವ ಎರಡು ಪುಸ್ತಕಗಳೆಂದರೆ 'ಸಮ್ರಾಟ್ ಅಶೋಕ' ಮತ್ತು 'ಅಶೋಕ ಅಥವಾ ಆರ್ಯಾವೃತ್ತಾಂತಲಾ ಪಹಿಲಾ ಚಕ್ರವರ್ತಿ ರಾಜಾ,' ಈ ಮರಾಠೀ ಪುಸ್ತಕಗಳನ್ನು ಓದಿದ ಬಳಿಕ ಎಲ್ಲ ಧರ್ಮಗಳ ರಹಸ್ಯವು ಒಂದೇ ಇರುತ್ತದೆಂಬ ಅವರ ಭಾವನೆಗೆ ಬಲವಾದ ಸಾಕ್ಷಿ ದೊರೆತಂತಾಯಿತು.... ಈ ಕೃತಿಗೆ 'ಸತ್ಸಮಾಗಮ ಪ್ರಭಾವ'ವೆಂಬ ಮತ್ತೊಂದು ಹೆಸರಿದೆ. ಇಲ್ಲಿ ಆ ಸತ್ಸಾಗಮವನ್ನು ಒದಗಿಸಿದವರು ತಿಷ್ಯ ಮತ್ತು ಚಿದಾನಂದ ಸ್ವಾಮಿಗಳು.

**ಧರ್ಮರಹಸ್ಯವು** ಗಳಗನಾಥರ ಬರವಣಿಗೆಯಲ್ಲಿ ಒಂದು ಹೊಸ ಕ್ರಮವನ್ನು ಅನುಸರಿಸಿತು. ಇತರ ರೂಪಾಂತರಗಳು ಯಾವುದೇ ಒಂದು ಮೂಲಕೃತಿಯನ್ನು ಅನುಸರಿಸಿದ್ದರೆ, ಇಲ್ಲಿ ಎರಡು ಚರಿತ್ರ - ಕಾದಂಬರಿಗಳ ಸಾರವಿದೆ. ಹೀಗಿದ್ದು ಬಹುಮಟ್ಟಿಗೆ ಸ್ವತಂತ್ರ ಬರವಣಿಗೆ ಎನ್ನಬಹುದು.

**ಮೃಣಾಲಿನಿಯ** ಇತಿಹಾಸವಾದರೂ ಮಗಧರಾಜ್ಯಕ್ಕೆ ಸಂಬಂಧಿಸಿದುದು. ಬಂಕಿಂಚಂದ್ರರ ಮೃಣಾಲಿನೀ ಕಾದಂಬರಿಯ ಮರಾಠೀ ರೂಪಾಂತರವನ್ನು 'ಮಾಸಿಕ ಮನೋರಂಜನ' ಪತ್ರಿಕೆಯಲ್ಲಿ ಗಳಗನಾಥರು ನೋಡಿದ್ದರು. 'ಈ ಪಡಿಕಟ್ಟಿನ ಕಾದಂಬರಿಗಳು ವಿರಲವೆಂದು ಅವರಿಗೆ ಕಂಡಿತು. ಈ ಕಾದಂಬರಿಯನ್ನು ಗಳಗನಾಥರೂ ಬೇರೊಂದು ಕಾದಂಬರಿಯನ್ನು ತ.ನಾ. ಅಮ್ಮಿನಭಾವಿ ಎಂಬ ಸಹೋದ್ಯೋಗಿಯೂ ಅನುವಾದಿಸಿ ಕನ್ನಡಿಗರಿಗೆ ನೀಡಬೇಕೆಂದು ತಮ್ಮತಮ್ಮಲ್ಲಿ ನಿಶ್ಚಯಿಸಿಕೊಂಡಿದ್ದರಂತೆ. ಅದು ಕೈಗೂಡಿರಲಿಲ್ಲ. 'ಮಳೆ ನಿಂತರೂ ಮರದ ಹನಿ ನಿಲ್ಲಲಿಲ್ಲ'ವೆಂಬಂತೆ, ಆ ಕಥಾನಕದ ವಾಚನ ಸುಖವು ಅವರ ಮನದಲ್ಲಿ ಸದಾ ಹನಿಯಿಕ್ಕುತಿದ್ದಿತಂತೆ! 'ಚಂದ್ರಿಕೆ'ಯು ಹೊರಡಹತ್ತಲೂ, ಅದರ ಅನುವಾದಕ್ಕೆ ಮುಟಮೊರೆತು, ಧಾರಾವಾಹಿಯಾಗಿ ಹೊರಬರತೊಡಗಿತು. ಗ್ರಂಥರೂಪದಲ್ಲಿ ಪ್ರಕಟವಾದ ಮೇಲೆ ಟ್ರೇ.ಕಾ.ದ ಆಗಿನ ಪ್ರಿನ್ಸಿಪಾಲರಾಗಿದ್ದ ರೊದ್ದ ಶ್ರೀನಿವಾಸರಾಯರಿಗೆ ಅರ್ಪಣಮಾಡಿದರು.

ಈ ಕೃತಿಯಲ್ಲಿ ಹೇಮಚಂದ್ರನೆಂಬ ರಾಜಪುತ್ರನು ಮೃಣಾಲಿನಿಯಲ್ಲಿ ಮೋಹಗೊಂಡು ಕರ್ತವ್ಯಚ್ಯುತನಾಗುವನು. ಆವರೆ ಗುರು ಮಾದವಾಚಾರ್ಯರ ಉಪದೇಶ – ಸಹಾಯಗಳಿಂದ ಹುರುಪುಗೊಂಡು ಮುಸಲ್ಮಾನರನ್ನು ಸೋಲಿಸಿ ಹೊಸರಾಜ್ಯವನ್ನು ಕಟ್ಟುವನು. ಮಾಧವಾಚಾರ್ಯರಂತೆಯೇ ಅವನಿಗೆ ನೆರವಾದವಳೆಂದರೆ ಮನೋರಮೆ. ಅವಳ ಗಂಡ ಪಶುಪತಿಯು ಒಬ್ಬ ದ್ರೋಹಿ.

**ಸತ್ವಸಾರ** ಕಾದಂಬರಿಯ ವಸ್ತುವನ್ನು ಗಳಗನಾಥರು ಟಾಡ್‌ನ ರಾಜಸ್ಥಾನ ಕಥಾವಳಿ ಹಾಗೂ ಎರಡು ಮರಾಠೀ ಗ್ರಂಥಗಳಿಂದ ತೆಗೆದು ಕೊಂಡಿದ್ದಾರೆ. 'ಪ್ರಸಂಗದಲ್ಲಿ ಸದ್ಬೋಧಕ್ಕೆ ಆಸ್ಪದವಿರಬೇಕೆಂದು' ಪ್ರತಾಪಸಿಂಹನ ಸತ್ವವನ್ನು ಸಾತ್ವಿಕೆಯೆಂತಲೂ ಆತನು ಆಚರಿಸಿದ ತಪಸ್ಸನ್ನು ತಪೋಧನನೆಂತಲೂ ಕರೆದು, ಅವರ ದಾಂಪತ್ಯವನ್ನು ಯೋಜಿಸಿದ್ದಾರೆ. ಇವೆರಡು ಉಜ್ವಲ ಗುಣಗಳ ವಿಷಯವಾಗಿ ವಾಚಕರಲ್ಲಿ ದುರ್ಲಕ್ಷ್ಯವುಂಟಾಗಬಾರದೆಂಬ ಉದ್ದೇಶ – ಗಳಗನಾಥರದು.

ಅವರ ರಜಪೂತ ಕಾದಂಬರೀ ಮಾಲಿಕೆಯಲ್ಲಿ ಸತ್ವಸಾರವು ಮೊದಲಿನದಾಗಿದೆ. ಸ್ವಾತಂತ್ರ್ಯಪ್ರಿಯನಿದ್ದು ಅಡವಿಯಲ್ಲಿ ಕೂಳಿಲ್ಲದೆ ಅಲೆದಾಡುವ ಪ್ರಸಂಗಬಂದರೂ ಶರಣಾಗತನಾಗದ ರಾಣಾ ಪ್ರತಾಪಸಿಂಹ, ಅವನಷ್ಟೇ ಶೂರನಾದರೂ ಸ್ವಾತಂತ್ರ್ಯವನ್ನು ಕಳೆದುಕೊಂಡು ಮಾನಹೀನನಾದ ಮಾನಸಿಂಹ, ಧೀರ ಮುತ್ಸದ್ದಿಯಾದರೂ ಕಾಮುಕನಾಗಿದ್ದ ಅಕಬರ ಚಕ್ರವರ್ತಿ– ಈ ಮೂವರ ಚಿತ್ರಣ ಇಲ್ಲಿ ಪ್ರಧಾನವಾಗಿದೆ.

ಕರ್ನಾಟಕದಲ್ಲಿ ಚಾಲುಕ್ಯ, ಕದಂಬ, ರಾಷ್ಟ್ರಕೂಟ ಮೊದಲಾದ ಪ್ರಸಿದ್ಧ ರಾಜವಂಶಗಳಿದ್ದುದನ್ನು ಇತಿಹಾಸ ಸಾರುತ್ತಿದೆ. ಅಂದಬಳಿಕ ಕನ್ನಡಿಗರ ವೈಭವವನ್ನು ವ್ಯಕ್ತಪಡಿಸುವ ಕಾದಂಬರಿಗಳು ಪ್ರಕಟವಾಗದಿದ್ದುದು ಲಾಂಛನಾಸ್ಪದ ಎಂಬುದಾಗಿ ಗಳಗನಾಥರಿಗೆ ಕಂಡಿತು. ಅಂತೆಯೇ ವಿಜಯನಗರದ ಉಪರಾಜ್ಯವಾದ ಚಂದ್ರಗಿರಿಯ ಕಥಾನಕವನ್ನು ಅವರು ಕುಮುದಿನಿಯಲ್ಲಿ ಕೊಡಮಾಡಿದ್ದರು. ಅದನ್ನು ಬರೆಯುವ ಕಾಲಕ್ಕೆ ವಿಜಯನಗರ ರಾಜ್ಯದ ನಾಶ, ಅದರ ಅತ್ಯುತ್ಕರ್ಷ ಮತ್ತು ಅದರ ಸ್ಥಾಪನೆ ಇವನ್ನು ಕುರಿತು ಇನ್ನು ಮೂರು ಕಾದಂಬರಿಗಳನ್ನು ಬರೆಯಬೇಕೆಂದು ನಿಶ್ಚಯಿಸಿದ ಪ್ರಕಾರ 'ಕನ್ನಡಿಗರ

ಕರ್ಮಕಥೆ' ಬೆಳಕಿಗೆ ಬಂದಿತು (೧೯೧೫-೧೬). ಆದರೆ ಕುಮುದಿನಿಯಂತೆ ಇದು ಸ್ವತಂತ್ರ ರಚನೆಯಾಗಿರದೇ ಆಪ್ಟೆಯವರ 'ವಜ್ರಾಘಾತ'ದ ರೂಪಾಂತರವಾಗಿದೆ.

ಪ್ರಸ್ತುತ ಕಥಾನಕವು ಮರಾಠಿಯಲ್ಲಿ ಕೂಡ ಇಂದಿಗೂ ಜನಪ್ರಿಯವಾಗಿ ಉಳಿದಿದೆ. ಹುಲಿಯ ದವಡೆಯಿಂದ ಓರ್ವ ಮುಸಲ್ಮಾನ್ ತರುಣಿಯನ್ನು ಪಾರುಮಾಡಿದ ಅಳಿಯ ರಾಮರಾಜನು ಇದರ ನಾಯಕನು. ಅವನ ಕುಂಜವನ ವಿಹಾರದ ವರ್ಣನೆ, ಅಭಿಮಾನಧನಳಾದ ಆ ಕನ್ಯೆಯು ಹೊರಟುಹೋದದ್ದು, ಅವಳ ಮಗ ರಣಮಸ್ತಖಾನನೇ ವಿಜಾಪುರ ಸುಲ್ತಾನನ ವಕೀಲನಾಗಿ ರಾಮರಾಜನಲ್ಲಿಗೆ ಬಂದದ್ದು, ಅವನೇ ರಾಮರಾಜನನ್ನು ಕೊಂದದ್ದು - ಈ ಪ್ರತಿಯೊಂದು ಸನ್ನಿವೇಶವೂ ರಸವತ್ತಾಗಿದೆ.

**ತಿಲೋತ್ತಮೆಯು** ಗಳಗನಾಥರ ಆನಂದವನದ ವಾಸ್ತವ್ಯದಲ್ಲಿ ಬರೆಯಲಾದ ಕೊನೆಯ ಕೃತಿಯಾಗಿದೆ. 'ಸತ್ವಸಾರ'ದಲ್ಲಿ ಪ್ರತಾಪಸಿಂಹನಿಗೆ ಪ್ರತಿವ್ಯಕ್ತಿಯಾಗಿದ್ದ ಮಾನಸಿಂಹ ಇಲ್ಲಿಯೂ ಇದ್ದಾನೆ. ಆ ಕಥಾನಕವು ದಿಲ್ಲಿಯ ಪಶ್ಚಿಮ ದಿಕ್ಕಿಗೆ ನಡೆದಿದ್ದರೆ, ಇದು ಪೂರ್ವಕ್ಕೆ ಓರಿಸಾ ಪ್ರಾಂತದಲ್ಲಿ ನಡೆದದ್ದಾಗಿದೆ.

ಮಾನಸಿಂಹನ ಮಗನಾದ ಜಗತ್ಸಿಂಹನು ಹಾಗೂ ಸ್ಥಾನಮಾನದಿಂದ ಅವನಿಗಿಂತ ಕಡಿಮೆಯವನಾದ ವೀರೇಂದ್ರಸಿಂಹನ ಮಗಳು ತಿಲೋತ್ತಮೆ ಇದರ ನಾಯಕ - ನಾಯಿಕೆಯರು. ಅವರಿಬ್ಬರ ಜೊತೆಗೆ ಆಯೇಷೆ-ಉಸ್ಮಾನರ ಪ್ರೇಮಕಥೆಯೂ ಸೇರಿಕೊಂಡಿದೆ. ಆದರೆ ಆಯೇಷೆ ಪ್ರೀತಿಸುವುದು ಜಗತ್ಸಿಂಹನನ್ನು! ಶ್ರೀರಾಮನಂತೆ ಜಗತ್ಸಿಂಹನು ಏಕಪತ್ನೀವ್ರತಸ್ಥನು. ಅವನು ಸೀತೆಯನ್ನು ಬಹುಕಾಲ ಬಿಟ್ಟಂತೆ, ಇವನೂ ತಿಲೋತ್ತಮೆಯನ್ನು ತ್ಯಜಿಸಿದ್ದನು. ಹೀಗಾಗಿ ಈ ಕಾದಂಬರಿಗೆ ಇದ್ದ 'ಸರಸಪ್ರೇಮ'ವೆಂಬ ಇನ್ನೊಂದು ಹೆಸರು ಸಾರ್ಥಕವಾಗಿಲ್ಲ. ಬದಲಾಗಿ 'ಆದರ್ಶಪ್ರೇಮ' ಎನ್ನುವುದು ಹೆಚ್ಚು ಸೂಕ್ತವಾಗುತ್ತಿತ್ತು. ಈ ಕಥಾನಕಕ್ಕೆ ಐತಿಹಾಸಿಕ ಹಿನ್ನೆಲೆ ಇರುವುದಾದರೂ, ಇದು ಹೆಚ್ಚಾಗಿ ಪ್ರಾಪಂಚಿಕ ಕಾದಂಬರಿ ಎನಿಸುತ್ತದೆ. ಈ ಕೃತಿಯು ಮೂಲವಾವುದೆಂಬುದನ್ನು ಗಳಗನಾಥರು ಎಲ್ಲಿಯೂ ಹೇಳಿಲ್ಲ. ಇದನ್ನು ಯಾವದಾವದೂ ಒಂದೇ ಕೃತಿಯ ಅನುವಾದ ಎನ್ನುವದಂತೂ ಸರಿಯಲ್ಲ.

ಹಾಗಿದ್ದರೆ ಗಳಗನಾಥರು ಖಂಡಿತವಾಗಿ ಉಲ್ಲೇಖಿಸುತ್ತಿದ್ದರು. ಬಹುಶಃ ಟಾಡ್‌ನ 'Annals of Rajasthan'ದಲ್ಲಿ ಬಂದ ಪ್ರಸಂಗವನ್ನೇ ಹಿಗ್ಗಿಸಿ ಗಳಗನಾಥರು ಈ ಸ್ವತಂತ್ರ ಕಾದಂಬರಿಯನ್ನು ಬರೆದಿರಬೇಕು.

ಈ ಕಾಲದಲ್ಲಿಯ ಗಳಗನಾಥರ ಇನ್ನೊಂದು ಮಹತ್ವದ ಲೇಖನ ಕಾರ್ಯವೆಂದರೆ ಮಧ್ಯಮವರ್ಗೀಯರ ಸಮಸ್ಯೆಗಳ ಮೇಲೆ ಎರಡು ಗ್ರಂಥಗಳನ್ನು ಬರೆದುದು.

**ಕುಟುಂಬ, ದಾಂಪತ್ಯ** - ಇವುಗಳಲ್ಲಿ ಎರಡನೆಯ ಲೇಖದ ಭಾಷಾಂತರವಾಗಲಿ - ರೂಪಾಂತರವಾಗಲಿ - ಸಾರಶೋಷಣವಾಗಿ ಇರುವುದಿಲ್ಲ. 'ಈಗ ಇಪ್ಪತ್ತೇಳು ವರ್ಷ ಸಂಸಾರ ಮಾಡುವಾಗ ಲೇಖಕನಿಗೆ ತನ್ನ ಹಾಗೂ ತನ್ನವರ ಕುಟುಂಬಗಳಲ್ಲಿ ಅನುಭವಕ್ಕೆ ಬಂದ ಮತ್ತು ಬೇರೆ ಕುಟುಂಬಗಳಲ್ಲಿ ಕಣ್ಣಿಗೆ ಬಿದ್ದ ಸಂಗತಿಗಳನ್ನೂ, ಹೊರಟ ಸಿದ್ಧಾಂತಗಳನ್ನೂ, ಅನುಮಾನಗಳನ್ನೂ ಈ ಪ್ರಬಂಧದಲ್ಲಿ ಸೇರಿಸಿ, ಅವುಗಳನ್ನು ವಿಸ್ತರಿಸಿ ಬರೆದಿರುತ್ತದೆ. ಕ್ಷುದ್ರ ಮನೋವೃತ್ತಿಯ ಈಗಿನ ಕೆಲವು ಕುಟುಂಬಗಳಲ್ಲಿ ಮುಖ್ಯವಾಗಿ ಅಣ್ಣ ತಮ್ಮಂದಿರು ಒಬ್ಬರನ್ನೊಬ್ಬರು ವಂಚಿಸುವದನ್ನೂ ಅಜ್ಞಾನದಿಂದ ನಿರರ್ಥಕ ಕಲಹ ಬೆಳಸಿ ವ್ಯರ್ಥ ತಾಪಪಡುವದನ್ನೂ ನೋಡಿ ನೋಡಿ ಅಸಮಾಧಾನಪಟ್ಟು ಈ ವಿಷಯದ ವಿವೇಚನೆಗೆ ಅವರು ತೊಡಗಿದ್ದಾರೆ. ಪೂರ್ವಜರು ತೋರಿದ ಉದಾತ್ತಧ್ಯೇಯ, ಸತ್ಸಂಪ್ರದಾಯ, ಶೀಲಸಂವರ್ಧನೆ ಇವನ್ನು ಮರೆತುಬಿಟ್ಟು, ಹೊಸಯುಗದ ಪ್ರಲೋಭನಕ್ಕೆ ಸುಲಭವಾಗಿ ಮಣಿದು ಆರ್ಥಿಕ ತಾಪತ್ರಯದಲ್ಲಿ ಒದ್ದಾಡುತ್ತಿರುವ ಸಾಮಾಜಿಕರನ್ನು ಗಮನದಲ್ಲಿಟ್ಟುಕೊಂಡು ಗಳಗನಾಥರು ಇವೆರಡನ್ನು ಬರೆದಿದಾರೆ. ದಾಂಪತ್ಯದಲ್ಲಿ ಸುರುವಿಗೆ ತಾತ್ವಿಕ ಹಿನ್ನೆಲೆ ಇದ್ದು ಅನಂತರ ವ್ಯಾವಹಾರಿಕ ಸಲಹೆ ಸುಧಾರಣೆಗಳು ಉಕ್ತವಾಗಿವೆ. ಮಹಾಭಾರತ (ವಿಶೇಷತಃ ಅನುಶಾಸನಿಕ ಪರ್ವ), ಮತ್ತಿತರ ಕೃತಿಗಳಲ್ಲಿ ಈ ವಿಷಯವಾಗಿ ಬಂದ ಅಲ್ಲಲ್ಲಿಯ ಮಾತುಗಳು ಉದ್ಧೃತವಾಗಿವೆ. ಒಟ್ಟಿನಲ್ಲಿ ಇದು ಗಳಗನಾಥರ ಸ್ವತಂತ್ರ ವಿಚಾರಸರಣಿಗೆ ಸುಸ್ಪಷ್ಟ ನಿದರ್ಶನವಾಗಿದೆ. ಕುಟುಂಬದಲ್ಲಿ ಸಮಾವೇಶವಾಗುವ ಅನೇಕ ಜನರ ಮನೋವೈಚಿತ್ರ್ಯಗಳನ್ನು ಹೃದ್ಯವಾಗಿ ಚಿತ್ರಿಸಿರುವುದರಿಂದ ಇದಕ್ಕೆ

ಸಾಮಾಜಿಕ ಕಾದಂಬರಿಯ ಸ್ವರೂಪವೂ ಆಗೀಗ ಪ್ರಾಪ್ತವಾಗಿದೆ. ತಮ್ಮ ವಿಚಾರ ಮಂಡನೆಯಲ್ಲಿ ಅವರು ತೋರಿದ ವಾದವೈಖರಿಯು ಬೆರಗುಗೊಳಿಸುವಂತಿದೆ. ನೇರವಾಗಿ ವಾಚಕರ ಮನಸ್ಸಿಗೆ ತಾಗುತ್ತದೆ.

'ದಾಂಪತ್ಯ'ದಲ್ಲಿ ಕುಟುಂಬದ ಮೂಲ ಘಟಕಗಳಾದ ಗಂಡ, ಹೆಂಡತಿ, ಮಕ್ಕಳು ಇವರ – ಪರಸ್ಪರ ಸಂಬಂಧದ ವಿವೇಚನೆ ಇದ್ದರೆ, ಕುಟುಂಬದಲ್ಲಿ ದಂಪತಿಗಳು ಇತರರೊಡನೆ ಹೇಗೆ ನಡೆದುಕೊಳ್ಳಬೇಕೆನ್ನುವುದರ ವಿವರಣೆ ಇದೆ. ಜೊತೆಗೆ ಸ್ತ್ರೀ–ಸ್ವಾತಂತ್ರ್ಯ, ಮಕ್ಕಳ ಲಾಲನೆ ಪೋಷಣೆ, ಯಜಮಾನನ ಕರ್ತವ್ಯ ಮುಂತಾದವುಗಳನ್ನೂ ಪ್ರಸ್ತಾಪಿಸಲಾಗಿದೆ. ಬರೆಯುವಾಗ 'ವಿಷಯ ಸ್ಫೂರ್ತಿಯಾಗದಿರಲು' 'ದೈನ್ಯಯುಕ್ತ ಸಂತಾಪದಿಂದ ಸದ್ಗುರುವಿಗೆ ಶರಣು' ಹೋಗಿದ್ದಾರೆ.

**ಕುಟುಂಬದ** ಮೊದಲ ಆವೃತ್ತಿಯ ಪ್ರತಿಗಳು ಬಲುಬೇಗ ತೀರಿಹೋದುವು! ಎರಡನೆಯ ಆವೃತ್ತಿಯು ೧೯೧೮ರಲ್ಲಿ ಪ್ರಕಟವಾದಾಗ ಎರಡು ಸಾವಿರ ಪ್ರತಿಗಳನ್ನು ಅಚ್ಚುಹಾಕಿಸಲಾಯಿತೆಂಬುದು ಇದರ ಜನಪ್ರಿಯತೆಗೆ ಸಾಕ್ಷಿ.* ಇದನ್ನು ಓದಿ ತಮ್ಮ ಕುಟುಂಬದ ಸುಧಾರಣೆ ಮಾಡಿಕೊಂಡಿರುವೆವೆಂಬ ಆಶಯದ ಪತ್ರಗಳು ಗಳಗನಾಥರಿಗೆ ಬಂದಿದ್ದುವಂತೆ.+

ಕ್ರಿ.ಶ. ೧೯೧೫ನೆಯ ವರ್ಷವು ಗಳಗನಾಥರ ಜೀವನದಲ್ಲಿ ಅತ್ಯಂತ ದಾರುಣವಾದುದು.ಆ ವರ್ಷ ಅವರ ಸದ್ಗುರುಗಳು ಇಹಲೋಕವನ್ನು ತ್ಯಜಿಸಿದರು. ಈ ದುರ್ಘಟನೆಯು ಮುಂದಿನ ಎರಡು ವರ್ಷಗಳಲ್ಲಿ ಅವರ ಬದುಕಿನ ದೆಶೆಯನ್ನೆ ಬದಲಿಸಿತು.

---

* ಮದ್ರಾಸ ಸರ್ಕಾರದವರು ಇದನ್ನು ಪಠ್ಯವಾಗಿ ಗೊತ್ತುಪಡಿಸಿದ್ದರು.

\+ ಆನಂದವನದಲ್ಲಿದ್ದಾಗ ಗಳಗನಾಥರು 'ಸಪಿಗಾರ' ಎಂಬ ವಾರಪತ್ರಿಕೆಯನ್ನು ಹೊರಡಿಸುತ್ತಿದ್ದರೆಂದು ಹೇಳಲಾಗುತ್ತದೆ. ನಮಗೆ ದೊರೆತ ೪–೧೨–೧೯೧೬ರ ಸಂಚಿಕೆಯಲ್ಲಿ ಸಂಪಾದಕರೆಂದು ಅವರ ಹೆಸರು ಇಲ್ಲ. ಬದಲಾಗಿ ಯ.ಗೋ.ಕುಲಕರ್ಣಿ ಮತ್ತು ಭಿ.ಪ. ಕಾಳೆ – ಇವರು ಪ್ರಕಾಶಕ, ಮುದ್ರಕರೆಂದು ಕಾಣಿಸಲಾಗಿದೆ. ಏನಿದ್ದರೂ ಗಳಗನಾಥರ ನಿಕಟ ಸಂಪರ್ಕ ಮಾತ್ರ ಇದ್ದೇ ಇದ್ದಿತು. ಈ ಪತ್ರಿಕೆ ಕೆಲವೇ ತಿಂಗಳು ನಡೆದು ನಿಂತಿತು.

ಶ್ರೀ ಶೇಷಾಚಲರು ಏಳು ತಿಂಗಳಕಾಲ ಅತಿಸಾರ-ಉದರರೋಗದ ಬಾಧೆಯಿಂದ ನರಳಿದರು.* ಅವರು ತಮ್ಮ ಸಿದ್ಧಿಯ ಬಲದಿಂದ ಈ ಭವರೋಗವನ್ನು ನಿವಾರಿಸುವುದು ಸಾಧ್ಯವಿದ್ದರೂ ಹಾಗೆ ಮಾಡಲಿಲ್ಲ. 'ಮಹಾರಾಜಾ, ದೇಹಕ್ಕೂ ಪ್ರಾರಬ್ಧಕ್ಕೂ ಗಂಟು ಇರುತ್ತದೆ. ಭೋಗಿಸಿಯೇ ತೀರಬೇಕು' ಎನ್ನುತ್ತಿದ್ದರು. 'ಈಶ್ವರ ಕೃಪೆಯಿಂದ ಪ್ರಾರಬ್ಧವು ನಾಶವಾಗುತ್ತದೆಂದು ದೊಡ್ಡವರು ಹೇಳುತ್ತಿರಲು ಸ್ವತಃ ಈಶ್ವರಾವತಾರವೆನಿಸುವ ಶ್ರೀ ಗುರುಗಳಿಗೆ ಪ್ರಾರಬ್ಧವೆಲ್ಲಿಂದ ಬಂತು?' – ಎಂಬ ಶಂಕೆ ಗಳಗನಾಥರನ್ನು ಬಾಧಿಸುತ್ತಿತ್ತು. ಲೋಕದ, ಪರಿವಾರದ ಪಾಪವನ್ನು ಮಹಾತ್ಮರು ಅನುಭವಿಸಬೇಕಾಗಿ ಬರುತ್ತದೆ. 'ಯಾದವನೊಬ್ಬನ ಉದ್ಧಟತನಕ್ಕಾಗಿ ಶ್ರೀಕೃಷ್ಣನು ಅವತಾರಿಕನಾಗಿದ್ದರೂ ಬೇಡನೊಬ್ಬನ ಬಾಣದಿಂದ ಪ್ರಾಣಬಿಡಬೇಕಾಯಿತಲ್ಲವೆ?' ಆದಕಾರಣ ನಮ್ಮ ದುಷ್ಕರ್ಮ ರೂಪವಾದ ಪ್ರಾರಬ್ಧಭೋಗಕ್ಕೆ ಶೇಷಾಚಲರು ಗುರಿಯಾದರು ಎಂಬ ಸಮಾಧಾನವನ್ನೂ ಗಳಗನಾಥರು ಕಂಡುಕೊಂಡಿದ್ದಾರೆ. ಶಿಷ್ಯರ ದುಷ್ಕರ್ಮ? ಹೌದು, ಸಾಧುಗಳ ಹಿರಿಯ ಶಿಷ್ಯರಾದ ಲಿಂಗೋ ಭಗವಾನರು ಮತ್ತು ಗುರುಪತ್ನಿ – ಇವರು ಇರುವಾಗ ಯಾವುದೇ ಶಿಷ್ಯರ ದಂಭಾಚಾರ, ಅಹಂಭಾವ, ಸ್ವೇಚ್ಛಾಚಾರ ವೃತ್ತಿಗಳಿಗೆ ಅವಕಾಶವಿರಲಿಲ್ಲ. ಅನಂತರ ಆನಂದವನದ ಅಗ್ರಹಾರದಲ್ಲಿ ಗದ್ದಲವೋ ಗದ್ದಲ. ಇಮಾರತಿಗಳು ಹೆಚ್ಚಿದ್ದರಿಂದ ಅಲ್ಪರು ಸಹ ಬಂದು ಅಲ್ಲಿಯೇ ನೆಲೆ ನಿಂತರು. ಭೂರಿಭೋಜನದ ಧಾರ್ಮಿಕ ಸಮಾರಂಭಗಳ ಹೆಚ್ಚಳದಿಂದಾಗಿ ಅಲ್ಲಿಯ ನಿವಾಸಿಗಳಲ್ಲಿ ಆಲಸ್ಯ, ಔದ್ಧತ್ಯಗಳು

---

* ಅವರು ತೀರಿಹೋದ ಮೂರು ತಿಂಗಳಿನಿಂದ ಅವರ ನಿರ್ವಾಣ ಮಹೋತ್ಸವದ ವಿವರಗಳನ್ನು ಸದ್ಬೋಧ ಚಂದ್ರಿಕೆಯಲ್ಲಿ ಗಳಗನಾಥರು ಕೊಡಬೇಕೆಂದು ಇಟ್ಟುಕೊಂಡರು. ೨೪ ಪುಟಗಳ ಎಣಿಕೆಯಲ್ಲಿದ್ದುದು ೧೬೪ ಪುಟಗಳವರೆಗೆ ಆ ವರ್ಣನೆ ಮುಂದುವರಿಯಿತು! ಈ ಕೃತಿಯು ಶ್ರೀ ಶೇಷಾಚಲರಲ್ಲಿ ಗಳಗನಾಥರಿಗಿದ್ದ ಆತ್ಯಂತಿಕ ಭಕ್ತಿಭಾವವನ್ನೂ ಶರಣರ ಮರಣದ ಮಹಾತ್ಮೆ-ಔಚಿತ್ಯಗಳನ್ನೂ ವಿವರಿಸುತ್ತದೆ. ಅಲ್ಲದೆ ಅವರ ಮರಣಾನಂತರ ಅಗ್ರಹಾರದ ಭವಿಷ್ಯದ ಕುರಿತು ಲೌಕಿಕ ವಿಚಾರಗಳನ್ನೂ ಒಳಗೊಂಡಿದೆ. ಇದೊಂದು ಗಳಗನಾಥರ ವಿಶಿಷ್ಟ ಗ್ರಂಥ. ಮುಂದಿನ ಎಲ್ಲ ವಿವರಗಳನ್ನು ಈ ಗ್ರಂಥದಿಂದ ಸಂಕಲಿಸಲಾಗಿದೆ.

ಮೊಳೆದೋರಿದುವು. ಇತ್ತ ಪಾಠಶಾಲೆ, ಭಾಷಾಸೇವೆಗಳ ನಿಮಿತ್ತದಿಂದ ಹೆಚ್ಚಿನ ಉಸಾಬರಿಗಳು ಉತ್ಪನ್ನವಾದುವು – ಎಂಬುದಾಗಿ ಹೇಳುತ್ತ, ಗಳಗನಾಥರು ತಮ್ಮನ್ನು ಬೈದುಕೊಂಡಿದ್ದಾರೆ.

ಶ್ರೀ ಶೇಷಾಚಲರಿಗೆ ಒಂದು ದಿನ ಹೊಟ್ಟೆಶೂಲೆಯೆದ್ದು ವಾಂತಿಯಾಯಿತು. ಆಗ "ಮಹಾರಾಜಾ, ಸ್ವಾಮಿಗೆ ತನ್ನ ದೇಹವು ಜಡವಾಗಹತ್ತಿತು. ಕುಳಿತುಕೊಳ್ಳುವ ತ್ರಾಣವುಳಿಯಲಿಲ್ಲ, ಮಲಗಿಕೊಳ್ಳುವೆನು" ಎಂದರು. ಹಗಲಿನಲ್ಲಿ ಅವರು ಮಲಗಿದವರೇ ಅಲ್ಲ. ಸರಿ, ಆ ದಿನ ಹಾಸಿಗೆಯ ಸುತ್ತು ಪರದೆಯು ಬಂದಿತು. ಆಗ ಶಿಷ್ಯರು ಕರ್ತವ್ಯ ಮಾಡಲಾರದವರಾಗಿ ಶ್ರೀ ಗುರುಗಳ ಸುತ್ತುಮುತ್ತು ಕುಳಿತುಕೊಳ್ಳಹತ್ತಿದರು..... ಸಂಚಾರಕ್ಕೆ ಹೋಗಲಿಕ್ಕೆ ಒಂದುಮುಂದು ನೋಡಹತ್ತಿದರು. ಪಟ್ಟಶಿಷ್ಯರು, ನಾವಿನ್ನು ಗುರುಗಳನ್ನು ಬಿಟ್ಟು ಅಗಲುವ ಹಾಗಿಲ್ಲವೆಂದು ಹೇಳಿ, ಉಳಿದ ಶಿಷ್ಯರನ್ನು ಜುಲುಮೆಯಿಂದ ಸಂಚಾರಕ್ಕೂ ಬೇರೆ ಬೇರೆ ಕೆಲಸಗಳಿಗೂ ಕಳಿಸಹತ್ತಿದರು. ಇತ್ತ ಶ್ರೀ ಗುರುಗಳ ಬೇನೆಯ ನಿಮಿತ್ತದಿಂದ ಅವರ ದರ್ಶನಾರ್ಥಿಗಳಾಗಿ ಬರಹೋಗುವವರ ಸಂಖ್ಯೆ ಹೆಚ್ಚಾಯಿತು. ಶ್ರೀ ಶೇಷಾಚಲರು, ಈ ನೆವದಿಂದ ಅನಾಯಾಸವಾಗಿ ಅತಿಥಿಸೇವೆಯು ಘಟಿಸುವದೆಂದು ಅನ್ನುತ್ತಿದ್ದರು.

ಈ ಸಮಯದಲ್ಲಿ ಗಳಗನಾಥರು ಒಂದು ಗೋದಾನವನ್ನು ಶ್ರೀ ಸ್ವಾಮಿಯ ಸಮಕ್ಷಮ ಕೊಡಬೇಕೆಂದು ಯೋಚಿಸಿದರು. ಅದಕ್ಕೆ ಗುರುಗಳು ಒಪ್ಪಲು, ಒಂದು ಸುಮುಹೂರ್ತದಲ್ಲಿ (ಶ್ರಾವಣ ಶುದ್ಧ ೮ ಬುಧವಾರ) ಕುಟುಂಬಸಹಿತ ಗೋಪೂಜೆ ಮಾಡಿ, ಗುರುಪಿನ ಕುಲಪುರೋಹಿತರಿಗೆ ವಿದ್ಯುಕ್ತವಾಗಿ ದಾನಮಾಡಿದರು. ಆ ದಿನ ಶ್ರೀ ಗುರುಗಳು ಅಖಂಡ ೧॥ ತಾಸು ನಿರೋಗಿಗಳಂತೆ ಕುಳಿತು ಜನರಿಗೆ ಬೋಧಿಸುತ್ತಿದ್ದರು. ಸ್ವಾಮಿಯ ಎಡಬಲದಲ್ಲಿ ಪಾಠಶಾಲೆಯ ಅಧ್ಯಾಪಕರೂ ಇತರ ಪ್ರತಿಷ್ಠಿತರೂ ಕುಳಿತಿದ್ದರು. ಅವರ ಮುಂಭಾಗದಲ್ಲಿ ಅತ್ಯಂತ ಸಭ್ಯವಾದ ಸವತ್ಸ ಗೋವು ಕಂಬಕ್ಕೆ ಕಟ್ಟಲ್ಪಟ್ಟಿತ್ತು. ಚತುಃಶಾಖೆಯ ೨೦-೨೫ ವಿದ್ಯಾರ್ಥಿಗಳು ವೇದಘೋಷ ಮಾಡಲು ಸಿದ್ಧರಾಗಿ ಆಕಳ ಸುತ್ತಮುತ್ತಲೇ ಕುಳಿತಿದ್ದರು. ಅವರ ಆಚೆಯಲ್ಲಿ ಸುಮಂಗಲೆಯರೂ ಬೇರೆ ಹೆಣ್ಣುಮಕ್ಕಳೂ ಆನಂದಪರವಶರಾಗಿ ಸಂದಣಿಗೊಂಡು ನಿಂತು ನೋಡುತಲಿದ್ದರು. ಅಂದಿನ ಆ ಪ್ರಸಂಗದ ಶೋಭೆಯು ವಿಲಕ್ಷಣವು

ಅಪೂರ್ವವೂ ಆಗಿ ಗಳಗನಾಥರಿಗೆ ತೋರಿತು. ತಮ್ಮ ಸದ್ಗುರುವಿನ ಸಾನ್ನಿಧ್ಯದ ವಿಷಯದಲ್ಲಿ ಗಳಗನಾಥರಿಗಿದ್ದ ನಿಷ್ಠೆಯ ಮಾನದಂಡದಂತಿದೆ ಈ ಪ್ರಸಂಗ.

ಈ ವೇಳೆಗೆ ಅಗಡಿಯ ಸುತ್ತುಮುತ್ತು ಪ್ಲೇಗು ಹಬ್ಬಿತು. ಆಗ, ಶ್ರೀ ಸ್ವಾಮಿಯವರನ್ನು ಒಂದು ಮೈಲು ದೂರದ ಗುಡಿಸಲಿನಲ್ಲಿ ನಿಲ್ಲಿಸಬೇಕು. ಮತ್ತು ವಿದ್ಯಾರ್ಥಿಗಳೆಲ್ಲರನ್ನು ಅವರವರ ಊರಿಗೆ ಕಳಿಸಬೇಕು - ಎಂದು ಹಿರಿಯರು ನಿರ್ಣಯಿಸಿದರು. ಆ ದಿನ ವಿದ್ಯಾರ್ಥಿಗಳೂ ಅಧ್ಯಾಪಕರೂ ಊಟಕ್ಕೆ ಕುಳಿತಾಗ ಮಾಡಿದ ಚತುರ್ವೇದದ ಘೋಷದಿಂದ ಆನಂದವನಸ್ಥರಿಗೆ ದುಃಖಮಿಶ್ರಿತಾನಂದವಾದದ್ದೇನೂ ಆಶ್ಚರ್ಯವಲ್ಲ. ಹುಡುಗರು ವೇದವನ್ನು ಅನ್ನುತ್ತಿರಲು ಗಳಗನಾಥರು ಶ್ರೀ ನಾರಾಯಣ ಭಗವಾನರನ್ನು ಕುರಿತು ಶ್ರೀ ಸ್ವಾಮಿಯ ಪುಣ್ಯವಿದ್ದರೆಯೇ ಈ ಗಂಭೀರವಾದ ನೋಟವು ತಿರುಗಿ ಆನಂದವನದಲ್ಲಿ ಕಣ್ಣಿಗೆ ಬಿದ್ದೀತು. ಆದ್ದರಿಂದ ಈಗೇ ಕಣ್ಣು ತುಂಬ ನೋಡಿ, ಕಿವಿತುಂಬ ವೇದಘೋಷವನ್ನು ತುಂಬಿಕೊಳ್ಳಬೇಕೆಂದು ನುಡಿದರು.

ಪ್ರೆಸ್ಸಿನ ವತಿಯಿಂದ ಶ್ರಾವಣದ ಸೋಮವಾರಗಳಲ್ಲಿ ಊರಿಗೆ ಪ್ರಸ್ತ ಮಾಡಿಸುವುದು ವಾಡಿಕೆ. ಆ ವರ್ಷದ ಮೂರನೆಯ ಶ್ರಾವಣ ಸೋಮವಾರ ಗುರುಗಳ ದೇಹಸ್ಥಿತಿ ಉಲ್ಬಣಗೊಂಡಿತು. ಆದರೂ ನಿಯಮವನ್ನು ಬಿಟ್ಟು ಕೊಡಬಾರದೆಂಬ ಹಟದಿಂದ ಗಳಗನಾಥರು ಅಗಡಿ ಊರಿಗೆ, ಆಮಂತ್ರಣಕೊಡಲೆಂದು - ಹೋದರು.

ಆಮಂತ್ರಣ ಹೇಳಿದ ಬಳಿಕ ಏನಾದರೂ ವಿಪರೀತವಾದರೆ ಎಷ್ಟು ಅಪಕೀರ್ತಿಯಾಗುವದಲ್ಲ, ಎಂದು ಚಿಂತೆ ಮೂಡಿತು. ಆದರೂ ಅವರು ತಮ್ಮ ನಿಶ್ಚಯವನ್ನು ಬಿಡದೆ ಶ್ರೀ ಗುರುಗಳ ಅಷ್ಟಕವನ್ನು ಗಟ್ಟಿಯಾಗಿ ಅನ್ನುತ್ತ ಊರೊಳಗೆ ನಡೆದರು. ಅವರಲ್ಲಿ ಎಂದೂ ಹುಟ್ಟದೆಯಿದ್ದಂಥ ಭಕ್ತಿಯು ಮೊಳೆದೋರಿದಂತಾಗಲು ಶ್ರೀ ಸ್ವಾಮಿಯು ಸ್ಥಾಪಿಸಿದ ಲಕ್ಷ್ಮೀಪತಿಯ ಗುಡಿಗೆ ಹೋಗಿ ಆತನನ್ನು ಭಕ್ತಿಯಿಂದ ಸದ್ಗದಕಂಠರಾಗಿ ಪ್ರಾರ್ಥಿಸಿ - "ಮಹಾರಾಯಾ, ವೆಂಕಟೇಶಾ ಶ್ರೀ ಸ್ವಾಮಿಯವರಿಗೆ ಅತ್ಯವಸ್ಥೆಯಿದೆ, ಆದ್ದರಿಂದ ನೀನು ಅಗ್ರಹಾರಕ್ಕೆ ಬಂದು ನಿಂತು ಇಂದಿನ ಪ್ರಸ್ತ ಮಾಡಿಸಬೇಕು. ಶ್ರೀ ಸ್ವಾಮಿಯವರಿಗೆ ಆರೋಗ್ಯವಾಗಬೇಕು" ಎಂದು ಬೇಡಿಕೊಂಡು ಅರ್ಚಕರಾದ ವೆಂಕಣ್ಣಭಟ್ಟ ರಾಜಪುರೋಹಿತ ಇವರ ಕಡೆಯಿಂದ ಆಮಂತ್ರಣಾಕ್ಷತೆಗಳನ್ನು ಲಕ್ಷ್ಮೀಪತಿಗೆ ಕೊಡಿಸಿ. ಒಂದು ಪೂರ್ಣವಾದ ನಾರಿಕೇಲ ಫಲವನ್ನು ಲಕ್ಷ್ಮೀಪತಿಯ

ಬಳಿಯಲ್ಲಿಡಿಸಿ, ಪ್ರಸ್ತವು ಯಥಾಸಾಂಗವಾದ ಬಳಿಕ ಸಂಜೆಯ ಮುಂದೆ ಈ ಫಲವನ್ನು ತಕ್ಕೊಂಡು ಹೋಗುವೆನೆಂದು ಹೇಳಿ, ಊರಲ್ಲಿ ಎಲ್ಲ ಬ್ರಾಹ್ಮಣರಿಗೆ ಆಮಂತ್ರಣ ಕೊಟ್ಟರು. ಆಮಂತ್ರಣದ ಕೆಲಸ ತೀರಿದ ಬಳಿಕ ಅವರು ಶ್ರೀ ಗುರುಗಳ ಬಳಿಗೆ ಹೋದರು. ಅಷ್ಟರಲ್ಲಿ ಶ್ರೀ ಸ್ವಾಮಿಯವರು ಎದ್ದು ಕುಳಿತುಕೊಂಡಿದ್ದರು. ಆಗ ಗಳಗನಾಥರಿಗೆ ಎಷ್ಟು ಆನಂದವಾಗಿರ ಬಹುದೆಂಬುದನ್ನು ವಾಚಕರೇ ತರ್ಕಿಸತಕ್ಕದು.

ಮುಂದೆ ಉತ್ಸಾಹದಿಂದ ಎಲ್ಲ ಕಾರ್ಯಗಳು ನಡೆದುವು. ನಾಲ್ಕು ಗಂಟೆಯ ಸುಮಾರಿಗೆ ಛಾಯಾಸಕ್ತ ಸಮಯವೆಂದು ಎಲೆ ಹಾಕಿದರು.... ಅಷ್ಟರಲ್ಲಿ ಮೂರು ನಾಮದ ಜಟಾಧಾರಿ ಪುರುಷನೊಬ್ಬನು ಮಹಾದ್ವಾರದೊಳಗಿಂದ ಅಕಸ್ಮಾತ್ತಾಗಿ ಒಳಗೆ ಬಂದನು. ಆತನನ್ನು ಮೊಟ್ಟಮೊದಲು ಗಳಗನಾಥರು ನೋಡಿ ಓಡುತ್ತ ಆತನ ಬಳಿಗೆ ಹೋಗಿ ನಮಸ್ಕಾರ ಮಾಡಿದರು. ಆಗ ಆ ಜಟಾಧಾರಿ ಪುರುಷನು ಗಳಗನಾಥರನ್ನು ಕುರಿತು - 'ನಾನು ತಿರುಪತಿ ಗೋವಿಂದರಾಜ ಪಟ್ಟಣದವನು. ರಾಮಾನುಜನು. ಹರಿಹರದಿಂದ ಹೋಗುವವನು. ಯಾಕೊ ಮನಸ್ಸಾದ್ದರಿಂದ ಇಲ್ಲಿಗೆ ಬಂದೆನು. ನಿಮ್ಮಲ್ಲಿ ಊಟ ಮಾಡುವೆನು. ಈಗಿನ ಪಂಗ್ತಿ ಸಾಗಲಿ. ಹಿಂದುಗಡೆ ನಾನು ಕೂಡುವೆನು - ಎಂದು ಹೇಳಿ ಮಹಾದ್ವಾರದ ಬಂಕದ ಕಂಬಕ್ಕೆ ಆತುಕೊಂಡು ಪೂರ್ವಾಭಿಮುಖವಾಗಿ ಕುಳಿತುಕೊಂಡು ಬ್ರಾಹ್ಮಣ ಭೋಜನವಾಗುವದನ್ನು ನೋಡಹತ್ತಿದನು! ಮೊದಲನೆಯ ಪಂಗ್ತಿಯಾಯಿತು. ಎರಡನೆಯ ಪಂಗ್ತಿಗೆ ಒತ್ತಟ್ಟಿಗೆ ಆ ಜಟಾಧಾರಿ ಪುರುಷನಿಗೆ ಎಲೆ ಹಾಕಿ ಬಡಿಸಿತು. ಎಲ್ಲರ ಸಂಗಡ ಆತನು ಊಟಕ್ಕೆ ಕುಳಿತುಕೊಂಡನು. ಅರ್ಧ ಊಟವಾದ ಬಳಿಕ ಗಳಗನಾಥರ ಮನಸ್ಸಿನಲ್ಲಿ ಫಕ್ಕನೆ –'ಆಹಾ! ಶ್ರೀ ಲಕ್ಷ್ಮೀಪತಿಗೆ ಆಮಂತ್ರಣಕೊಟ್ಟೆನು. ಆದರೆ ಎಲ್ಲರ ಸಂಗಡ ಊಟಕ್ಕೆ ಕರಿಸಲಿಲ್ಲ! ಆದರೂ ಆತನು ಕರುಣಾಳುವಾಗಿ ನನ್ನ ತಪ್ಪು ಎಣಿಸದೆ ಊಟಕ್ಕೆ ಬಂದಿದ್ದಾನೆ... ಎಂಬ ವಿಚಾರ ಬರಲು ಗಳಗನಾಥರ ಮೈಮೇಲಿನ ಕೂದಲುಗಳು ನೆಟ್ಟಗಾದವು...... ಆ ಜಟಾಧಾರಿಯು ಸಾಕ್ಷಾತ್ ಲಕ್ಷ್ಮೀಪತಿಯೆಂದು ಭಾವಿಸಿ'. ಆತನ ಎಂಜಲು ಗೋಮಯವನ್ನು ಸ್ವತಃ ಮಾಡಿದರು. ಜಟಾಧಾರಿಗೆ ಮಲಗಿಕೊಳ್ಳಲು ಸ್ಥಳವಾಯಿತು. ಮರುದಿನ ಆತನು ಆನಂದವನದಲ್ಲಿದ್ದು ಗಳಗನಾಥರನ್ನು ಬಹು ಸರಸವಾಗಿ ಬೋಧಿಸಿದನು.

ಅಂದೇ ಶ್ರೀ ಗುರುಗಳನ್ನು ಗುಡಿಸಲಿಗೆ ಕರೆದೊಯ್ಯಲಾಯಿತು. ಆದರೆ ಅಲ್ಲಿ ಹೊಟ್ಟೆಶೂಲೆ ಹೆಚ್ಚುತ್ತಲೇ ಹೋಯಿತು. ಐದನೆಯ ದಿವಸವೆ, ಅವರನ್ನು ತಿರುಗಿ ಕರೆತರಬೇಕೆನ್ನುವ ನಿರ್ಧಾರದಿಂದ ಗಳಗನಾಥರೂ, ಕುಲಕರ್ಣಿ ಯಲ್ಲಪ್ಪನವರೂ ಅಲ್ಲಿಗೆ ಹೋದರು. ಆಗ ಅವರೊಡನೆ ಸಾಧುಗಳು ಮುಂದಿನ ಸೇವಾಧರ್ಮದ ಬಗ್ಗೆ ಚರ್ಚಿಸಿದರು. ಅಂತೂ ಮರುದಿನ (ಭಾದ್ರಪದ ಶುದ್ಧ ಶುಕ್ರವಾರ) ಪಲ್ಲಕ್ಕಿಯಲ್ಲಿ ಆನಂದವನಕ್ಕೆ ಅವರನ್ನು ಕರೆತಂದಾಗ ಇತರರಿಗೆ ಸಂಭ್ರಮವೇ ಸಂಭ್ರಮ.

ಮತ್ತೆ ನಾಲ್ಕು ದಿನಗಳು ಉರುಳಿದುವು. ಸೋಮವಾರ ರಾತ್ರಿ ಗುರುಗಳಿಗೆ ಸಂಕಟ ಹುಟ್ಟಿ ಬಹಳ ತ್ರಾಸಪಟ್ಟರು. ಎಲ್ಲರಲ್ಲಿಯೂ ಈಶ್ವರತ್ವವನ್ನು ಕಾಣುತ್ತಿದ್ದ ಶೇಷಾಚಲರು, ತಮ್ಮ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡಿದ ನಾರಾಯಣ ಭಗವಾನರು, ಶಂಕರ ಭಗವಾನರು, ಶ್ರೀನಿವಾಸ ಶಾಸ್ತ್ರಿಗಳು, ಗಣಪಯ್ಯನವರು ಹಾಗೂ ಸೊಸೆ ವೆಂಕೂಬಾಯಿ ಇವರನ್ನು ಕರೆದು "ಎಲ್ಲಿ ನಿಮ್ಮ ಚರಣಗಳನ್ನು ಕೊಡಿರಿ" ಎಂದರು. ಆಗ ಆ ಐವರಿಗೆ ಆದ ಸಂಕೋಚ ಅಷ್ಟಿಷ್ಟಲ್ಲ. ಆದರೂ ಬಿಡದೆ ಅವರಿಗೆ ನಮಸ್ಕರಿಸಿದರು. ಮಂಗಳವಾರ ಹೇಗೂ ದಾಟಿತು. ಬುಧವಾರ ನಸುಕಿನಲ್ಲಿ ೩॥–೪ ಗಂಟೆಯ ಸುಮಾರಕ್ಕೆ ಗಳಗನಾಥರು ಶ್ರೀ ಗುರುಗಳ ಬಳಿಗೆ ಬಂದಾಗ ಅವರು ಎದ್ದು ಕುಳಿತಿದ್ದರು. ಅವರಿಗೆ ಊರ್ಧ್ವಶ್ವಾಸವಿಟ್ಟಂತೆ ಗಳಗನಾಥರಿಗೆ ತೋರಿತು. ಅವರು ಕೂಡಲೆ ವೈದ್ಯರನ್ನು ಕರೆತಂದು ತೋರಿಸಲು, ಅವರು ನಾಡಿಯನ್ನು ಹಿಡಿದು, ಲಕ್ಷಣವು ನೆಟ್ಟಗಿಲ್ಲ. ಗುರುಗಳನ್ನು ಏನಾದರೂ ಕೇಳುವದಿದ್ದರೆ ಬೇಗನೆ ಕೇಳಿಬಿಡಿರಿ, ಎಂದು ಹೇಳಲು ಗಳಗನಾಥರು ಅಸಮಾಧಾನಪಟ್ಟು ನೆಟ್ಟಗೆ ಸ್ನಾನ ಮಾಡಿ, ತಮ್ಮ ಕುಟುಂಬಕ್ಕೆ, "ಸ್ವಾಮಿಗೆ ಬಹಳ ಹೆಚ್ಚು ಕಡಿಮೆಯಾಗಿದೆ. ಬೇಗನೆ ಮೈ ತೊಳಕೊಂಡು ಬಾ" ಎಂದು ಹೇಳಿ ತಾವು ಗುರುಗಳ ಬಳಿಗೆ ಹೋದರು. ಆಗ ಶ್ರೀ ಗುರುಗಳು ಮಲಗಿದ್ದರು. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಅಂದರೆ ೫–೫॥ ಗಂಟೆಯ ಸುಮಾರಕ್ಕೆ ಎಬ್ಬಿಸ ಕೂಡ್ರಿಸ ಹೇಳಿ, ಅಂಗಿಯನ್ನು ತೆಗೆಸಿಕೊಂಡು ಪರದೆಯನ್ನು ಬಿಚ್ಚ ಹೇಳಿದರು. ಗುರುಗಳು ಸ್ಪಷ್ಟವಾಗಿ ಕುಳಿತು ಮಾತಾಡುವದನ್ನು ನೋಡಿ ಯಾರಿಗೂ ಕೆಟ್ಟ ಕಲ್ಪನೆ ಬರಲಿಲ್ಲ. ಯಾರಿಗೂ ಪರದೆಯನ್ನು ಬಿಚ್ಚುವ ಧೈರ್ಯವಾಗಲಿಲ್ಲ... ಬಳಿಕ ಶ್ರೀ ಗುರುಗಳ ಸೊಸೆಯಂದಿರೂ, ಶ್ರೀ ನಾರಾಯಣ ಭಗವಾನರ ಪತ್ನಿಯೂ ಆರತಿಯನ್ನು

ಹಚ್ಚಿಕೊಂಡು ಬಂದರು. ಆಗಿನ ದಿವ್ಯ ಪ್ರಸಂಗವನ್ನು ವರ್ಣಿಸುವರಾರು? ಎಲ್ಲರೂ ಉಚ್ಚಸ್ವರದಿಂದ ಆರತಿ ಪದವನ್ನು ಅನ್ನುವಾಗ ಸುಮಂಗಲೆಯರು ಎತ್ತಿದ ಆರತಿಯ ದಿವ್ಯ ಜ್ಯೋತಿಯಲ್ಲಿ ಶ್ರೀ ಸದ್ಗುರೋತ್ತಮರ ಪ್ರಸನ್ನ ಮುಖವು ಆನಂದಕರವಾಗಿ ತೋರಿತು. ಅದನ್ನು ನೋಡಿ ಲೇಖಕನ ಕಂಠವು ಗದ್ಗದಿತವಾಗಿ ಅಶ್ರುಗಳುದುರಿದವು. ಆರತಿಯ ಅನಂತರ ನಿತ್ಯಕ್ರಮದಂತೆ ಪಂಚಾಂಗ ಶ್ರವಣವಾಯಿತು. ಗು.ಭ. ಶ್ರೀನಿವಾಸ ಶಾಸ್ತ್ರಿಗಳು ದಿನಾಲು ಹೇಳುವಂತೆ - ಇಂದು ಸಪ್ತಮಿ, ಬುಧವಾರ ಅನುರಾಧಾ ನಕ್ಷತ್ರವದೆ, ಅಮೃತಸಿದ್ಧಿಯ ಯೋಗವಿರುವದು. ಅನ್ನಲು 'ವಾಹವ್ವಾ' ಎಂದು ಶ್ರೀ ಗುರುಗಳು ಸಂತೋಷಪಟ್ಟರು.

'ಈ ಅವರಸರದಲ್ಲಿ ಗಳಗನಾಥ ಇವರ ಕುಟುಂಬಕ್ಕೆ ಶ್ರೀ ಗುರುವಿನ ಪೂಜೆಮಾಡುವ ಪ್ರೇರಣೆಯಾಗಿ ಅವರು ಒಂದು ತುಪ್ಪದ ದೀಪ ಹಾಕಿಕೊಂಡು ಹಿಂದಕ್ಕೆ ಶ್ರಾವಣ ಸೋಮವಾರ ದಿವಸ ಶ್ರೀ ವೆಂಕಟಪತಿಯ ಗುಡಿಯಿಂದ ತಂದಿದ್ದ ಸಿಪ್ಪಿ ತೆಂಗಿನಕಾಯಿಯನ್ನೂ, ೫ ರೂಪಾಯಿಗಳನ್ನೂ ತೆಗೆದುಕೊಂಡು ಗುರುಗಳ ಬಳಿಗೆ ಬಂದರು.... ಶ್ರೀ ಗುರುವಿಗೆ ಕುಂಕುಮ ಹಚ್ಚಿ - ಈ ೫ ರೂಪಾಯಿ ಸೇವೆ ತಕ್ಕೊಳ್ಳಬೇಕೆಂದು ನುಡಿಯಲು ಶ್ರೀ ಗುರುಗಳು ಇಸಿದುಕೊಂಡು ಭಗವಾನರ ಕೈಯಲ್ಲಿ ಕೊಟ್ಟರು! ಶ್ರೀ ಗುರುದತ್ತ ಫಲವನ್ನು ಸ್ವೀಕರಿಸಿ ಗಳಗನಾಥರ ಕುಟುಂಬವು ಇತ್ತ ಬರಲು, ಪರಸ್ಥಳದ ಮತ್ತೊಬ್ಬ ಪುಣ್ಯವಂತ ಹೆಣ್ಣುಮಗಳು ಸ್ವಾಮಿಯನ್ನು ಪೂಜಿಸಿ ಎರಡು ರೂಪಾಯಿ ಕೊಟ್ಟಳು.

ಮರಣಕಾಲಕ್ಕೆ ಶ್ರೀ ಗುರುಗಳು ಏನು ಕುರುಹುದೋರುತ್ತಾರೋ ಎಂದು ಇತರರೊಡನೆ ಗಳಗನಾಥರೂ ಕಾದಿದ್ದರು. ಅವರು ಮರಣೋನ್ಮುಖರಾಗಿ ಈಶ್ವರನಾಮಾವಳಿಯ ಉಚ್ಚಾರ ಮಾಡುತ್ತ "ಪಂಪಾ ವಿರೂಪಾಕ್ಷಾ, ಕಾಶೀ ವಿಶ್ವನಾಥಾ" ಎಂದು ನುಡಿಯುತ್ತಿರಲು ಅದೇ ಕಾಲಕ್ಕೆ ಕಾಶಿಯಿಂದ ಭಾಗೀರಥಿಯನ್ನು ತಕ್ಕೊಂಡು ಬಂದಿದ್ದವರಿಬ್ಬರು ಗಾಡಿಯಿಂದ ಇಳಿದು ಒಳಗೆ ಬಂದರು. ಅವರಲ್ಲಿ ಒಬ್ಬನು ಗಂಡಸು, ಇನ್ನೊಬ್ಬ ವಿಧವೆ. ಇದಲ್ಲವೆ, ಗುರುಗಳ ಮಹಿಮೆ - ಎಂದು ಗಳಗನಾಥರು ಭಕ್ತಿಪರವಶರಾದರು. ಆ ಭಾಗ್ಯಶಾಲಿಗಳು ತಂದ ಭಾಗೀರಥಿಯನ್ನು ಶ್ರೀ ಗುರುಗಳ ಮುಖದಲ್ಲಿ, ಅವರ ಚಿರಂಜೀವರು ಹಾಕಿದರು.

ವೈದ್ಯರಾದ ರಾಮಭಾವು ಸಾಂಬಾರೆ ಅವರು ನಾಡಿಯನ್ನು ನೋಡಿದರು. ಕೇವಲ ಹದಿನೈದು ಮಿನಿಟಿನ ಹಿಂದೆ, ಅವರು ಒಂದು ಔಷಧವನ್ನು ಕಫೋಪಶಮನಕ್ಕಾಗಿ ಕೊಟ್ಟಿದ್ದರು. ಶ್ರೀ ಗುರುಗಳಿಗೆ ಮರಣ ಕಾಲದಲ್ಲಿ ಯಾತರ ತ್ರಾಸವೂ ಆದಂತೆ ಯಾರ ಕಣ್ಣಿಗೂ ಬೀಳಲಿಲ್ಲ. ಮನಸ್ಸಿನಲ್ಲಿ ಅವರ ನಾಮಸಂಕೀರ್ತನೆ ನಡದಂತೆ ತೋರಿತು. ಅವರ ಶ್ವಾಸವನ್ನು ಪರೀಕ್ಷಿಸುವಂತೆ ಗಳಗನಾಥರು ನಾರಾಯಣ ಭಗವಾನರಿಗೆ ಸೂಚಿಸಿದರು. ಭಗವಾನರ ಲಕ್ಷ್ಯವು ಅತ್ತಕಡೆಗೇ ಇದ್ದಿತು. ಭಗವಾನರು ಯಲ್ಲಪ್ಪನವರಿಗೆ ರಾಮದಾಸರ 'ಮನಾಚೇ ಶ್ಲೋಕ'ಗಳನ್ನು ಅನ್ನ ಹೇಳಿದರು. ಕೆಲವರು ಗೀತೆಯ ಪಾರಾಯಣ ಮಾಡತೊಡಗಿದರು. ಕೆಲವರು ಗುರ್ವಷ್ಟಕವನ್ನು ಅನ್ನಹತ್ತಿದರು. ಬಹುಜನರು ಉಚ್ಚಸ್ವರದಿಂದ ಭಜನೆ ಮಾಡಹತ್ತಿದರು. ಆಗ ಯಾರ ಮೈಮೇಲೂ ಸ್ಮೃತಿಯಿದ್ದಂತೆ ತೋರಲಿಲ್ಲ. ವೈದ್ಯರು ಇನ್ನೊಮ್ಮೆ ನಾಡಿ ನೋಡಿ ಸಂಜ್ಞೆ ಮಾಡಲು ಗಳಗನಾಥರ ಸೂಚನೆಯಂತೆ ದರ್ಭಾಸನವು ಸಿದ್ಧವಾಗಿ ಗುರುಗಳ ದೇಹವನ್ನು ಎತ್ತಿ ಅದರ ಮೇಲೆ ಮಲಗಿಸಲಾಯಿತು. ಎಲ್ಲರೂ ನಾಮಘೋಷ ಮಾಡುತ್ತಿರುವಾಗ ಸದ್ಗುರುವು ವಿದೇಹ ಸ್ಥಿತಿಯನ್ನು ಹೊಂದಲು, ಆ ಜಡದೇಹವು ಸ್ವಾಭಾವಿಕ ಶಾಂತಮುದ್ರೆಯಿಂದ ತುಂಬಿ ತುಳುಕುತ್ತಿದ್ದ ಮುಖದಿಂದ ಒಪ್ಪುತ್ತ ಸ್ತಬ್ಧವಾಗಿ ಶಯನಮಾಡಿ, ದೀರ್ಘ ನಿದ್ರಾವಶವಾಯಿತು!

–ಗಳಗನಾಥರ ಬದುಕಿನ ನೆನಹಿನಲ್ಲಿ ಇದೊಂದು ಅಳಿಸಲಾಗದ ಘಟನೆಯೇ ಸೈ. ಗುರುವಿನ ಮರಣವು ನಿರೀಕ್ಷಿತವೇ ಆಗಿದ್ದುದರಿಂದಲೂ. ವಿದೇಹ ಸ್ಥಿತಿಯಲ್ಲಿ ಗುರುವು ಇಲ್ಲಿಯೇ ಇರುವನೆಂಬ ಅಚಲ ನಂಬಿಕೆಯಿಂದಲೂ ಆ ದುಃಖವನ್ನು ಅವರು ಸಹಿಸಿಕೊಂಡರು. ಮುಂದೆ ಔರ್ಧ್ವ ದೈಹಿಕ ಮುಂತಾದ ಕರ್ಮಗಳು ವ್ಯವಸ್ಥಿತವಾಗಿ ವಿಜೃಂಭಣೆಯಿಂದ ಜರುಗಿದವು. ಅಂತೆಯೇ ಗಳಗನಾಥರು ಅದನ್ನು ನಿರ್ವಾಣ ಮಹೋತ್ಸವವೆಂದು ಕರೆದದ್ದು. ಒಂದೇ ಒಂದು ಕೊರತೆಯೆಂದರೆ ೧೧ನೆಯ ದಿವಸ ಕಾಕಪಿಂಡವಾಗಲಿಲ್ಲ. ಸಂಬಂಧಪಟ್ಟ ಎಲ್ಲರೂ ಉದಕವನ್ನು ಬಿಟ್ಟರು. ಗಳಗನಾಥರು 'ನೀರು ಬಿಡುತ್ತ ಸ್ಥಾನಬಿಟ್ಟು ಹೋಗುವದಿಲ್ಲ' ಎಂದು ಆಶ್ವಾಸನವಿತ್ತರು. ಏನಾದರೇನು, ಗುರುಗಳ ಯಾವುದೂ ವಾಸನೆ ಕಳೆದಿರಲಿಲ್ಲ.

ಇನ್ನು ಮುಂದೆ ಅಗ್ರಹಾರದ ಯಜಮಾನರಾರೆಂಬುದೆ ಆಗಿನ ಕೂಟ ಪ್ರಶ್ನೆಯಾಗಿದ್ದಿತು. ಸಾಧು-ಸಜ್ಜನರಾಗಿದ್ದ ಅವರ ಮಗ ಚಿದಂಬರಮೂರ್ತಿಗಳೇ ಆಗಬೇಕೆಂದು ಗಳಗನಾಥರು ಅಭಿಪ್ರಾಯ ತಳೆದಿದ್ದರು. ಅಗ್ರಹಾರದ ದಿವಾಣರಂತೆ ಇದ್ದ ನಾರಾಯಣ ಭಗವಾನರಿಗೂ ಗಳಗನಾಥರಿಗೂ ಮೊದಲಿನಿಂದ ತಾತ್ವಿಕ ಭಿನ್ನಾಭಿಪ್ರಾಯ ಇದ್ದೇ ಇದ್ದಿತು. ಗಳಗನಾಥರದು ಶಿಸ್ತಿನ, ಕರ್ತವ್ಯನಿರತ ಜೀವನ. ಅಲ್ಲದೆ ಪಾಠಶಾಲೆ. ಪತ್ರಿಕೆ, ಪ್ರೆಸ್ - ಇವುಗಳ ಕಾರಣದಿಂದ ಗಳಗನಾಥರ ಪ್ರಸ್ಥ ದಿನದಿನಕ್ಕೆ ಬೆಳೆಯುತ್ತ ನಡೆದಿದ್ದಿತು.

ನಾರಾಯಣ ಭಗವಾನರ ಪಕ್ಷದವರು 'ಗಳಗನಾಥ ಮಾಸ್ತರನಿಂದಾದ ಈ ಪಾಠಶಾಲೆಯೂ ಚಂದ್ರಿಕೆಯೂ ಮೂರು ದಿನದವು. ನಾವು ಆರಂಭದಿಂದ ಶ್ರೀ ಗುರುಸನ್ನಿಧಿಯಲ್ಲಿ ಅತಿಥಿ ಸೇವಾಧರ್ಮವನ್ನು ಕಾಯುತ್ತ ಬಂದಿದ್ದೇವೆ. ಮಾಸ್ತರನು ಲೌಕಿಕನು; ಪಾರಮಾರ್ಥಿಕ ವಿಚಾರವೂ ಗುರುಬೋಧ ರಹಸ್ಯವೂ ಆತನಿಗೆಲ್ಲಿ ತಿಳಿಯುತ್ತವೆ? ಆತನ ಸಂಸ್ಥೆಯು ಲೌಕಿಕವು. ಅದರಲ್ಲಿ ವ್ಯವಹರಿಸುವವರು ಲೌಕಿಕ ಪ್ರತಿಷ್ಠೆಯನ್ನು ಪಡೆಯಬಹುದಲ್ಲದೆ, ಗುರ್ವಾನುಗ್ರಹಕ್ಕೆ ಪಾತ್ರರಾಗಲಾರರು. ಮೊದಲು ಹುಟ್ಟಿದ ಕಿವಿಗಿಂತ ಹಿಂದುಗಡೆ ಹುಟ್ಟಿದ ಕೋಡುಗಳು ಆಯುವೆನ್ನುವಂತೆ ಮಾಸ್ತರನ ಇರಿತಕ್ಕೆ ಮಹತ್ವ ಕೊಡಬೇಡಿರಿ ...... ಎಂಬುದಾಗಿ ಟೀಕಿಸುತ್ತಿದ್ದರಂತೆ. ಆನಂದವನದಲ್ಲಿ ಮೂಲತಃ ಇದ್ದದ್ದು ಅತಿಥಿಸೇವಾ ರೂಪದ ವೃಕ್ಷ ಎಂಬುದನ್ನು ಗಳಗನಾಥರು ಬಲ್ಲರು. ಆದರೆ ಅದಕ್ಕೆ ವೈದಿಕ ವಿದ್ಯಾದಾನದಂತಹ ಫಲ ದೊರೆಯಬೇಕಲ್ಲದೆ, ಹಿಂದೆ ಅತಿಥಿಗಳಾಗಿ ಬಂದವರು, ಬಹಳ ದಿನ ಅಲ್ಲಿಯೆ ನಿಂತು, ಅಗ್ರಹಾರದ ಸೇವಕರಾದಂತೆ ನಟಿಸಿ, ಆಮೇಲೆ ಆಲಸಿಗಳಾಗಿ ಅಶನಾರ್ಥಿಯಾಗುವದು ಸಲ್ಲ - ಎಂಬುದಾಗಿ ಅವರು ವಾದಿಸಿದರು. ಇಂಥವರು ಯೋಗ್ಯತೆಯಿಲ್ಲದೆ ಬೋಧೆ ಮಾಡುವುದನ್ನು ಕಂಡರಂತೂ ಗಳಗನಾಥರಿಗೆ ವಿಶೇಷ ಬೇಸರ. 'ಅತಿಥಿಸೇವಾ' ಗುಂಪಿನವರು ನಿತ್ಯದ ಊಟಕ್ಕೆ ಜೋಳದ ನುಚ್ಚಿನ ಅಡಿಗೆ ಮಾಡಿ, ಪರ್ವ, ಉತ್ಸವ ಕಾಲಗಳಲ್ಲಿ ದುಂದುವೆಚ್ಚ ಮಾಡುವರೆಂದು ಗಳಗನಾಥರು ಆಕ್ಷೇಪಿಸಿದರಲ್ಲದೆ, ವಿದ್ಯಾರ್ಥಿಗಳ ಊಟ, ತಿನಸುಗಳು ಪೌಷ್ಟಿಕ ಹಾಗೂ ರುಚಿಕರವಾಗಿರಬೇಕು. ಆದರೆ ಅವರ ದೈನಂದಿನಿಯಲ್ಲಿ ಕಟ್ಟುನಿಟ್ಟು, ವ್ಯಾಸಂಗ ನಿಷ್ಠೆ-ಇರುವಂತೆ ನೋಡಿಕೊಳ್ಳಬೇಕು - ಎಂದು ಹೇಳುವವರಾದರು.

ಎರಡು ವರ್ಷದ ವರೆಗೆ ಈ ತಿಕ್ಕಾಟ ಹಾಗೇ ಮುಂದುವರಿಯಿತು. ೧೯೧೭ನೆಯ ಇಸವಿಯಲ್ಲಿ ಪರಿಸ್ಥಿತಿ ಉಲ್ಬಣಗೊಂಡಾಗ ಗಂಗಾಮಠದ ಶ್ರೀಗಳವರು ಮಧ್ಯಸ್ಥಿಕೆ ಮಾಡಲೆಂದರು. ಆಗ ಅಗಡಿಯ ಊರಿನ ಪ್ರಮುಖರೂ ಒಂದು ದಿನ ನೆರೆದರು. ಶೇಷಾಚಲರು ಮೂಲತಃ ಹಾಕಿದ್ದ ಕ್ರಮದಲ್ಲಿ ಆಮೂಲಾಗ್ರ ಬದಲಾವಣೆ ಮಾಡಲು ಪಂಚರ ಮನಸ್ಸು ಸಿದ್ಧವಿರಲಿಲ್ಲ. ಜೊತೆಗೆ ಗಳಗನಾಥರು ಪಾಠಶಾಲೆ, ಪತ್ರಿಕೆ ಹಾಗೂ ಪ್ರೆಸ್ – ಇವು ಮೂರು ರಂಗಗಳಲ್ಲಿ ತಾವು ಸಾಧಿಸಿದ್ದನ್ನೂ, ಅದಕ್ಕಾಗಿ ಕಷ್ಟಪಟ್ಟದ್ದನ್ನೂ, ಒತ್ತಿ ಒತ್ತಿ ಹೇಳುವ ಅನಿವಾರ್ಯ ಪ್ರಸಂಗ ಒದಗಿ ಬಂದಿತು. ಅವರ ಅಭಿಮಾನರೂಪೀ ಹಟ ಪ್ರವೃತ್ತಿಯೂ ಮಧ್ಯಸ್ಥಗಾರರಿಗೆ ಒಂದು ಅವಗುಣವಾಗಿ ತೋರಿತು. ಹೀಗಾಗಿ ಅಗ್ರಹಾರದವರು ಮತ್ತು ಊರ ಜನ ಒಂದು ಬಣವಾದರೆ, ಗಳಗನಾಥರೊಬ್ಬರೇ ಇನ್ನೊಂದು ಬಣವಾದರೆನ್ನಬಹುದು. ಗಳಗನಾಥರು ಆವೇಶದಭರದಲ್ಲಿ ತಾವು ಬಿಟ್ಟು ಹೊರಡುವದಾಗಿ ಹೇಳಿದರು. ಆಗ ಅವರ ಪಾಲಿಗೆ ಅವರ ಗ್ರಂಥಗಳು, ಪ್ರೆಸ್ಸಿನ ಕೆಲವು ಬಿಡಿ ಭಾಗಗಳು (ಕೈಯಿಂದ ಹಣ ಹಾಕಿದ್ದು) ಮಾತ್ರ ಬಂದುವು. ಯಾವ ಪತ್ರಿಕೆಯನ್ನು ಅವರು ಹುಟ್ಟು ಹಾಕಿ, ಏಳು ಸಾವಿರದವರೆಗೆ ಚಂದಾದಾರರ ಸಂಖ್ಯೆಯನ್ನು ಏರಿಸಿ ಪತ್ರಿಕಾ ಪ್ರಪಂಚದಲ್ಲಿ ವಿಕ್ರಮವನ್ನೆ ಸ್ಥಾಪಿಸಿದ್ದರೊ, ಅಂಥ 'ಚಂದ್ರಿಕೆ'ಯನ್ನು ಅವರು ಬಿಟ್ಟುಕೊಡಬೇಕಾಯಿತು. 'ಅಯ್ಯೋ ನನ್ನ ಚಂದ್ರಿಕೆ ಅನಾಥಳಾದಳಲ್ಲ' ಎಂದು ಅವರ ಮನಸ್ಸು ಬೆಂದಿತು. ಪ್ರೆಸ್ಸಿನ ಸ್ಥಿತಿಯಾದರೂ ಅಷ್ಟೇ. ಅವರ ತರುಣ ಸಹೋದ್ಯೋಗಿಗಳಾದ ಭಿ.ಪ.ಕಾಳೆ, ಯ.ಗೋ. ಕುಲಕರ್ಣಿ ಪ್ರೆಸ್ಸನ್ನು ಆನಂದವನದಲ್ಲಿಯೆ ಮುಂದುವರಿಸುವದಕ್ಕೆ ಸಿದ್ಧರಾದರು. ಇನ್ನು ಪಾಠಶಾಲೆ. ಅದಂತೂ ಅವರ ಹೃದಯಮಂದಿರದಲ್ಲಿ ಮೊದಲಿನಿಂದ ನೆಲೆಗೊಂಡ ಭವ್ಯ ಕನಸು. ಇಲ್ಲಿ ಅದು ಶೇಷಾಚಲರ ಆಶೀರ್ವಾದಬಲದಿಂದ ಮೂರ್ತಸ್ವರೂಪ ತಾಳಿದ್ದಿತು. ಅದನ್ನು ಕೈಗೆ ತೆಗೆದುಕೊಳ್ಳುವದೆಂದರೆ ಲೌಕಿಕ ರೀತ್ಯಾ ಒಂದು ಹೊರೆ. ಗಳಗನಾಥರಿಗೊ ಅದೊಂದು ಪುಣ್ಯವಿಶೇಷ. ಆದರೆ ಸದ್ಯಕ್ಕೆ ಅದಕ್ಕೂ ವಿದಾಯ ನಮಸ್ಕಾರ ಹೇಳಿ, ಗಳಗನಾಥರು ಸಂಸಾರ ಸಮೇತ ಹಾವೇರಿಗೆ ಹೊರಟುಬಿಟ್ಟರು (ಜನವರಿ ೧೯೧೮).

***

೧೯೧೮-೧೯೨೬

# ವೈಭವದ ಗ್ರಂಥೋದ್ಯಮ

ಹಾವೇರಿಯು ಗಳಗನಾಥರಿಗೆ ಅಪರಿಚಿತ ಊರೇನೂ ಅಲ್ಲ. ಆದರೆ ಕುಟುಂಬ ಸಮೇತ ಎಲ್ಲಿ ನೆಲೆ ನಿಲ್ಲಬೇಕು? ವಿಶಾಲವಾದ ಶ್ರೀರಾಮ ಮಂದಿರವೇ ಅವರಿಗೆ ಮೊದಲಿನ ಆಶ್ರಯಸ್ಥಾನವಾಯಿತು. ಪಾಠಶಾಲೆಯನ್ನು ಅವರು ಪೂರ್ಣ ಬಿಟ್ಟು ಬಂದಿರಲಿಲ್ಲ. ಎಂದರೆ ಅದರ ವಿಚಾರ ಅವರ ತಲೆಯಲ್ಲಿ ಇದ್ದೇ ಇದ್ದಿತು. ಪಾಠಶಾಲೆಯ ಸ್ಥಾಪನೆಗೆ ಶ್ರೀರಾಮ ಮಂದಿರವೇ ಅನುಕೂಲ ಸ್ಥಳವಾಗಿ ಕಂಡಿತು. ಬಾದಾಮಿ ನಾಯಕರು, ಜೀವಣ್ಣ ಕುಲಕರ್ಣಿ, ಅಭ್ಯಂಕರ ವಕೀಲರು ಮುಂತಾದ ಪೂರ್ವ ಪರಿಚಯದ ಹಾವೇರಿಯ ಸದ್ಗೃಹಸ್ಥರನ್ನು ಕಂಡುಬಂದರು. ಮರುತಿಂಗಳಲ್ಲಿಯೇ 'ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠಶಾಲೆ'ಯನ್ನು ಪ್ರಾರಂಭಿಸಿದರು. ಗಳಗನಾಥರನ್ನೇ ವಿಶೇಷವಾಗಿ ನೆಚ್ಚಿಕೊಂಡಿದ್ದ ಅನೇಕ ವಿದ್ಯಾರ್ಥಿಗಳೂ ಅಧ್ಯಾಪಕರೂ ಹಾವೇರಿಯ ಈ ಹೊಸ ಪಾಠಶಾಲೆಯನ್ನು ಸೇರಿದರು.

"ವೃಕ್ಷಗಳ ಸಸಿಗಳನ್ನು ಕಿತ್ತಿಹಚ್ಚುವದರಿಂದ ಅವು ಕಸುವಿನಿಂದ ಬೆಳೆಯುವವು. ಪಾಠಶಾಲಾರೂಪವಾದ ವೃಕ್ಷದ ೧೧ ವರ್ಷದ ಸಸಿಯನ್ನು ಆನಂದವನದ ದೂಷಿತ ಪರಿಸ್ಥಿತಿಯಿಂದ ಕಿತ್ತುಕೊಂಡು ಹೋಗಿ, ಹಾವೇರಿಯ ರಾಮಮಂದಿರದಲ್ಲಿ ಊರುವಾಗ ನಮಗೆ ಎಷ್ಟು ತ್ರಾಸವಾಗಿರಬಹುದೆಂಬುದನ್ನು ವಾಚಕರು ತರ್ಕಿಸಬಹುದು! ವಿಪತ್ಕಾಲದಲ್ಲಿ ಚಂದ್ರಹಾರವನ್ನು ಗೂಟವು ನುಂಗಿ ವಿಕ್ರಮರಾಜನಂಥವರಿಗೆ ಕಳವಿನ ಆರೋಪ ಬಂದದ್ದನ್ನು ವಾಚಕರು

ಬಲ್ಲರಷ್ಟೆ? ಅದರಂತೆ ನಮಗೊದಗಿದ ಈ ವಿಲಕ್ಷಣ ಕಾಲದಲ್ಲಿ ನಮ್ಮ ಮೇಲೆ ಇಲ್ಲದ ಆರೋಪಗಳು ಬಂದವು. ಸ್ವಾರ್ಥಪರಾಯಣರಾದ ವಿಘ್ನ ಸಂತೋಷಿಗಳಿಂದ ಶ್ರೀ ಗುರುವಿನ ಪಾಠಶಾಲಾ ವೃಕ್ಷವನ್ನು ಕತ್ತರಿಸಿ ಹಾವೇರಿಯಲ್ಲಿ ಹಚ್ಚಿಸಿರುವುದರಿಂದ ಅದು ಫಲಿಸುವದು ಮುಂದೆಯೇಯೆಂದು ನಾವು ಭಾವಿಸಿರುವೆವು."

-ಗಳಗನಾಥರು ನೊಂದು ನುಡಿದ ಮಾತುಗಳಿವು. ಸಸಿಯನ್ನು ಕಿತ್ತುಹಚ್ಚಿ ಬೆಳೆಸುವದು ಸಾಧ್ಯ. ಆದರದು ವೃಕ್ಷವೇ ಆಗಿದ್ದಾಗ ಅದನ್ನು ಪುನರುಜ್ಜೀವಿಸುವದಕ್ಕೆ ಭಗೀರಥ ಪ್ರಯತ್ನವೇ ಬೇಕು. ಗಳಗನಾಥರು ಆ ಸಾಹಸಕ್ಕಿಳಿದು ವಿಶ್ವಾಮಿತ್ರನಂತೆ ಪ್ರತಿಸೃಷ್ಟಿಯನ್ನೇ ನಿರ್ಮಿಸಲು ಮುಂದಾದರು. ಜಂತಲಿ ಮಹದೇವಶಾಸ್ತ್ರಿಗಳು , ಉಪ್ಪಿನ ಬೆಟಗೇರಿಯ ಕೃಷ್ಣಶಾಸ್ತ್ರಿಗಳು, ಮಹದೇವಶಾಸ್ತ್ರಿಗಳು, ಹಾನಗಲ ಗುರುಭಟ್ಟರು, ತಮ್ಮಣ್ಣಶಾಸ್ತ್ರಿ ಶಾಡಂಬಿ, ನಾರಾಯಣಭಟ್ಟ ಇವರೇ ಮೊದಲಾದವರನ್ನು ಅಧ್ಯಾಪಕರೆಂದು ಕರತಂದರು. ೫೦-೬೦ ಹುಡುಗರು ಸೇರಿದರು. ಯಥಾಪ್ರಕಾರ ಅವರ ಊಟವಸತಿಯೆಲ್ಲವೂ ಉಚಿತ. ಗುರುಭಟ್ಟರು 'ಯಾಜ್ಞಕ'ವನ್ನೂ ತಮ್ಮಣ್ಣ ಶಾಸ್ತ್ರಿಗಳು ಸಂಸ್ಕೃತ ಕಾವ್ಯನಾಟಕಗಳನ್ನೂ ಕಲಿಸುತ್ತಿದ್ದರು. ಸಂಗೀತವನ್ನೂ ಕೆಲವು ಕಾಲ ಹೇಳಿಕೊಡುವ ವ್ಯವಸ್ಥೆ ಇದ್ದಿತು. ಯಾರೇ ವಿದ್ವಾಂಸರು ಬಂದದ್ದಾದರೆ ಗಳಗನಾಥರು ಅವರ ಪ್ರವಚನವನ್ನು ತಪ್ಪದೇ ಇಡಿಸುತ್ತಿದ್ದರು. ಆನಂದವನದಲ್ಲಿದ್ದಾಗ ಮಾಡಿದಂತೆ ಇಲ್ಲಿಯೂ ಕೆಲವರಿಗೆ ಲೇಖನ ಬರೆಯಲು ಪ್ರೇರೇಪಿಸಿದರು. ತಮ್ಮಣ್ಣಶಾಸ್ತ್ರಿಗಳ 'ಧರ್ಮ'ದ ಮೇಲಿನ ಪ್ರಬಂಧ ಮತ್ತು ಜಂತಲಿ ಮಹದೇವಶಾಸ್ತ್ರಿಗಳ 'ಬಂಧ ವಿಮೋಚನ' ಪುಸ್ತಕ - ಇವು ಹೊರಬಂದದ್ದು, ಹೀಗೆ.

ಗಳಗನಾಥರು ಸ್ವತಃ ಯಾವ ಪಾಠವನ್ನೂ ವಿದ್ಯಾರ್ಥಿಗಳಿಗೆ ಹೇಳುತ್ತಿರಲಿಲ್ಲ. ಆದರೆ ಸಂಚಾಲನದ ಸಂಪೂರ್ಣ ಹೊಣೆ ಅವರದಾಗಿತ್ತು. ಗಂಡುಮಕ್ಕಳಿಲ್ಲದ ಗಳಗನಾಥರು ಈ ಛಾತ್ರಮಣಿಗಳನ್ನು ಪುತ್ರವಾತ್ಸಲ್ಯದಿಂದ ಕಾಣುತ್ತಿದ್ದರು. ಆಗಿನ ಅವರ ದಿನಚರಿಯನ್ನು ಅವರ ಪಾಠಶಾಲೆಯ ವಿದ್ಯಾರ್ಥಿಗಳಲ್ಲೊಬ್ಬರಾಗಿದ್ದ ಶ್ರೀ ಗಣೇಶಭಟ್ಟ ಜೋಶಿ ಅವರು ಹೀಗೆ ವಿವರಿಸಿದ್ದಾರೆ. ಗಳಗನಾಥರು ಬೆಳಿಗ್ಗೆ ನಾಲ್ಕಕ್ಕೆ ಏಳುತ್ತಿದ್ದರು. ತಾವೇ ಗಂಟೆ

ಬಾರಿಸಿ ವಿದ್ಯಾರ್ಥಿಗಳನ್ನು ಎಚ್ಚರಿಸುತ್ತಿದ್ದರು. ಪ್ರಾತರ್ವಿಧಿಯನ್ನು ಮುಗಿಸಿ ಅವರೆಲ್ಲ ಅಭ್ಯಾಸಕ್ಕೆ ಕುಳಿತರೆಂದರೆ ತಾವು ಓದುವ / ಬರೆಯುವ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಪ್ರತಿಯೊಬ್ಬರಿಗೂ ಔಡಲ ಎಣ್ಣೆಯ ದೀಪದ ವ್ಯವಸ್ಥೆ. ಸೂರ್ಯೋದಯಕ್ಕೆ ಮುಂಚೆ ಅವರೆಲ್ಲರ ಸ್ನಾನ, ಸಂಧ್ಯಾವಂದನೆ, ಅಗ್ನಿಕಾರ್ಯ, ಸೂರ್ಯನಮಸ್ಕಾರಗಳು ನಡೆಯತಕ್ಕದ್ದು. ಇತ್ತ ತಾವೂ ಶುಚಿರ್ಭೂತರಾಗಿ ಶ್ರೀ ವೆಂಕಟೇಶ ಪಂಚಾಯತನದ ಪೂಜೆ ಮುಗಿಸುವರು. ಪೂಜಾ ಸಿದ್ಧತೆಯೆಲ್ಲ ಪತ್ನಿ ಗಂಗಾಬಾಯಿಯವರಿಗೆ ಸೇರಿದುದಾಗಿತ್ತು. ಅಲ್ಲಿಂದ ದೇವರಿಗೆ ಕಾಕಡಾರತಿ, ಅಗಡಿಯಿಂದ ತಂದ ಸಂಪ್ರದಾಯವದು. ಆರತಿಯ ಪದ, ಗುರುಪಿನ ಮೇಲಿನ ಹಾಡು ಇವನ್ನು ತಮ್ಮ ಇಬ್ಬರು ಹೆಣ್ಣುಮಕ್ಕಳಿಂದ ಹಾಡಿಸುತ್ತಿದ್ದರು. ಆ ಕಾಲಕ್ಕೆ ಅಲ್ಲಿ ಎಲ್ಲರೂ ಹಾಜರಿರಲೇಬೇಕು. ತಾವೋ ತಮ್ಮಿಂದಾದ ತಪ್ಪನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳಲೂ ಗಳಗನಾಥರು ಸಿದ್ಧರು!

ಪೂಜೆ ಮುಗಿದ ಮೇಲೆ ಪತ್ನಿಯ ಶಿಷ್ಯರ ಮತ್ತು ಇತರರ ಊಟದ ವ್ಯವಸ್ಥೆಗೆ ಸ್ವತಃ ಅಣಿಯಾಗುತ್ತಿದ್ದರು. ಇತ್ತ ಗಳಗನಾಥರು ಗೋಶಾಲೆಯತ್ತ ಗಮನಹರಿಸುತ್ತಿದ್ದರು. ಹೌದು, ಗೋಸಂವರ್ಧನೆ ಅವರ ಇನ್ನೊಂದು ಅಚ್ಚುಮೆಚ್ಚಿನ ವಿಷಯವಾಗಿದ್ದಿತು. ಸುಮಾರು ೧೦-೧೫ ಆಕಳುಗಳು ಸದಾ ಇರುತ್ತಿದ್ದವು. ಆಳು 'ಸಗಣಿ-ಕಸ'ವನ್ನು ಮಾಡಿರದಿದ್ದರೆ ತಾವೇ ಸ್ವತಃ ಬರಲನ್ನು ಹಿಡಿದು ನಿಲ್ಲುವರು. ಶಿಷ್ಯರಲ್ಲಿ ಕೆಲವರಿಗೆ, ಒಂದೊಂದು ಆಕಳ ಯೋಗಕ್ಷೇಮವನ್ನು ಒಪ್ಪಿಸಿಕೊಟ್ಟಿದ್ದರಂತೆ.

ಅಲ್ಲಿಂದ ಕೋಠಿಯ ಖೋಲಿಗೆ ಬಂದು ಅಡಿಗೆಯೇನು ಎಂದು ವಿಚಾರಿಸಿ, ಸಾಮಗ್ರಿ ಎಲ್ಲವೂ ಉಂಟೇ ಎಂದು ತಿಳಿದುಕೊಳ್ಳುವರು. ಹೀಗೆ ಎಲ್ಲ ಕಡೆಗೂ ಅವರ ಲಕ್ಷ್ಯ. ಸ್ವಂತದ ಲೇಖನ ಕಾರ್ಯ, ಪತ್ರವ್ಯವಹಾರ, ಪ್ರೂಫ್ ತಿದ್ದುವದು, ಜನರ ಭೆಟ್ಟಿ ಇವುಗಳ ಅವ್ಯಾಹತ ಕೆಲಸದಲ್ಲಿ ಬಿಡುವು ಸಿಕ್ಕಾಗ ಅಧ್ಯಾಪಕರ ಪ್ರವಚನವನ್ನು ತಾವೂ ತುಸುಹೊತ್ತು ಆಲಿಸುವರು. ನಡುನಡುವೆ ಪ್ರಶ್ನೆಗಳನ್ನು ಕೇಳಿ ತುಸು ಚರ್ಚೆ ಮಾಡಿದರೆಂದರೆ ಆ ಚರ್ಚೆಯ ಪ್ರಯೋಜನ ವಿದ್ಯಾರ್ಥಿಗಳಿಗೂ ಒದಗುತ್ತಿತ್ತು.

ಮಧ್ಯಾಹ್ನದ ಹಾಗೂ ಇತರ ಬಿಡುವಿನ ವೇಳೆಯಲ್ಲಿ ತಾವು ಬರೆಯುತ್ತಿದ್ದ ಕಾದಂಬರಿಯ ರಸವತ್ತಾದ ಭಾಗಗಳನ್ನು ವಿದ್ಯಾರ್ಥಿಗಳಿಗೆ ಆಗೀಗ ಓದಿ ಹೇಳುವರು. ವಿಶೇಷತಃ ವೀರಾವೇಶದ ಪ್ರಸಂಗಗಳನ್ನು ಉಬ್ಬುಬ್ಬಿ

ವರ್ಣಿಸಿದಾಗ, ಹುಡುಗರಲ್ಲಿ ಆವೇಶ ಉಕ್ಕಿ ಹರಿಯುತ್ತಿದ್ದಿತು. ತಮ್ಮ ಲೇಖನದ ಪರಿಣಾಮ ಈ ರೀತಿಯಾದಾಗ ವಿಶಾಲ ಕನ್ನಡ ವಾಚಕರ ಮೇಲಾಗಬಹುದಾದ ಪರಿಣಾಮವನ್ನು ಊಹಿಸಿ ಕೃತಾರ್ಥಭಾವವನ್ನು ತಾಳುತ್ತಿದ್ದರು.

ಪಾಠಶಾಲೆಯ ವಿದ್ಯಾರ್ಥಿಗಳು ತಮ್ಮ ವ್ಯಾಸಂಗನಿಷ್ಠೆಯಿಂದ ಗಳಗನಾಥರಿಗೆ ಶ್ರೇಯಸ್ಸನ್ನು ತಂದುಕೊಟ್ಟು ಸಂತೋಷಪಡಿಸಿದ್ದಿದೆ. ಶ್ರೀ ರಾಘವೇಂದ್ರಮಠದ ಸುಶೀಲೇಂದ್ರಯತಿಗಳು ಒಮ್ಮೆ ಹಾವೇರಿಗೆ ಆಗಮಿಸುವವರಿದ್ದರು. ಅವರ ಸ್ವಾಗತಕ್ಕಾಗಿ ಸಂಭ್ರಮದ ಸಿದ್ಧತೆಗಳು ನಡೆದಿದ್ದುವು. ಊರಿನ ಹಲವಾರು ರಸ್ತೆಗಳು ತಳಿರುತೋರಣಗಳಿಂದ ಅಲಂಕೃತವಾಗಿದ್ದುವು. ಪರ ಊರುಗಳಿಂದ ವಿದ್ವಾಂಸರು ಬಂದಿದ್ದರು. ಶ್ರೀಗಳವರು ನಗರ ಪ್ರವೇಶ ಮಾಡಿ ಮಂದಿರದಲ್ಲಿ ಕಾಲಿಟ್ಟಾಗ, ವೇದಘೋಷಕ್ಕೆ ಮೊದಲಾಯಿತು. ಒಂದೂ ತಪ್ಪಿಲ್ಲದೆ, ಸ್ಪಷ್ಟ ಉಚ್ಚಾರಣೆಯಿಂದ ವೇದಮಂತ್ರವನ್ನು ವಿದ್ಯಾರ್ಥಿಗಳು ಹೇಳುತ್ತಿದ್ದುದು, ಶ್ರೀಗಳವರಿಗೆ ಸಂತೋಷವನ್ನುಂಟುಮಾಡಿತು. 'ಇವರು ಯಾವ ಪಾಠಶಾಲೆಯವರು?' ಎಂದು ಅವರು ಕುತೂಹಲದಿಂದ ವಿಚಾರಿಸುತ್ತಿದ್ದಾಗ, ಹಿಂದಿದ್ದ ಗಳಗನಾಥರನ್ನು ಶ್ರೀಗಳವರ ಸಮ್ಮುಖದಲ್ಲಿ ನಿಲ್ಲಿಸಲಾಯಿತು. ಸುಪ್ರೀತರಾದ ಶ್ರೀ ಸುಶೀಲೇಂದ್ರರು ಪಾಠಶಾಲೆಯ ಬಗ್ಗೆ ಹೆಚ್ಚಿನ ವಿಚಾರ ತಿಳಿದುಕೊಂಡರು. ಅಲ್ಲಿ ಬಂದಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ಕೊಟ್ಟುದಲ್ಲದೆ, ಪಾಠಶಾಲೆಗೆ ಪ್ರತಿವರ್ಷ ನೂರು ರೂಪಾಯಿ ಕೊಡುವುದಾಗಿ ವಾಗ್ದಾನವಿತ್ತರು.

ಗಳಗನಾಥರ ಮನೆಯೆಂದರೆ ಅಕ್ಷರಶಃ ಅನ್ನಛತ್ರ! ಪಾಠಶಾಲೆಯ ಪರಿವಾರದ ಜೊತೆಗೆ ವಾರಾನ್ನದ ಹುಡುಗರೂ ಸಾಕಷ್ಟು ಜನರಿದ್ದರು. ರಸ್ತೆಯಲ್ಲಿ ಯಾರಾದರೂ ಗುರುತಿನವರು ಕಂಡರೆ "ನಮಸ್ಕಾರ. ಬರ್ರಿ ಹಂಗೇ ಹೊರಟಿರಲ್ಲ" ಎಂದು ಅವರನ್ನು ಮನೆಗೆ ಕರೆದೊಯ್ದು ಮಧ್ಯಾಹ್ನದ ಊಟಕ್ಕೆ ನಿಲ್ಲಿಸಿಕೊಂಡರೇ ಗಳಗನಾಥರಿಗೆ ತೃಪ್ತಿ. ಅತಿಥಿದೇವೋ ಭವ! "ದೇವರು ಯಾವ ರೂಪದಲ್ಲಿ ಬರುವನೊ ಹೇಳಲಾಗುವದಿಲ್ಲ!"

ಪಾಠಶಾಲೆಗೆ ಪೋಷಣೆಯನ್ನೀಯಬೇಕಾದ ಗ್ರಂಥೋದ್ಯಮಕ್ಕೆ ಅವರ ಹೆಚ್ಚಿನ ಸಮಯ ವಿನಿಯೋಗವಾಗಬೇಕಾದದ್ದು ನ್ಯಾಯವೇ. **ಗಳಗನಾಥ ಸುರಸ ಗ್ರಂಥಮಾಲೆ** ಎಂಬ ಹೆಸರಿನಿಂದ ಆರಂಭವಾದಿದ ಈ ಗ್ರಂಥಮಾಲೆಯಲ್ಲಿ ಇತರರು ಬರೆದ ಹಲವು ಗ್ರಂಥಗಳಿದ್ದುವು. 'ಚಂದ್ರಿಕೆ'ಯಲ್ಲಿ

ಬಿಡಿ ಲೇಖನ ರೂಪವಾಗಿದ್ದ ಕೃತಿಗಳನ್ನು ಮುಂದುವರೆಸಿ, ಇಲ್ಲಿವೇ ವಿಸ್ತರಿಸಿ ಈ ಗ್ರಂಥಮಾಲೆಯ ಪುಷ್ಪಗಳನ್ನಾಗಿ ಮಾಡಿದರು. ಪ್ರತಿಯೊಂದರ ಮುದ್ರಣ ೫ ಸಾವಿರ ಪ್ರತಿಗಳದ್ದು. ಅವೆಲ್ಲ ಸೇರಿ ಮೂವತ್ತಕ್ಕೆ ಮೇಲ್ಪಟ್ಟ ಕೃತಿಗಳನ್ನು ಹಾವೇರಿಯ ವಾಸ್ತವ್ಯದ ಒಂದು ವರ್ಷದಲ್ಲಿಯೆ ಮರಾಟಕ್ಕೆ ಅಣಿಗೊಳಿಸಿದುದು ಅವರ ಕಾರ್ಯಗತಿಯ ವೇಗವನ್ನು ನಿದರ್ಶಿಸುತ್ತದೆ.

ಅದೂ ತಮ್ಮದೆ ಆದ ಪ್ರೆಸ್ ಇಲ್ಲದಿರುವಾಗ! ಹೌದು, ಸುರುವಾತಿನ ೮-೧೦ ಪ್ರಕಟನೆಗಳನ್ನು ಅವರು ಧಾರವಾಡದ ಶ್ರೀ ಜಠಾರ ಅವರ ಕರ್ನಾಟಕ ಪ್ರಿಂಟಿಂಗ್ ವರ್ಕ್ಸನಲ್ಲಿ ಮುದ್ರಿಸಿದರು. ಗ್ರಂಥಗಳ ಹಾಗೂ ಅವುಗಳ ಪ್ರತಿಗಳ ಬಾಹುಳ್ಯವು ಸಾಕಷ್ಟು ಹಣವನ್ನು ತಂದಿತು. ಅದರಿಂದ ತಮ್ಮದೆ ಆದ ಪ್ರೆಸ್ಸನ್ನು ಬದಾಮಿ ನಾಯಕರ ಆವಾರದಲ್ಲಿ ಸ್ಥಾಪಿಸಿದರು.* ಅಲ್ಲಿಂದ ಅವರ ಹೊಸ ಬರವಣಿಗೆ, ಜೊತೆಗೆ ಹಳೆಯ ಕೃತಿಗಳ ಮುದ್ರಣ ಇವು ಭರದಿಂದ ಸಾಗಿದುವು.

ಇನ್ನು ಅವರ ಮೆಚ್ಚಿನ 'ಕುವರಿ' **ಸದ್ಬೋಧ ಚಂದ್ರಿಕೆಯು** ಆನಂದವನದಲ್ಲಿಯೆ ಉಳಿದಳಷ್ಟೆ. ಆಗ ಅನೇಕ ವಾಚಕರು ಪತ್ರ ಬರೆದು 'ಚಂದ್ರಿಕೆಯು ನಿಮ್ಮ ಕೈಬಿಟ್ಟು ಪರದೇಶಿಯಾದಳು, ಕಲಾಹೀನಳಾದಳು, ಆಕೆಯ ಗೌರವವು ನಷ್ಟವಾಯಿತು. ನಿಮ್ಮ ಚಂದ್ರಿಕೆಯೆಂದು ತಿಳಿದು ಚಂದಾದಾರರಾಗಿ ನಾವು ಮೋಸ ಹೋದೆವು" ಎಂದು ಹೇಳುತ್ತಿದ್ದರಂತೆ. ಆಗ ಗಳಗನಾಥರು 'ನಮ್ಮ ಪ್ರಿಯ ಚಂದ್ರಿಕೆಯು, ನಮ್ಮ ಗುರುಪುತ್ರಿ ಚಂದ್ರಿಕೆಯು ಸರ್ವಥಾ ಹೋಗಲಾರಳು. ಆಕೆಯೇ 'ಸುರಸ ಗ್ರಂಥ ಮಾಲೆ'ಯ ರೂಪದಿಂದ ಪ್ರಕಟಳಾಗಿರುವಳು' ಎಂದು ಸ್ಪಷ್ಟಪಡಿಸಿದರು.

ಹಾಗೆ ಹೇಳಿದ್ದರೂ ಮರುವರ್ಷ (೧೯೧೯) **ಸದ್ಗುರು** ಎಂಬ ಹೆಸರಿನಿಂದ ಹೊಸತೊಂದು ಪತ್ರಿಕೆಯನ್ನು ಆರಂಭಮಾಡಿದರು. ಹೀಗೆ ಆನಂದವನದಲ್ಲಿ ನಡೆಯುತ್ತಿದ್ದ ಅತಿಥಿಸೇವಾಕಾರ್ಯ, ಪಾಠಶಾಲೆ, ಪ್ರೆಸ್, ಪತ್ರಿಕೆ, ಗ್ರಂಥಲೇಖನ - ಎಲ್ಲವೂ ಒಂದೆರಡು ವರ್ಷಗಳಲ್ಲಿ ಸೃಷ್ಟಿಯಾದುವಲ್ಲದೆ,

---

* ಸುರುವಿಗೆ ಪ್ರೆಸ್ಸಿನಲ್ಲಿ ಕೆಲಸಕ್ಕಿದ್ದವರೆಂದರೆ ಶಿವರಾಮ ಕೋಟೇಶ್ವರ ಕುಲಕರ್ಣಿ, ಚಿಕ್ಕೋಡಿ ಮಲ್ಹಾರ ಜೋಶಿ ಮತ್ತು ವಿಲಿಯಂ ಲೂಯಿಸ್. ಕೊನೆಯವರು ಮುದ್ರಕರಾಗಿ ಉತ್ತಮ ಸೇವೆ ಸಲ್ಲಿಸಿದ್ದನ್ನು ಗಳಗನಾಥರು ತಮ್ಮ ಪ್ರಸ್ತಾವನೆಯಲ್ಲಿ ಆಗೀಗ ನೆನೆದಿದ್ದಾರೆ.

ಗಳಗನಾಥರ ಅದಮ್ಯ ಉತ್ಸಾಹ, ಪರಿಶ್ರಮಗಳಿಂದ ಊರ್ಜಿತಸ್ಥಿತಿಯನ್ನು ಹೊಂದಿದವು. ಅವರ ಗ್ರಂಥಗಳಿಗಾಗಿ ನಿತ್ಯವೂ ಅನೇಕ ಮನಿಆರ್ಡರ್‌ಗಳು ಬರುತ್ತಿದ್ದವು. ಪೋಸ್ಟಮನ್ ಬಂದನೆಂದರೆ ಇವರಲ್ಲಿ ತಾಸೆರಡು-ತಾಸು ಕಳೆಯಬೇಕು. ಇದರಲ್ಲಿ ಅವನ ಆತಿಥ್ಯ ಸತ್ಕಾರದ ಸಮಯವೂ ಸೇರಿತ್ತೆಂದು ಬೇರೆ ಹೇಳಬೇಕಿಲ್ಲ.

ಈ ಸೌಭಾಗ್ಯ ಸಾಧನೆಗೆಲ್ಲ ತಮ್ಮ ಗುರುಗಳೇ ಪ್ರೇರಕರೆಂಬುದನ್ನು ಗಳಗನಾಥರು ಸದೈವ ಧೇನಿಸುತ್ತಿದ್ದರು. ಅದು ಅವರೊಡನೆಯ ಸಂಭಾಷಣೆಯಲ್ಲಿ, ಗ್ರಂಥಗಳ ಪ್ರಸ್ತಾವನೆಯಲ್ಲಿ ವ್ಯಕ್ತವಾಗುತ್ತಿದ್ದಿತು. ಅವರ ಜಯಂತಿಯ ಆಚರಣೆ ಏಳು ದಿನಗಳವರೆಗೆ ನಡೆಯುತ್ತಿದ್ದಿತು! ಆ ದಿನ ಹಾವೇರಿಯ ಊರಿಗೇ ಔತಣ. ಆ ಸಪ್ತಾಹ ಕಾಲದಲ್ಲಿ ಅನ್ಯರ ಮುಂಜಿ, ಮದುವೆ, ಉಪನ್ಯಾಸ ಕೀರ್ತನೆಗಳೂ ನಡೆಯುತ್ತಿದ್ದವು. ಆನಂದವನಕ್ಕಿಂತಲೂ ಹೆಚ್ಚು ವಿಜೃಂಭಣೆಯಿಂದ ಈ ಉತ್ಸವವನ್ನು ನಡೆಸಬೇಕೆಂಬ ಹಟದ ಹಂಬಲ ಅವರದು.

ಇದಕ್ಕೆಲ್ಲ ಬೆನ್ನೆಲುಬಾಗಿ ನಿಂತುದು ಅವರ ಲೆಕ್ಕಣಿಕೆ. 'ವೃದ್ಧಾಪ್ಯದ ಪಾವಟಿಗೆಗಳನ್ನು ಹತ್ತತೊಡಗಿರುವ ನಮಗೆ ಲೇಖನ-ವ್ಯವಸಾಯವು ಊರು ಗೋಲಿನಂತೆ ಆಧಾರವಾಗಿರುವದು. ಆ ಊರುಗೋಲಿಲ್ಲದೇ ನಮ್ಮ ಆಯುರ್ಮರ್ಯಾದಾಕ್ರಮಣವು ನಿರಾತಂಕವಾಗಿ ಸಾಗದು. ಈ ಪರಿಕ್ರಮಣದಲ್ಲಿ ಕನ್ನಡಿಗರಿಂದ ಪ್ರಾಪ್ತವಾಗುವ ಪ್ರತಿಫಲರೂಪ ಧನವನ್ನು ನಮ್ಮ ಶ್ರೀ ಗುರುವಿನ ಪಾಠಶಾಲೆಗೆ ವಿನಿಯೋಗಿಸಿ ಯಥಾಶಕ್ತಿ ಗುರುಸೇವೆಯನ್ನು ಮಾಡುವುದು ನಮ್ಮ ಕೃತಸಂಕಲ್ಪವಾಗಿರುತ್ತದೆ. ಪ್ರಿಯ ಕನ್ನಡಿಗರೇ, ನಾವು ನಮ್ಮ ಕೆಲಸಬೊಗಸೆಗಳನ್ನೆಲ್ಲ ಬಿಟ್ಟು ನಿಮ್ಮ ಸೇವೆಗಾಗಿಯೇ ನಿಂತಿರುತ್ತೇವೆ ಮತ್ತು ಹನ್ನೊಂದು ವರ್ಷ ನಿಮ್ಮನ್ನು ಸೇವಿಸಿ ನಿಮ್ಮ ಅಭಿರುಚಿಯ ಪರಿಜ್ಞಾನವನ್ನೂ ನಿಮ್ಮ ಕೊಡುಗೈಯ ಪ್ರಭಾವವನ್ನೂ ಅರಿತುಕೊಂಡಿರುತ್ತೇವೆ. ನೀವಾದರೂ ನಮ್ಮ ಲೇಖಗಳ ಪಡಿಕಟ್ಟನ್ನು ಅರಿತಿರುತ್ತೀರಿ. ಇನ್ನು ಮೇಲೆ ನಮ್ಮ ನಿಮ್ಮ ಪ್ರೀತಿ-ವಿಶ್ವಾಸಗಳಿಂದ ಕನ್ನಡದ ವಿವಿಧ ಗ್ರಂಥಗಳು ಹೊರಬೀಳುವದು ಹಿತಕರವಲ್ಲವೆ?' ಎಂಬುದಾಗಿ ಆರಂಭ ಪ್ರಕಟನೆಯೊಂದರಲ್ಲಿ ನಿವೇದಿಸಿದ್ದಾರೆ.

ವಿವಿಧ ವಿಷಯಗಳ ಮೇಲಿನ ಕೃತಿರಚನೆಗೆ ಅವರು ಈಗಾಗಲೇ ಪ್ರವೃತ್ತರಾಗಿದ್ದರು. ಸದ್ಬೋಧ ಚಂದ್ರಿಕೆಯಲ್ಲಿ 'ಗೃಹಶಿಕ್ಷಣ' 'ದುಡ್ಡು' ಮೊದಲಾದ ವಿಷಯಗಳ ಮೇಲೆ ಸ್ಫುಟ ಲೇಖನಗಳನ್ನು ಬರೆದಿದ್ದರು. ಅವನ್ನು ವಿಸ್ತರಿಸಿದರಲ್ಲದೇ 'ಕಲಿತಾಂಡವ,' 'ನಮ್ಮ ದೇವರ ಪೂಜೆ' 'ವೈದಿಕ ಶಿಕ್ಷಣ' 'ಮಾನವ ಸರ್ವಸ್ವ' 'ಧರ್ಮದ ತಾತ್ವಿಕ ಹಿನ್ನೆಲೆ' ಇವುಗಳನ್ನು ಕುರಿತು ಪ್ರಬಂಧಗಳನ್ನು ಬರೆಯತೊಡಗಿದರು. 'ಮಾನವ ಸರ್ವಸ್ವ'ದಲ್ಲಿ ನಿಜವಾಗಿ ಇದ್ದದ್ದು ಬ್ರಾಹ್ಮಣ-ಬ್ರಾಹ್ಮಣೇತರ ಸಂಬಂಧ. ಈ ವಿಷಯದಲ್ಲಿ ಸಾಮಾನ್ಯ ಜನತೆಯ ಅಜ್ಞಾನವನ್ನು ದೂರಮಾಡಿ ಸತ್ಯಸ್ವರೂಪವನ್ನು ವಿವರಿಸುವುದು ಆ ಲೇಖದ ಉದ್ದೇಶ. ಇವು ಒಂದೊಂದು ಪ್ರಬಂಧಗಳು ತಕ್ಕಮಟ್ಟಿಗೆ ಸುದೀರ್ಘವಾದವುಗಳೇ. ಇಂಥ ಲೇಖನಗಳನ್ನೊಳಗೊಂಡ **ಸುಂದರಲೇಖ ಸಮುಚ್ಚಯವು** ಹೊರಬಂದಿತು. 'ಮನಸ್ಸಿದ್ದರೂ ಹೆಚ್ಚಿನ ದೊಡ್ಡ ಲೇಖಗಳನ್ನು ಬರೆಯಲಿಕ್ಕೆ ನನಗೆ ಆಸ್ಪದವು ದೊರೆಯಲಿಲ್ಲ' ಎಂದು ಗಳಗನಾಥರು ಮಿಡುಕಿದ್ದಾರೆ.

ಜೊತೆಗೆ ಸ್ತ್ರೀಯರ ಹಾಗೂ ಕುಟುಂಬದ ಕುರಿತು ಅವರು ಸಾಕಷ್ಟು ಯೋಜನೆ ಮಾಡಿದುದನ್ನು 'ದಾಂಪತ್ಯ' 'ಕುಟುಂಬ' ಪುಸ್ತಕಗಳ ಮೂಲಕ ಕಂಡುಕೊಂಡಿದ್ದೇವೆ. ಆ ಕಾರ್ಯ ಮುಂದುವರಿಯಿತು. 'ನಮ್ಮ ಕನ್ನಡದಲ್ಲಿ ಎಲ್ಲ ಬಗೆಯ ಪುಸ್ತಕಗಳಿಗೆ ಕೊರತೆಯಿರುವಾಗ ಸ್ತ್ರೀಯರ ವಾಚನಕ್ಕೆ ತಕ್ಕ ಪುಸ್ತಕಗಳ ಕೊರತೆಯಿರುವದೆಂದು ಬರೆಯುವದು ಅಪ್ರಾಸಂಗಿಕವೇ ಸರಿ. ಈ ಕೊರತೆಯನ್ನು ಅಂಶತಃ ದೂರಮಾಡುವ ಉದ್ದೇಶದಿಂದ ನಾವು ಈ ಪುಸ್ತಕವನ್ನು ಬಹು ಆಸ್ಥೆಯಿಂದ ಬರೆದಿರುವೆವು' ಎಂದು **ಭಗವತೀ ಕಾತ್ಯಾಯಿನಿಯ** ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.* ಇವರ ರಚನೆಯಲ್ಲಿ ಸಾಂಬದೀಕ್ಷಿತ ಕಾಶೀಕರರ "ಯಾಜ್ಞವಲ್ಕ್ಯ ಚರಿತ್ರೆ" ಮತ್ತು ಮರಾಠಿಯಲ್ಲಿಯ "ಮೈತ್ರೇಯಿ" ಎಂಬ ಪುಸ್ತಕಗಳು ಸಾಕಷ್ಟು ಆಸರೆಯನ್ನೊದಗಿಸಿದ್ದರೂ, ಕಾತ್ಯಾಯನಿ - ಮೈತ್ರೇಯಿ, ಯಾಜ್ಞವಲ್ಕ-ಕಾತ್ಯಾಯನಿ ಇವರ ನಡುವಿನ ಗೃಹಧರ್ಮಸೂತ್ರರೂಪವಾದ ಸಂಭಾಷಣೆಗಳು ಗಳಗನಾಥರವೇ. ಅದರಲ್ಲಿಯೂ ವರಪ್ರದಾನವೆಂಬ ನಾಲ್ಕನೇ ಪ್ರಕರಣವು ಶ್ರೀ ಸದ್ಗುರುವಿನ

---

* ಇದೇ ಮುಂದೆ ಸದ್ಗುಣ ಸಂಭ್ರಮ ಎಂಬುದಾಗಿ ಪುನರ್ಮುದ್ರಣ ವಾಯಿತು.

ಪ್ರೇರಣೆಯಿಂದ ಬರೆಯಲ್ಪಟ್ಟಿತು - ಎಂದಿದ್ದಾರೆ. ಅದರಲ್ಲಿ ಕಾತ್ಯಾಯನಿಯು ತನ್ನ ಪತಿಯನ್ನು ಕುರಿತು, ಮೈತ್ರೇಯಿಯನ್ನ ಹೆಂಡತಿಯಾಗಿ ಸ್ವೀಕರಿಸಬೇಕೆಂಬ ಕೇಳಿಕೆ ಇದೆ. ಕಾತ್ಯಾಯನಿಯು ಸಂಸಾರಾಸಕ್ತಳು ಮತ್ತು ಪತಿಭಕ್ತಿ ಪರಾಯಣೆ. ಆದರೂ ಉದಾರಚರಿತಳು ಮತ್ತು ಧರ್ಮಪರಾಯಣೆಯೆಂದು ಚಿತ್ರಿತಳಾಗಿದ್ದಾಳೆ. ಇಂಥ 'ಶ್ರೀ ಭಗವತೀ ಕಾತ್ಯಾಯನಿ'ಯನ್ನು ಅನುಕರಿಸುವಂಥ ಮಾತೃಭಗಿನೀ ವರ್ಗವು ಕನ್ನಡದಲ್ಲಿ ಹೆಚ್ಚಲೆಂತಲೂ, ತಮ್ಮ ಚಿರಂಜೀವಿಗಳಾದ ಸೌಭಾಗ್ಯ ಕಾಂಕ್ಷಿಣಿಯರು ಸುಬ್ಬಕ್ಕ, ರೇಣಕ್ಕ ಇವರು ಸದ್ಗುಣಿಗಳಾಗುವಂತೆ ಅನುಗ್ರಹಿಸಬೇಕೆಂತಲೂ ಗಳಗನಾಥರು ಆಶಿಸಿದ್ದರು.

ತಮ್ಮ ಈ ಸಂತಾನದ್ವಯದ ಬಗ್ಗೆ ಗಳಗನಾಥರಿಗೆ ಸಹಜವಾಗಿಯೇ ಅತಿ ವಾತ್ಸಲ್ಯ. ಸನಾತನ ಪದ್ಧತಿಯ ಪ್ರಕಾರ ಬೇಗ ಅವರನ್ನು ಮದುವೆ ಮಾಡಿಕೊಡಬೇಕಲ್ಲವೆ. ಈ ವೇಳೆಗೆ ಗಳಗನಾಥರಿಗೆ ಗುರ್ಲ ಹೊಸೂರಿನ ಶ್ರೀ ಚಿದಂಬರ ದೀಕ್ಷಿತರಿಂದ ಸ್ವಪ್ನದಲ್ಲಿ ದೃಷ್ಟಾಂತವಾಯಿತು. ಸರಿ, ಅವರ ಮನೆತನದವರೇ ಆದ ಶ್ರೀ ಮಲ್ಲಾರಿ ದೀಕ್ಷಿತ ಕಕ್ಕನವರಿಗೆ ಸುಬ್ಬಕ್ಕನನ್ನು ಧಾರೆ ಎರೆದುಕೊಟ್ಟರು. ಸಾಲಂಕೃತ ಕನ್ಯಾದಾನವದು. ಆಗಿನ ಕಾಲಕ್ಕೆ ೫ ಸಾವಿರ ರೂಪಾಯಿ ಖರ್ಚುಮಾಡಿ ವಿಜೃಂಭಣೆಯಿಂದ ಮದುವೆಯನ್ನು ನೆರವೇರಿಸಿದರು. ಮಗಳನ್ನು ಬಿಟ್ಟಿರಲಾರದ ಗಳಗನಾಥರು, ದೀಕ್ಷಿತರನ್ನು ಮನೆಯಳಿಯನನ್ನಾಗಿ ಮಾಡಿಕೊಂಡರೆನ್ನಬಹುದು. ಮಲ್ಲಾರಿ ದೀಕ್ಷಿತರು ಸಂಸ್ಕೃತವನ್ನು ಓದಿಕೊಂಡು ಶಾಸ್ತ್ರಾಭ್ಯಾಸ ಮಾಡಿದವರು. ಗಳಗನಾಥರ ಗ್ರಂಥೋದ್ಯಮದಲ್ಲಿ ಸಾಕಷ್ಟು ನೆರವಾಗಿದ್ದಾರೆ. ತಾವು ವ್ಯವಸಾಯೀ ಚಿತ್ರಕಾರರಲ್ಲದಿದ್ದರೂ ಆ ಕೆಲಸ ಮಾಡಿದ್ದಾರೆ.

ಸುಬ್ಬಕ್ಕನ ವೈವಾಹಿಕ ಜೀವನ ಸುಖಮಯವಾಗಬೇಕು, ಆದರ್ಶಯುತವಾಗಬೇಕು - ಎಂಬ ಉತ್ಕಟತೆಯಿಂದ ಸದ್ಗುರು ಪತ್ರಿಕೆಯಲ್ಲಿ ಮಗಳನ್ನು ಸಂಬೋಧಿಸಿ **ಕನ್ಯಾ ಶಿಕ್ಷಕ**ವೆಂಬ ಲೇಖನಮಾಲೆಯನ್ನೇ ಆರಂಭಿಸಿದರು. ಲೇಖಕರಿಗೆ ತಮ್ಮವರ ಹೊರತಾಗಿ ಬೇರೆ ಉದಾಹರಣೆ ಸಿಗಲಿಲ್ಲವೇ - ಎಂಬುದಾಗಿ ವಾಚಕರ ಪತ್ರಗಳು ಬಂದುವಂತೆ. ಆದರೂ ಇದೊಂದು ಹೊಸ ಉಪಕ್ರಮವೆಂಬುದನ್ನು ಗಮನಿಸಬೇಕು.

ಮುಂದೆ ಕೆಲಕಾಲದ ಮೇಲೆ ಎರಡನೆಯ ಮಗಳು ರೇಣಕ್ಕನ ಮದುವೆಯು ಸಂಬಂಧಿಕರಾದ ಶಂಕರಪ್ಪ ಜೋಶಿ ಇವರೊಡನೆ ಅದೇ ರೀತಿಯಲ್ಲಿ ನೆರವೇರಿತು. ಅವರು ಕೂಡ ಮನೆಯಳಿಯ ಆಗಿ ಗಳಗನಾಥರ ಕಾರ್ಯದಲ್ಲಿ, ವಿಶೇಷತಃ ಮುದ್ರಣ, ಗ್ರಂಥ ಪ್ರಸರಣಕಾರ್ಯದಲ್ಲಿ ನೆರವಾದರು. ಸಾಂಸಾರಿಕ ಜೀವನದಲ್ಲಿ ಗಳಗನಾಥರು ನಿಜಕ್ಕೂ ಸುಖಿ. ಅನುಕೂಲೆಯಾದ ಹೆಂಡತಿ, ಪ್ರೀತಿವಾತ್ಸಲ್ಯವನ್ನು ತೋರುವ ಮಕ್ಕಳು, ಗ್ರಂಥೋದ್ಯಮದಲ್ಲಿ ನೆರವಾಗುವ ಅಳಿಯಂದಿರು, ತಮ್ಮ ಶಿಸ್ತಿನ ಹಾಗೂ ಸದಾಚಾರದ ವಿಚಾರಗಳಿಗೆ ಹೊಂದಿಕೊಂಡು ಹೋಗುವ ಸಂಬಂಧಿಕ - ಹುಡುಗರು ಇದೆಲ್ಲ ಆನುಕೂಲ್ಯವಿದ್ದುದು ತಮಗೆ ವಿಶೇಷ ಬಲ ತಂದುಕೊಟ್ಟಿತೆಂದು ಅವರು ತಮ್ಮ ಷಷ್ಟ್ಯಬ್ದಿಯ ಕಾಲಕ್ಕೆ ಒಪ್ಪಿಕೊಂಡಿದ್ದಾರೆ. ಮಹಾಭಾರತ ಆದಿಪರ್ವದ ಪೀಠಿಕೆಯಲ್ಲೂ ನೆನದಿದ್ದಾರೆ. ಈ ಅನುಕೂಲತೆ ಎಷ್ಟರಮಟ್ಟಿಗೆ ಎಂದರೆ, ಮನೆಯಲ್ಲಿದ್ದ ಜನವೆಲ್ಲ ಕಂಪೋಸಿಂಗ್, ಮೊಳೆಗಳ ಡಿಸ್ಟ್ರಿಬ್ಯೂಷನ್, ಸ್ಟಿಚಿಂಗ್, ಫಾರ್ಮ್ ಜೋಡಿಸುವದು, ಇವೆಲ್ಲ ಕೆಲಸವನ್ನು ಕಲಿತಿದ್ದರು. ಅಡುಗೆಯ ಸೌಟನ್ನು ಹಿಡಿದ ಕೈ ಅಚ್ಚಿನ ಮೊಳೆಗಳನ್ನೂ ಜೋಡಿಸುತ್ತಿತ್ತು.

ಈ ಅವಧಿಯ ಮಹತ್ವದ ಬರವಣಿಗೆಯೆಂದರೆ ಕಾದಂಬರಿ ತಾನೇ. ಹಣವನ್ನು ಒದಗಿಸಿಕೊಡುವುದಕ್ಕಾಗಿ ನನ್ನನ್ನು ಕಾದಂಬರಿಗಳಿಗೆ ಮಾರಬೇಕಾಯಿತು, ಎಂದು ಅವರೇ ಒಪ್ಪಿಬಿಟ್ಟಿದ್ದಾರೆ! ಮೊದಲು ಅವರು ಎತ್ತಿಕೊಂಡದ್ದು ಮರಾಠರ ಕಥಾನಕಗಳನ್ನು. ಹಿಂದಿನ ಎರಡು ಮರಾಠೀ ಕಾದಂಬರಿಗಳಾದ 'ಈಶ್ವರೀ ಸೂತ್ರ' ಹಾಗೂ 'ಕಮಲಕುಮಾರಿ' - ಇವುಗಳಲ್ಲಿ ಶಿವಾಜಿಯು ತೋರಣಗಡವನ್ನೂ ತಾನಾಜಿಯು ಕೊಂಡಾಣಾ ಕೋಟೆಯನ್ನೂ ವಶಪಡಿಸಿಕೊಂಡ ಕಥೆ ಬಂದಿದೆಯಷ್ಟೆ. ೧೯೧೮ರಲ್ಲಿ ಬರೆಯಲಾದ **ಮರಾಟರ ಅಭ್ಯುದಯ**ದಲ್ಲಿ ಶಿವಾಜಿಯು ಅಫಝುಲಖಾನನ ವಧೆ ಮಾಡಿದ ಮುಖ್ಯ ಪ್ರಸಂಗವಿದೆ. ಜೊತೆಗೆ ಶಿವಾಜಿಯನ್ನೇ ಕೊಲೆಮಾಡಬಯಸಿದ ತಾರೆ ಎಂಬ ಹೆಣ್ಣುಮಗಳೊಬ್ಬಳ ಕಥಾನಕವಿದೆ. ಮುಂದೆ ಶಿವಾಜಿಯನ್ನು ಬಗ್ಗುಬಡಿಯಲು ಔರಂಗಜೇಬನು ದಿಲೇರಖಾನ್ ಮತ್ತು ಜಯಸಿಂಗರನ್ನು ಕೊಟ್ಟು ಕಳಿಸಿದಾಗ, ಶಿವಾಜಿಯು ತನ್ನ ಪ್ರಮುಖ ದುರ್ಗಗಳನ್ನೆಲ್ಲ ಕಳೆದುಕೊಂಡು ದಿಲ್ಲಿಗೆ ಹೋದುದೂ ಅಲ್ಲಿ ಸ್ಥಾನಬದ್ಧತೆಯಲ್ಲಿದ್ದಾಗ ಪಾರಾಗಿ ಬಂದು ಪುನಃ ಎಲ್ಲ

ಕೋಟೆಗಳನ್ನು ಮರಳಿ ಪಡೆದು ಪಟ್ಟಾಭಿಷಿಕ್ತನಾದ ಸುರಮ್ಯ ಕಥೆಯೂ 'ಛತ್ರಪತಿ'ಯಲ್ಲಿ ನಿರೂಪಿತವಾಗಿದೆ (೧೯೧೯).

ಈ ಕಾದಂಬರಿಯನ್ನು ಬರೆದು ಮುಗಿಸುವಾಗ ಗಳಗನಾಥರಿಗೆ ದುಃಖದ ವಾರ್ತೆಯೊಂದು ಕಾದಿತ್ತು. ಅದುವೆ ಹರಿನಾರಾಯಣ ಆಪ್ಟೆಯವರ ಮರಣ. 'ಛತ್ರಪತಿ' ಮತ್ತು ಅದಕ್ಕೂ ಹಿಂದಿನ ಹಲವಾರು ಕಾದಂಬರಿಗಳಿಗೆ ಅವರೇ ಗಳಗನಾಥರಿಗೆ ಸಾಮಗ್ರಿಯನ್ನು ಒದಗಿಸಿದ್ದರಲ್ಲವೆ. "ಪ್ರತ್ಯಕ್ಷವಾಗಿ ನಮ್ಮ ಮೇಲೆಯೂ ಅಪ್ರತ್ಯಕ್ಷವಾಗಿ ಕನ್ನಡಿಗರ ಮೇಲೆಯೂ ಆಪ್ಟೆಯವರ ಮಹದರ್ಶನ ಮಾಡಿಕೊಂಡು ನಮ್ಮ ಕೃತಜ್ಞತೆ ಪ್ರಕಟಿಸುವ ಸುಯೋಗ ಒದಗದ್ದಕ್ಕಾಗಿ ನಮಗೆ ಪರಮಾವಧಿ ವ್ಯಸನವಾಗಿದೆ. ಅವರ ದರ್ಶನಕ್ಕೆ ಹೋಗಬೇಕೆನ್ನುವಷ್ಟರಲ್ಲಿ ಬೆಳಗಾಗಿ ಹೋಯಿತು!" ಎಂದು ಗಳಗನಾಥರು ಮಿಡುಕಿದ್ದಾರೆ.

ಮುಂದಿನ ಮೂರು ಕಾದಂಬರಿಗಳು ಶಿವಾಜಿಯ ಮರಣಕಾಲದ ಹಾಗೂ ಮರಣಾನಂತರದ ಕಥಾಪ್ರಸಂಗಗಳಾಗಿವೆ. **ಗೃಹಕಲಹ**ದಲ್ಲಿ (೧೯೨೧) ಶಿವಾಜಿಯು ಬದುಕಿದ್ದಾಗಲೇ ಅವನ ಉತ್ತರಾಧಿಕಾರಿ ಯಾರೆಂಬುದರ ಬಗ್ಗೆ ಒಳಜಗಳ ನಡೆದದ್ದರ ಚಿತ್ರಣ ಬಂದಿದೆ. ಇದಕ್ಕೆ ಲ.ನಾ. ಜೋಶಿ ಅವರ 'ಅಸ್ತೋದಯ' ಕಾದಂಬರಿಯು ಮೂಲಸಾಮಗ್ರಿಯನ್ನು ಒದಗಿಸಿದೆ. ಇದು ಮೂಲ ಕಾದಂಬರಿಯ ಭಾಷಾಂತರವಾಗಲೀ ರೂಪಾಂತರವಾಗಲೀ ಇರುವದಿಲ್ಲ. ಕಾದಂಬರಿಯು ಹೆಚ್ಚು ಬೋಧಪ್ರದವೂ ಮನೋರಂಜಕವೂ ಆಗುವುದಕ್ಕಾಗಿ 'ವಾಡಿಕೆಯ ಪದ್ಧತಿಯಂತೆ' ಕುಗ್ಗಿಸುವಲ್ಲಿ ಕುಗ್ಗಿಸಿ, ಹಿಗ್ಗಿಸುವಲ್ಲಿ ಹಿಗ್ಗಿಸಿ, ಹೊಸ ವಿಷಯ ಸೇರಿಸತಕ್ಕಲ್ಲಿ ಹೊಸ ವಿಷಯ ಸೇರಿಸಿ, ಹೊಸ ಪಾಕವನ್ನು ಸಿದ್ಧಮಾಡಿದ್ದಾರೆ.

ಇದನ್ನು ಬರೆಯುವುದಕ್ಕೆ ಒಂದೇ ತಿಂಗಳು ಹಿಡಿಯಿತಂತೆ. ಚಂದಾದಾರರಿಗೆ ಗ್ರಂಥವನ್ನು ಬೇಗ ಒದಗಿಸಬೇಕೆಂಬ ಒತ್ತಡವಲ್ಲದೆ ಇನ್ನೊಂದು ಪ್ರಚೋದನೆ ಈ ಕಾದಂಬರಿಯ ಬರವಣಿಗೆಯನ್ನು ದ್ರುತಗೊಳಿಸಿತು. ಅದುವೆ 'ಪ್ರಿಯ ಕನ್ನಡಿಗರೊಳಗಿನ ಕ್ಷುದ್ರಕಲಹವು ಕಡಿಮೆಯಾಗಿ ಒಕ್ಕಟ್ಟು ಬೆಳೆಯಲೆಂಬ' ಉದ್ದೇಶ.

ಈ ಕಾದಂಬರಿಯ ಕಟ್ಟಕಡೆಗೆ ನಾವು ಕೊಟ್ಟಿರುವ ಉಪಸಂಹಾರದ ೧೯ನೇ ಚಿಕ್ಕ ಪ್ರಕರಣದಿಂದ ಜನ್ಮಭೂಮಿಯೂ ಒಂದು ಗ್ರಹವೆಂದು

ಗೊತ್ತಾಗಬಹುದು. ಆದ್ದರಿಂದ ಜನ್ಮಭೂಮಿಯ ಸಂಬಂಧದಿಂದ ದೇಶಬಾಂಧವರೆನಿಸಿಕೊಳ್ಳುವ ನಮ್ಮಲ್ಲಿ ಕಲಹವಿರುವುದು ಸರ್ವಥಾ ಹಿತವಲ್ಲ - ಆದ್ದರಿಂದ ನಾವು ಬ್ರಾಹ್ಮಣ-ಬ್ರಾಹ್ಮಣೇತರರೆಂದು ಶುಷ್ಕ ಪಂಗಡ ಮಾಡಿಕೊಂಡು, ಪರಸ್ಪರ ಕಲಹ ಬೆಳೆಸಿ ಆತ್ಮಘಾತದ ಹಾದಿಯನ್ನು ಹಿಡಿಯಬಾರದೆಂದು ನಾವು ಇಲ್ಲಿಯೂ ಹೇಳಿಕೊಳ್ಳುವೆವು. ನಮ್ಮಲ್ಲಿಯ ತಪ್ಪುಗಳನ್ನು ತಿದ್ದಲಿಕ್ಕೆ ಮಂದಿಯೇಕೆ? ನಾವೇ ನಮ್ಮನಮ್ಮೊಳಗೆ ಕಿವಿ-ಹಿಂಡಿ ತಿದ್ದಿಕೊಂಡರಾಯಿತು.

ಬ್ರಾಹ್ಮಣ-ಬ್ರಾಹ್ಮಣೇತರ ಕಲಹದ ಅದಾವ ಘಟನೆಯು ಅವರ ಮನಸ್ಸನ್ನು ಕಲಕಿತ್ತೆಂಬುದು ಸ್ಪಷ್ಟವಿಲ್ಲ. ಆವರೆ ಸಣ್ಣ ಪ್ರಮಾಣದಲ್ಲಿ ಎಲ್ಲೆಡೆಗೂ ಹಬ್ಬಿದ್ದ ಅಂಥ ವಾತಾವರಣವನ್ನು ಕಂಡು ಗಳಗನಾಥರು ಬೇಸರಗೊಂಡು, ಈ ನಿಮಿತ್ತದಿಂದ ಕನ್ನಡಿಗರಿಗೆ ಎಚ್ಚರ ನೀಡಿದ್ದಾರೆ.

'ಗೃಹಕಲಹ'ದಲ್ಲಿ ಬಂದಿದ್ದ ಸಂಭಾಜಿಯ ಕಥೆಯು **ಶಿವಪ್ರಭುವಿನ ಪುಣ್ಯ** ಕಾದಂಬರಿಯಲ್ಲಿ (೧೯೧೮) ಮುಂದುವರಿದಿದೆ. ಔರಂಗಜೇಬನು ಅವನನ್ನು ಕ್ರೂರತನದಿಂದ ಕೊಲ್ಲಿಸಿದಾಗ ಅವನ ಹೆಂಡತಿ ಏಸೂಬಾಯಿಯು, ತನ್ನ ಮಗುವಿಗೆ ಪಟ್ಟವಾಗಬೇಕೆನ್ನದೆ ಮೈದುನ ರಾಜಾರಾಮನನ್ನು ಪಟ್ಟಕ್ಕೆ ಕೂಡ್ರಿಸುವಲ್ಲಿ ನೆರವಾಗುತ್ತಾಳೆ. ಔರಂಗಜೇಬನು ಮರಾಠಾ ರಾಜ್ಯವೃಕ್ಷವನ್ನು ನಿರ್ಮೂಲವಮಾಡಬೇಕೆಂದು ಅದೆಷ್ಟು ಸಾಹಸಪಟ್ಟರೂ ಶಿವಾಜಿಯ ಪುಣ್ಯ ಅದನ್ನು ರಕ್ಷಿಸಿತು.

ಇದೇ ಅವಧಿಯಲ್ಲಿ (೧೯೧೯) ಬರೆದ **ಕುರುಕ್ಷೇತ್ರವು** ಶಿವಾಜಿಯ ಕಾಲ ಮುಗಿದು ಸುಮಾರು ೫೦ ವರ್ಷಗಳ ಅನಂತರದ ಕಥೆಯಾಗಿದೆ. ದಿಲ್ಲಿಯನ್ನೇ ಗೆದ್ದ ಪೇಶ್ವೆಯವರು ಅತಿ ಗರ್ವದಿಂದ ಮೆರೆದ ಫಲವಾಗಿ, ಪಾಣಿಪತ್ ಯುದ್ಧದಲ್ಲಿ ಅದೆಂತು ಮಣ್ಣುಗೂಡಿದರೆಂಬ ರಸಪೂರ್ಣ ಚಿತ್ರಣ ಇಲ್ಲಿ ಕಂಡುಬರುತ್ತದೆ. ರಾಜಕೀಯ ತಂತ್ರದ ಹಿನ್ನೆಲೆಯಲ್ಲಿ ಯುದ್ಧದ ವರ್ಣನೆ ಸುರಮ್ಯವಾಗಿ ಬಂದಿದೆ. ಇದರ ಮೂಲಕೃತಿಯೆಂದರೆ ನಾ.ವಿ. ಬಾಪಟರ 'ಪಾಣಿಪತಚಿ ಮೋಹಿಮ' ಕಾದಂಬರಿ. ಇಲ್ಲಿ ಅತಿಗರ್ವವು ನಾಶಕರವೆಂಬ ಪ್ರಪತ್ತಿ ಇದೆ. ಅತಿ ಗರ್ವದಿಂದಲೇ ರಾವಣನೂ, ಈ ಕಾದಂಬರಿಯ ಭಾವೂ ಸಾಹೇಬನೂ ಹಾಳಾದರು. ಅದರಂತೆ ಪ್ರಥಮ ಮಹಾಯುದ್ಧದ ಪ್ರವರ್ತಕನಾದ ಜರ್ಮನಿಯ ಕೈಸರನೂ ಈ ಕಾರಣದಿಂದಲೇ

ಹಾಳಾದ - ಎಂಬ ಮಾತನ್ನು ಗಳಗನಾಥರು ಜನತೆಗೆ ಜ್ಞಾಪಿಸಿಕೊಟ್ಟಿದ್ದಾರೆ. ಈ ಕೃತಿಯೂ ಗಳಗನಾಥರ ಜನಪ್ರಿಯತೆಯನ್ನು ಹೆಚ್ಚಿಸುವುದಕ್ಕೆ ಕಾರಣವಾಯಿತು.

ಹೀಗೆ ಒಂದಾದ ಮೇಲೊಂದು ಮರಾಠೀ ಕಾದಂಬರಿಗಳನ್ನು ಕೊಡಬೇಕಾಗಿ ಬಂದ ಅನಿವಾರ್ಯ ಪರಿಸ್ಥಿತಿ ಗಳಗನಾಥರಿಗೆ ಕಿಂಚಿತ್ ಅಸಮಾಧಾನವನ್ನುಂಟುಮಾಡಿತು. ಕನ್ನಡಿಗರಲ್ಲಿ ಧೀರರೂ ಶೂರರೂ ಉದಾರ ಚರಿತರೂ ಇಲ್ಲವೇನು? ಎಂದು ಅವರು ತಮ್ಮನ್ನೇ ಕೇಳಿಕೊಳ್ಳುತ್ತಿದ್ದರು. ಈ ಅನುವಾದಗಳನ್ನು ಬಿಟ್ಟುಕೊಟ್ಟು ಕನ್ನಡಿಗರ ಶೌರ್ಯದ ಬಗ್ಗೆ ಬರೆಯಬೇಕೆಂಬ ಹಂಬಲವನ್ನು ಹಾವೇರಿಗೆ ಬಂದ ಹೊಸತರಲ್ಲಿಯೇ ವ್ಯಕ್ತಪಡಿಸಿದ್ದರು.

"ಕನ್ನಡಿಗರ ಅಭಿಮಾನವನ್ನು ಹೆಚ್ಚಿಸುವಂಥ ಕನ್ನಡ ವೀರರ ಕಾದಂಬರಿಗಳು, ಕನ್ನಡ ಸತ್ಪುರುಷರ ಚರಿತ್ರಗಳು, ಕನ್ನಡ ತತ್ವಶಾಸ್ತ್ರಜ್ಞರ ಕನ್ನಡ ವೃತ್ತಾಂತಗಳು, ಕನ್ನಡ ಶಾಸ್ತ್ರಜ್ಞರ ಸುದ್ದಿಗಳು ಮೊದಲಾದ ವಿಷಯಗಳನ್ನು ಕುರಿತು ಬರೆದ ಗ್ರಂಥಗಳ ಕೊರತೆಯು ವಿಶೇಷವಾಗಿರುವದೆಂಬುದನ್ನು ಬಲ್ಲೆವು. ಚಾಲುಕ್ಯರು, ಕದಂಬರು, ಹೊಯಸ್ಸಳರು, ವಿಜಯನಗರದ ಅರಸರು, ಮೊದಲಾದವರ ದಿವ್ಯಚಾರಿತ್ರ್ಯಗಳಾದರೂ ನಮ್ಮ ಕಣ್ಣಮುಂದೆ ಕಟ್ಟಿರುತ್ತವೆ. ಆದರೆ ಬಹುದಿವಸದ ಹಿಂದಿನ ಆ ನಮ್ಮ ಪೂರ್ವಜರ ದಿವ್ಯಚಾರಿತ್ರ್ಯಗಳ ಮೇಲೆ ರಜಪೂತರ, ಮುಸಲ್ಮಾನರ, ಮರಾಟರ ದಿವ್ಯಚಾರಿತ್ರ್ಯಗಳ ರಾಶಿಗೆ ರಾಶಿಯೇ ಬಿದ್ದು ನಮ್ಮವರ ಆ ದಿವ್ಯಚಾರಿತ್ರ್ಯಗಳು ಮರೆಯಾಗಿವೆ. ಇನ್ನು ಮೇಲೆ ಮೊದಲು ವಿಜಯನಗರದ ಪ್ರತಿಷ್ಠಾಪನೆಯ ಕಾದಂಬರಿಯನ್ನು ಬರೆದು, ಆ ರಾಜ್ಯಕ್ಕೆ ಸಂಬಂಧಿಸಿದ ಕೆಲವು ಸುರಸ ಕಾದಂಬರಿಗಳನ್ನು ಬರೆಯುವದಾದ ಮೇಲೆ ಚಾಲುಕ್ಯರೇ ಮೊದಲಾದ ಪ್ರಸಿದ್ಧ ಕನ್ನಡ ರಾಜರ ವಂಶಗಳಲ್ಲಿಯ ಉಜ್ವಲ ಪ್ರಸಂಗಗಳನ್ನು ಕುರಿತು ಕಾದಂಬರಿಗಳನ್ನು ಬರೆಯಬೇಕೆಂದು ಸಂಕಲ್ಪ ಮಾಡಿರುವೆವು. ಈ ಕೆಲಸಕ್ಕೆ ಸಾಧನ ಸಾಮಗ್ರಿಗಳು ಕಡಿಮೆಯಾಗಿರುವದರಿಂದ ಕನ್ನಡಿಗರು ಅವಸರ ಮಾಡಿದರೆ ಕೆಲಸವಾಗದು. ಸಂಬಾಳಿಸಿ ನಮ್ಮಿಂದ ಕೆಲಸ ಮಾಡಿಸಿಕೊಳ್ಳಬೇಕು."

**ಮರಾಠರ ಅಭ್ಯುದಯ** ಕಾದಂಬರಿಯ ಪ್ರಸ್ತಾವನೆಯಲ್ಲಿ ಬರೆದ ಮಾತುಗಳಿವು! (೧೬-೯-೧೯೧೮). ಜೊತೆಗೆ ಯಾರೋ ಕೆಲವರು 'ಏನು

ನೀವು ಬರೇ ರಜಪೂತರ ಹಾಗೂ ಮರಾಠಾ ವೀರರ ಕೃತಿಗಳನ್ನಷ್ಟೇ ಕೊಡುತ್ತಿದ್ದೀರಿ' ಎಂಬ ಆಕ್ಷೇಪದ ದನಿಯನ್ನು ಎತ್ತಿರಬೇಕು. ವಿಜಯನಗರ ಸಾಮ್ರಾಜ್ಯದ ಪತನ, ಅನಂತರ ಚಂದ್ರಗಿರಿಯ ಇತಿಹಾಸ ಇವುಗಳ ಹಿನ್ನೆಲೆಯ ಎರಡು ಕಾದಂಬರಿಗಳು ಈ ಹಿಂದೆಯೇ ಬಂದುಬಿಟ್ಟಿದ್ದವು.

ಹೀಗೆ ಹಾವೇರಿಗೆ ಬಂದ ವರುಷವೇ ವಿದ್ಯಾರಣ್ಯರ ಜೀವನದ ಕಾದಂಬರಿಯ ತಡಿಕೆಯು ಸಿದ್ಧವಾಗಿದ್ದಿತು. ಆಗಿನಿಂದಲೇ ಈ ಕೃತಿಯ ಬಗ್ಗೆ ಅವರ ಅಭಿಮಾನ ಬಹಳ 'ಈ ಕಾದಂಬರಿಯು ಕನ್ನಡಿಗರ ಹೃದಯಭೂಮಿಯನ್ನು ಹಸನುಮಾಡಿ ಅದರಲ್ಲಿ ಪ್ರಗತಿಮೂಲವಾದ ಉಜ್ವಲ ಸದ್ಗುಣಗಳ ಬೀಜವನ್ನು ಬಿತ್ತದೆ ಇರದು!....... ಕನ್ನಡಿಗರ ಸತ್ವದ ಅಭಿಮಾನವು ಭರದಿಂದ ಜಾಗೃತವಾಗುತ್ತಿರುವ ಈಗಿನ ಅನುಕೂಲ ಕಾಲದಲ್ಲಿ ಈ ಕಾದಂಬರಿಯನ್ನು ಬರೆಯುವ ಸುಯೋಗವು ಒದಗಿದ್ದಕ್ಕಾಗಿ ನಮಗೆ ಪರಮ ಆನಂದವಾಗಿದೆ' ಎಂಬುದಾಗಿ ಭಗವತೀ ಕಾತ್ಯಾಯನಿ (೧೯೧೯) ಪುಸ್ತಕದಲ್ಲಿ ಬಂದ ಜಾಹೀರಾತು ಸಾರುತ್ತದೆ.

ಈ ಕಾದಂಬರಿಯು ಇತರ ಕಾದಂಬರಿಗಳಂತೆ ೨೦೦ ಪುಟಗಳಷ್ಟಾಗುತ್ತದೆಂದು ಅವರು ಭಾವಿಸಿದ್ದರು. ಆದರೆ ಅದು ೬೦೦ ಪುಟಗಳಷ್ಟು ಬೆಳೆದು ಬಂದಿತು. ಅದರ ಕೆಲ ಭಾಗಗಳು ಎರಡು ವರ್ಷಕಾಲ 'ಸದ್ಗುರು' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರಲಾರಂಭಿಸಿದ್ದರೂ ಸಮಗ್ರಕೃತಿಯು ಹೊರಬಂದುದು ಮೂರು ವರ್ಷಗಳ ಅನಂತರವೇ (೧೯೨೩). ಗಳಗನಾಥರ ದೃಷ್ಟಿಯಲ್ಲಿ ಇದೊಂದು ಹಿರಿಯ ಸಾಹಸ. 'ಈ ಪ್ರಚಂಡವಾದ ಸುರಸತಾತ್ವಿಕ ಐತಿಹಾಸಿಕ ಕಾದಂಬರಿಯು ಮುಗಿದದ್ದರಿಂದ, ನನ್ನ ತಲೆಯ ಮೇಲಿನದೊಂದು ದೊಡ್ಡ ಭಾರವು ಇಳಿದಂತಾಗಿ ನನಗೆ ಹಿಡಿಸಲಾರದಷ್ಟು ಸಂತೋಷವಾಗಿರುವದು! ನನ್ನ ಲೇಖನ ವ್ಯವಸಾಯದ ಅಖಂಡವಾದ ೧೮ ವರ್ಷಗಳ ಅವಧಿಯಲ್ಲಿ ಇಷ್ಟು ಗೌರವದ ಹಾಗೂ ಇಷ್ಟು ದೊಡ್ಡದಾದ ಸ್ವತಂತ್ರ ವಿಚಾರದ ಪುಸ್ತಕವನ್ನು ನಾನು ಬರೆಯಲೆ ಇಲ್ಲ' 'ನನ್ನ ಈ ದೀರ್ಘ ಲೇಖನ ವ್ಯವಸಾಯದ ಪರಿಪಾಕವು ಈ **ಮಾಧವ ಕರುಣಾ ವಿಲಾಸ**ವಾಗಿರುವದು.' 'ಇಡಿಯ ಕರ್ನಾಟಕದ ಚಿತ್ರವನ್ನು ಈ ಕಾದಂಬರಿಯು ಆಕರ್ಷಿಸಿರುವದು' 'ಗಳಗನಾಥರ ವಿವಿಧ ಮನೋಹರ ಕಾದಂಬರಿಗಳಲ್ಲಿ ಇದು ಶ್ರೇಷ್ಠತರ' ಎಂದೆಲ್ಲ ಅವರು ಹೇಳುತ್ತಿದ್ದುದನ್ನು ಗಮನಿಸಬೇಕು.

ಇದು ಅವರ ಸ್ವತಂತ್ರ ಕೃತಿಯಾಗಿದ್ದು, ಕನ್ನಡಿಗರ ಇತಿಹಾಸವನ್ನು ಕಥನಿಸುವ ಅವರ ಬಹುದಿನದ ಹಂಬಲ ಕೈಗೂಡಿದ್ದರಿಂದ ಅದರಲ್ಲಿ ಕೃತಾರ್ಥತೆಯ ಭಾವನೆ ಮೂಡಿದ್ದು ಸಹಜವೇ. ಜೊತೆಗೆ ತಮ್ಮ ಧಾರ್ಮಿಕ ವಿಚಾರಗಳನ್ನು ವ್ಯಕ್ತಪಡಿಸಲು ಇದೊಂದು ಅನುಕೂಲವೊದಗಿಬಂತು. ಇಂದಿನ ವಿಮರ್ಶೆಯ ಮಾನದಿಂದ ಧರ್ಮದ ವಿಷಯ ಇದರಲ್ಲಿ ಹೆಚ್ಚಾಗಿ ಬಂದು 'ಕಾದಂಬರಿ'ಯ ಕಲೆಗಾರಿಕೆಗೆ ಪೆಟ್ಟುಬಿದ್ದಿದೆಯೆಂದು ಅನಿಸಬಹುದು. ಇನ್ನೊಂದು ಅರ್ಥದಲ್ಲಿ ಅದು ಮಹಾಭಾರತವೇ ಸೈ. ಆ ಮಹಾಕಾವ್ಯದಲ್ಲಿ ಕೂಡ ಧರ್ಮದೃಷ್ಟಿ ಮೇಲ್ಗಾಯ್ದು ಬಂದಿದ್ದರೂ ಕಥನದ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲಾಗಿದೆ. ಅದು ಕೌರವ-ಪಾಂಡವರ ಮಹಾಭಾರತವಾದರೆ ಇದು ಕನ್ನಡಿಗರ ಮಹಾಭಾರತ.

'ಕನ್ನಡಿಗರ ವಿಲಕ್ಷಣ ಜಾಗೃತಿ' ಎಂಬ ಉಪಶೀರ್ಷಿಕೆಯನ್ನು ಹೊಂದಿದ್ದ ಈ ಕಥಾನಕಕ್ಕೆ ಮಾಧವಾಚಾರ್ಯರೇ ಸೂತ್ರಧಾರರು. ಅವರಿಂದಲೇ ಕಥೆಯ ಆರಂಭ. ಮಾಧವಾಚಾರ್ಯರು, ಮುಸಲ್ಮಾನರ ದಾಳಿಯಿಂದ ಜರ್ಜರಿತವಾದ ದೇಶದ ಉದ್ಧಾರಕ್ಕಾಗಿ ಶಾಸ್ತ್ರವ್ಯಾಸಂಗವನ್ನು ಬದಿಗಿರಿಸಿ ತಪಸ್ಸು ಮಾಡುತ್ತಾರೆ. ರಾಷ್ಟ್ರಜಾಗೃತಿಯ ಸಿದ್ಧಿಯನ್ನು ಪಡೆಯುತ್ತಾರೆ. ಇತ್ತ ಹುಕ್ಕಬುಕ್ಕರು ತಮ್ಮ ಕ್ಷಾತ್ರವೃತ್ತಿಗನುಸಾರವಾಗಿ ಸೈನ್ಯ ಹಾಗೂ ಶಸ್ತ್ರಾಸ್ತ್ರ ಸಂಗ್ರಹ ನಡೆಸುತ್ತಾರೆ. 'ಮುಸಲ್ಮಾನರ ಹಾವಳಿ' ಎಂದಾಕ್ಷಣ ಎಲ್ಲ ಮುಸಲ್ಮಾನರೂ ಕೆಟ್ಟವರಲ್ಲ. ಕಾಸೀಮಖಾನ್, ಬಹಾವುದ್ದೀನ್ ಮುಂತಾದವರ ನೆರವು ಹಿಂದೂ ನಾಯಕರಿಗಿದ್ದಿತು. ಈ ಮಧ್ಯೆ ಪದ್ಮಿನಿಯಂಥ ಸ್ತ್ರೀರತ್ನಗಳ ಕ್ಷಾತ್ರ ತೇಜಸ್ಸು, ಶೀಲ ಸೌಜನ್ಯಾದಿಗಳು ವ್ಯಕ್ತವಾಗಿವೆ. ಕೊನೆಗೆ ಕನ್ನಡ ಸೈನ್ಯಕ್ಕೆ ವಿಜಯವಾಗಿ ಹುಕ್ಕನು ಸಿಂಹಾಸನಾರೂಢನಾಗುತ್ತಾನೆ. ಈ ಕೃತಿಯಲ್ಲಿ ಗಳಗನಾಥರ ಪಾತ್ರಸೃಷ್ಟಿ ಎಂದಿನಂತೆ ಉಜ್ವಲವಾಗಿದೆ. ಮಲ್ಲಗಾಳಗ, ಮತ್ತು ಯುದ್ಧಕಾರ್ಯದ ಯುಕ್ತಿಪ್ರಯುಕ್ತಿಗಳು ಓದುಗರನ್ನು ಸೆರೆಹಿಡಿಯುತ್ತವೆ.

ಈ ಕೃತಿಯ ಇನ್ನೊಂದು ವೈಶಿಷ್ಟ್ಯವೆಂದರೆ ಸಮಕಾಲೀನ ರಾಜಕೀಯ ಪ್ರಜ್ಞೆ. ದೇಶದಲ್ಲಿ ಸ್ವರಾಜ್ಯ ಸ್ಥಾಪನೆ, ಗಾಂಧಿಯವರ ಅಸಹಕಾರ ಚಳುವಳಿ, ಕಾರಾಗೃಹವಾಸ, ಹರಿಜನೋದ್ಧಾರ ಮುಂತಾದ ವಿಚಾರಗಳು ಜನತೆಯನ್ನು ಆಕರ್ಷಿಸಿದ್ದವು. ಗಳಗನಾಥರು ಮಾಧವಾಚಾರ್ಯರ ಉಪದೇಶದ ಮೂಲಕ ಈ ಕುರಿತ ತಮ್ಮ ಸ್ವತಂತ್ರ ವಿಚಾರ ಸರಣಿಯನ್ನು ವ್ಯಕ್ತಪಡಿಸಿದ್ದಾರೆ. (ಪ್ರಕರಣ

೨೯-೪೩, ಸುಮಾರು ೨೦೦ ಪುಟಗಳು) ವ್ಯವಹಾರಿಕ ಯೋಗತ್ರಯ (ಸಹಯೋಗ, ಅಸಹಯೋಗ, ಪ್ರತಿಯೋಗ), ಧರ್ಮದ ದುರಭಿಮಾನ ವೈದಿಕ-ಅವೈದಿಕ ಧರ್ಮಗಳು, ಅಸ್ಪೃಶ್ಯತೆ ಹಾಗೂ ಧಾರ್ಮಿಕ, ರಾಜಕೀಯ ವ್ಯವಹಾರಗಳು, ರಾಜಕೀಯದಲ್ಲಿ ಅಹಿಂಸಾತತ್ವ, ದೇಶಘಾತಕ ಬ್ರಾಹ್ಮಣ-ಬ್ರಾಹ್ಮಣೇತರ ಭಾವನಿರಸನ, ಪರತಂತ್ರರಿಗೆ ಸೆರೆಮನೆಯೇ ಸ್ವರಾಜ್ಯ - ಎಂಬ ಹೇಳಿಕೆ, ಇವುಗಳಿಂದ ಅವರ ವಿಚಾರ-ಸರಣಿಯ ಬಗೆಯನ್ನು ಅರಿತುಕೊಳ್ಳಬಹುದಾಗಿದೆ. ಗಳಗನಾಥರು ಟಿಳಕ-ಗಾಂಧೀಜಿಯವರ ಸ್ವರಾಜ್ಯ ಸ್ಥಾಪನೆಯ ಬಗೆಗಾಗಲೀ, ಗಾಂಧೀಜಿಯವರ ಅಸ್ಪೃಶ್ಯರ ಉದ್ಧಾರ ಪ್ರಯತ್ನದ ಬಗೆಗಾಗಲೀ ತಾತ್ವಿಕವಾಗಿ ವಿರೋಧಿಗಳಿದ್ದಿಲ್ಲ. ಟಿಳಕರು ತೀರಿಹೋದಾಗ ಗಳಗನಾಥರು ಸದ್ಗುರು ಪತ್ರಿಕೆಯಲ್ಲಿ 'ಟಿಳಕರ ಮರಣವೋ ಅವರ ಉತ್ಕರ್ಷವೋ?' ಎಂಬ ಅಗ್ರಲೇಖವನ್ನು ಬರೆದದ್ದೂ ಇದೆ. ಈ ಕಾದಂಬರಿಯ ಅನೇಕ ಸಂಭಾಷಣೆಗಳಲ್ಲಿ ಇದಕ್ಕೆ ಅನುಕೂಲವಾದ ವಾದಸರಣಿಯನ್ನೇ ಕಾಣುತ್ತೇವೆ. ಆದರೆ ಎಲ್ಲೆಲ್ಲಿ ಸನಾತನ ಧರ್ಮದ ಆಚರಣೆಗೆ ವಿರುದ್ಧವಾದ ನಡೆವಳಿಕೆ ಬರುತ್ತದೆಯೋ ಅಲ್ಲೆಲ್ಲ ಅವರು ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅಸ್ಪೃಶ್ಯತೆಯು ಮಾತೂ ಅದೇ ತೆರನಾದುದು. ಹರಿಜನರು ಸಮಾಜದ ಒಂದು ಅಂಗ. ಅವರನ್ನು ಅವಹೇಳನೆಯಿಂದ ಕಾಣುವದು ಸರ್ವಥಾ ತಪ್ಪು. ಆದರೆ ಅವರಲ್ಲಿ ಅಭೇದವನ್ನು ತೋರದೇ ಸಮಾನಸ್ಕಂದರೆಂದು ತಿಳಿಯಲಾಗದು - ಎಂಬುದು ಅವರ ನಿಲುಮೆಯಾಗಿತ್ತು.

'ಈ ಕಾದಂಬರಿಯಲ್ಲಿ ಶ್ರೀ ಮಾಧವಾಚಾರ್ಯ, ಶ್ರೀ ವಿರುಪಾಕ್ಷಾರ್ಯ, ಕಾಸಿಮಖಾನ್, ಮಾದಿಗರ ದುರಗಪ್ಪ - ಎಂಬ ನಾಲ್ಕೂ ಪಾತ್ರಗಳನ್ನು ಯೋಜಿಸಿರುವದರಲ್ಲಿ ಲೋಕಸಂಗ್ರಹದ ಸರ್ವಸ್ವವು ತೋರಿಸಲ್ಪಟ್ಟಿರುವದು. ಜಗತ್ತಿನ ಜನರಲ್ಲಿ ವೈದಿಕ-ಅವೈದಿಕ ಎಂಬ ಎರಡೇ ವರ್ಗಗಳು. ಚಾತುರ್ವರ್ಣ್ಯಾತ್ಮಕ ವೈದಿಕರನ್ನು ತೋರಿಸಲಿಕ್ಕೆ ಶ್ರೀ ಮಾಧವಾಚಾರ್ಯರೆಂಬ ಬ್ರಾಹ್ಮಣರೂ, ಎರಡನೆಯ ಏಕವರ್ಣಾತ್ಮಕ ವೈದಿಕರನ್ನು ತೋರಿಸಲು ಶ್ರೀ ವಿರೂಪಾಕ್ಷಾರ್ಯರೆಂಬ ಜಂಗಮರೂ ಈ ಕಾದಂಬರಿಯಲ್ಲಿ ಯೋಜಿಸಲ್ಪಟ್ಟಿರುವರು. ಇನ್ನು ಅವೈದಿಕ ವರ್ಗವನ್ನು ತೋರಿಸಲಿಕ್ಕೆ ಕಾಶಿಮಖಾನನೆಂಬ ಮುಸಲ್ಮಾನನ ಯೋಜನೆಯಾಗಿದ್ದು, ಪಾರಸಿ, ಕ್ರಿಶ್ಚಿಯನ್, ಮೊದಲಾದವರೆಲ್ಲ ಅವೈದಿಕರಲ್ಲಿ ಬರುವರೆಂಬುದರ ದಿಗ್ದರ್ಶನ ಮಾಡಿದೆ.

ನಾಲ್ಕನೆಯ ಪಾತ್ರವು ಮಾದಿಗರ ದುರಗಪ್ಪನದು. ದೇಹಾಭಿಮಾನವಿರುವವರೆಗೆ ಯಾವ ಧರ್ಮದವರೇ ಆಗಲಿ ತಮ್ ತಮ್ಮ ಧರ್ಮದಂತೆ ವಿಧಿನಿಷೇಧಗಳನ್ನು ಆಚರಣೆಯಲ್ಲಿ ತೋರಿಸಬೇಕಾಗಿರುವದರಿಂದ, ಸ್ಥಾಪಿತವಾಗುವ ಒಂದಿಲ್ಲೊಂದು ಬಗೆಯ ಅಸ್ಪೃಶ್ಯತಾ ತತ್ವವನ್ನು ಆ ಪಾತ್ರವು ತೋರಿಸುವದು. ಎಡಗೈಯು ದೇಹದ ಭಾಗವೇ ಆಗಿದ್ದರೂ ಮಲಕ್ಷಾಲನ ರೂಪದ ತನ್ನ ಕರ್ತವ್ಯ ಮಾಡಿದಾಗ ಅದು ಶುದ್ಧವಾಗುವವರೆಗೆ ಅನ್ಯ ಅವಯುವಗಳಿಗೆ ಅಸ್ಪಶ್ಯವಾಗಿರುವಂತೆ... ಈ ವಿಧಿ ನಿಷೇಧದ್ಯೋತಕವಾದ ಅಸ್ಪೃಶ್ಯತಾ ತತ್ವವು ಸ್ಥೂಲಸೂಕ್ಷ್ಮಮಾನದಿಂದ ಪ್ರಾಣಿಮಾತ್ರಗಳಲ್ಲಿಯೂ ಇರುವುದೆಂದು ವಿಚಾರಪರರು ಒಪ್ಪಿಕೊಳ್ಳ ಬೇಕಾಗುವದು.... ಈ ನಾಲ್ಕೂ ವರ್ಗದ ಜನರು ಸ್ವರಾಜ್ಯಕ್ಕಾಗಿ ಹ್ಯಾಗೆ ಒಂದಾಗಬೇಕೆಂದು ಈ ಕಾದಂಬರಿಯಲ್ಲಿ ಮಾಧವಾಚಾರ್ಯರು ತೋರಿಸಿದ್ದಾರೆ.'

–ಹೌದು, ಈ ಕಾದಂಬರಿಯನ್ನು ಬರೆಯಿಸಿದವರೂ ಮಾಧವಾಚಾರ್ಯರೇ. ಗಳಗನಾಥರು ಅವರ ವ್ಯಕ್ತಿತ್ವ ಕಾರ್ಯಸಾಧನೆಗಳನ್ನು ಸಂಪೂರ್ಣವಾಗಿ ಆತ್ಮಸಾತ್ ಮಾಡಿಕೊಂಡುಬಿಟ್ಟಿದ್ದರು. ಆ ಆವೇಶದಿಂದ ಕೂಡಿದ್ದರೆಂದೇ ಇಷ್ಟೊಂದು ವ್ಯಾಪಕವಾದ ಇತಿಹಾಸ ಸೃಷ್ಟಿಯನ್ನು ಮಾಡುವುದಕ್ಕೆ ಸಾಧ್ಯವಾಯಿತು.

ಗಳಗನಾಥರು ಮಾಧವ ಕರುಣಾವಿಲಾಸದ ಮೂವತ್ತೇಳು ಪ್ರಕರಣಗಳನ್ನು ಬರೆದು ಮುಗಿಸಿದ್ದರು. ಮುಂದಿನ 'ಅಸಹಯೋಗ' ಪ್ರಕರಣವನ್ನು ಕುರಿತು ಬರೆಯುವಲ್ಲಿ ಮಹಾತ್ಮಾ ಗಾಂಧಿಯವರ ಉಜ್ವಲ ತತ್ವಗಳ ಮೂಲಸ್ಥಾನವನ್ನು ಅರಿತುಕೊಳ್ಳುವುದಕ್ಕಾಗಿ, ಕಾದಂಬರೀ ಲೇಖವನ್ನು ಅಷ್ಟಕ್ಕೆ ಬಿಟ್ಟು ಶ್ರೀಮದ್ಭಾಗವತವನ್ನು ಅವಲೋಕಿಸಬೇಕಾಗಿ ಬಂತು. ಆಗ ಅದನ್ನೆ ಅನುವಾದಿಸಬೇಕೆಂದು ಯೋಚಿಸಿದರು.

ಹಾಗೆ ಸಿದ್ಧವಾದ **ಭಾಗವತಾಮೃತವು** ಮೂಲಕೃತಿಯ ಸಾರಸಂಗ್ರಹವಲ್ಲದೆ ಪೂರ್ಣ ಅನುವಾದವಲ್ಲ. ಚಿಪಳೂಣಕರ ಅವರ ಮರಾಠೀ ಅನುವಾದವನ್ನು ಮುಂದಿಟ್ಟುಕೊಂಡಿದ್ದರೂ ಮಹತ್ವದ ಕಥಾಭಾಗವನ್ನೂ ಧಾರ್ಮಿಕ ತತ್ವನಿರೂಪಣೆಯ ಅಂಶಗಳನ್ನೂ ಆಯ್ದು ಕೊಳ್ಳುವಲ್ಲಿ ಗಳಗನಾಥರು ಸ್ವಂತಿಕೆಯನ್ನು ತೋರಿದ್ದಾರೆ. 'ಸಂದಿಗೊಂದಿಗಳಲ್ಲಿದ್ದ

ಉತ್ತಮೋತ್ತಮ ವಿಚಾರಗಳನ್ನು ಹುಡುಕಿ ಅತ್ಯಂತ ಕಾರ್ಪಣ್ಯದಿಂದ' ಸಂಗ್ರಹಿಸಿದ್ದಾರೆ.

ಇವನ್ನು ಬರೆಯುತ್ತಿದ್ದಾಗ ಅದೆಂಥ ಶ್ರದ್ಧೆ! ಒಂದೊಂದು ಸ್ಕಂದ ಮುಗಿಯುತ್ತಲೂ ಆ ಆ ಸ್ಕಂದಗಳ ಸಂಖ್ಯೆಯಷ್ಟು ಬ್ರಾಹ್ಮಣ ಭೋಜನ. ಕೊನೆಯ ೧೧-೧೨ನೆಯ ಸ್ಕಂದಗಳನ್ನು ಬರೆಯುವಾಗ. ಓಸ್ಸ್ಲೆಯಾಗಿ ಪಾಂಡುರಂಗ ದೀಕ್ಷಿತರೆಂಬವರ ಭಜನಾಮಂಡಳಿಯ ಕಾರ್ಯಕ್ರಮ ನಡೆಯುತ್ತಿದ್ದಿತಂತೆ! ಭಾಗವತಾಮೃತದ ೫೪೦ ಪುಟಗಳ ಲೇಖವಲ್ಲದೆ ಮುದ್ರಣ ಕಾರ್ಯವನ್ನು ಸಹ ನಾಲ್ಕೇ ತಿಂಗಳಲ್ಲಿ ಮುಗಿಸಿಬಿಟ್ಟರು.

ಮೊದಲೆ ಭಾವುಕರಾದ ಗಳಗನಾಥರಿಗೆ ಕೆಲವೊಂದು ಘಟನೆಗಳೊದಗಿ ಬಂದು ಶ್ರೀಮದ್ಭಾಗವತದ ಅಲೌಕಿಕ ಮಹಿಮೆಯು ಅವರಲ್ಲಿ ಇನ್ನಷ್ಟು ನೆಲೆಗೊಳ್ಳಲು ಕಾರಣವಾಯಿತು. ಶ್ರೀ ಮಂತ್ರಾಲಯ ಮಠದ ಶ್ರೀ ಸುಶೀಲೇಂದ್ರ ಶ್ರೀಪಾದರು ತಾವು ಶೇಷಾಚಲ ಪಾಠಶಾಲೆಗೆ ಕೊಡುತ್ತೇನೆಂದಿದ್ದ ನೂರು ರೂಪಾಯಿ ವರ್ಷಾಸನದ ಮೂರು ವರ್ಷದ ಹಣವನ್ನು ತಾವಾಗಿ ಕೊಟ್ಟರಂತೆ. ಅದೂ ಪ್ರಹ್ಲಾದನ ಸಮ್ಮುಖದಲ್ಲಿ ನರಸಿಂಹದೇವರ ಅವತಾರ ಬರೆಯುವಾಗ! ಪ್ರಹ್ಲಾದಾಂಶರಾದ ಶ್ರೀ ರಾಘವೇಂದ್ರರೇ ಬಂದು ಅನುಗ್ರಹಿಸಿದರೆಂದು ಗಳಗನಾಥರು ಬಗೆದರು. ತಮ್ಮ ಕೃತಿಯನ್ನು ಶ್ರೀ ಸುಶೀಲೇಂದ್ರ ಸ್ವಾಮಿಗಳಿಗೆ ಅರ್ಪಣೆ ಮಾಡಿದರು.

ಇನ್ನೊಂದು ಅಲೌಕಿಕ ಸಂಗತಿಯು ಸಮಕಾಲೀನ ಲೇಖಕರಾದ ವಲ್ಲಭ ಮಹಾಲಿಂಗ ತಟ್ಟಿಯವರಿಗೆ ಸಂಬಂಧಿಸಿದುದು. ತಟ್ಟಿಯವರು ನಿವೃತ್ತ ಶಾಲಾ ಮಾಸ್ತರರು. 'ಕನ್ನಡಿಗರ ಜನ್ಮಸಾರ್ಥಕತೆ' 'ಗೀತಾವಲೋಕನ' ಮುಂತಾದ ವಿಚಾರ ಪರಿಪ್ಲುತವಾದ ಕೃತಿಗಳನ್ನೂ ಕೆಲವು ಕಾದಂಬರಿಗಳನ್ನೂ ರಚಿಸಿದವರು. ವಯೋವೃದ್ಧರಾದ ತಟ್ಟಿಯವರು ರೋಗಾಧಿಕ್ಯದಿಂದ ಬಳಲಿದವರಾಗಿ ಗಳಗನಾಥರಲ್ಲಿ ನಿಂತು ಔಷಧೋಪಚಾರ ಹೊಂದುತ್ತಿದ್ದರು. ಗಳಗನಾಥರು ತಾವು ಬರೆದಷ್ಟು ಭಾಗವನ್ನು ಅವರಿಗೆ ತಪ್ಪದೇ ಓದಿ ತೋರಿಸಿ ಅದರ ಕುರಿತು ಚರ್ಚೆ ನಡೆಸುತ್ತಿದ್ದರು. ಅದನ್ನು ಕೇಳಿದ ಸರಸ ಸಜ್ಜನಿಕೆಯ ತಟ್ಟಿಯವರಿಗೆ ನಸುಕಿನಲ್ಲಿ ದಿವ್ಯಪ್ರಕಾಶದ ಹಿನ್ನೆಲೆಯಲ್ಲಿ 'ಓಂ ನಮೋ ಭಗವತೇ ವಾಸುದೇವಾಯ' ಎಂಬ ಮಂತ್ರವು ಗೋಡೆಯ ಮೇಲೆ ಒಡಮೂಡಿ ತೋರಿತಂತೆ!

ವಿಷ್ಣು ಸರ್ವೋತ್ತಮತ್ವವನ್ನು ಹೇಳುವ ಭಾಗವತವನ್ನು ಅನುವಾದಿಸಿದ ಗಳಗನಾಥರು ಮರುವರ್ಷ **ಶೈವಸುಧಾರ್ಣವ**ವನ್ನು ಬರೆದದ್ದು ಸೋಜಿಗವಾಗಿ ತೋರಬಹುದು. ಎಲ್ಲ ಪುರಾಣಗಳ ಬಗ್ಗೆ ಅವರಿಗೆ ವಿಶೇಷ ಆದರವಿದ್ದಿತೆಂದೇ ಹಾಗೆ ಮಾಡಿದರು. ಅವರ ಈ ನಿಲುಮೆಯು ಗಮನಾರ್ಹವಾಗಿದೆ:

'ಶಿವ ವಿಷ್ಣ್ವಾದಿ ದೇವತೆಗಳ ಶ್ರೇಷ್ಠತ್ವಕ್ಕಾಗಿ ಬಡಿದಾಡುತ್ತ ಶೈವ ಪುರಾಣಗಳನ್ನು ವೈಷ್ಣವರೂ, ವೈಷ್ಣವ ಪುರಾಣಗಳನ್ನು ಶೈವರೂ ನಿಂದಿಸುತ್ತ, ಕುತ್ಸಿತತನದಿಂದ ತಮಗೆ ಬೇಡವಾದ ಪುರಾಣಗಳನ್ನು ನೋಡದೇ ಇರುವರು. ಪತಿವ್ರತಾಸ್ತ್ರೀಗೆ ತನ್ನ ಪತಿಯೇ ಅಧಿದೈವತವಾಗಿ ತೋರುವಂತೆ, ಶೈವರಿಗೆ ಶಿವನೂ ವೈಷ್ಣವರಿಗೆ ವಿಷ್ಣುವೂ ಅಧಿದೈವತಗಳಾಗಿ ತೋರುವದು ಸ್ವಾಭಾವಿಕವು.... ಲೋಕವು ಭಿನ್ನರುಚಿಯುಳ್ಳದ್ದಾದ್ದರಿಂದ ಆ ಭಿನ್ನರುಚಿಗೆ ತಕ್ಕಂತೆ ಒಬ್ಬ ಪರಮಾತ್ಮನೆ ಹಲವು ನಾಮ – ರೂಪ – ಕ್ರಿಯೆಗಳಿಂದ ಹಲವು ದೇವತೆಗಳಾಗಿ ವರ್ಣಿಸಲ್ಪಟ್ಟಿರುವನೆಂದು ನಾನು ತಿಳಿದಿರುತ್ತೇನೆ. ಮದುವೆಯ ಮದಿಮಗನು ದೇವಸ್ವರೂಪನೆಂದು ತಿಳಿದು ಆತನಿಗೆ ಸರ್ವರೂ ಶ್ರೇಷ್ಠತ್ವಕೊಟ್ಟು, ಮನ್ನಿಸಿ ನಡಕೊಳ್ಳುವಂತೆ, ಭಕ್ತರನ್ನು ಮನ್ನಿಸಲು ಯಾವುದೊಂದು ಪುರಾಣದಲ್ಲಿ ಅಗ್ರಗಣ್ಯನಾಗಿ ನಿಂತ ದೇವತೆಗೆ ಉಳಿದ ದೇವತೆಗಳೆಲ್ಲರೂ ಅಗ್ರಸ್ಥಾನವನ್ನು ಕೊಟ್ಟು ಮನ್ನಿಸಿ ತಾವೆಲ್ಲರೂ ಆತನ ಅನುವರ್ತಿಗಳಾಗಿ ನಡೆದುಕೊಂಡಿರುವರು. 'ಆಯಾ ದೇವತೆಗಳಲ್ಲಿ ಉಪಾಸಕರ ಚಿತ್ತವು ದೃಢವಾಗುವದಕ್ಕಾಗಿ ಆಯಾ ದೇವತೆಗಳ ಸರ್ವೋತ್ತಮತ್ವ ಸ್ಥಾಪಕ ಚರಿತ್ರಗಳೇ ಆಯಾ ಪುರಾಣಗಳಲ್ಲಿ ಹೇಳಲ್ಪಡುವವು. ಮನೆಯ ಯಜಮಾನನು ಮನೆಯ ಜನರಲ್ಲೆಲ್ಲ ಮುಖ್ಯನಾಗಿರುವಂತೆ ಆಯಾ ದೇವತೆಯ ಪುರಾಣದಲ್ಲಿ ಆಯಾ ದೇವತೆಯು ಮುಖ್ಯವಾಗಿರುತ್ತದೆ. ಆದ್ದರಿಂದ ಪುರಾಣಗಳೊಳಗಿನ ಕಥೆಗೆ ಮಹತ್ವಕೊಡದೇ, ಆ ಕಥೆಗಳಿಂದ ಹೊರಡುವ ಫಲಿತಕ್ಕೂ ಆ ಪುರಾಣ ರಚನೆಯ ಉದ್ದೇಶಕ್ಕೂ ಲಕ್ಷ್ಯಕೊಟ್ಟರೆ ಎಲ್ಲ ಪುರಾಣಗಳು ಎಲ್ಲರಿಗೂ ಮಾನ್ಯವಾಗುವವು. ವೈಷ್ಣವರು ಶೈವಪುರಾಣಗಳನ್ನು ಓದುವಾಗ ಶಿವನ ಸ್ಥಾನದಲ್ಲಿ ವಿಷ್ಣುವನ್ನು ಕುಳ್ಳಿರಿಸಿದರೆ ತತ್ವದೃಷ್ಟಿಯಿಂದ (ಚರಿತ್ರ ದೃಷ್ಟಿಯಿಂದಲ್ಲ) ಆ ಶೈವಪುರಾಣಗಳು ವೈಷ್ಣವ ಪುರಾಣಗಳೇ ಆಗುವವು. ಇದೇ ಮಾತು ಶೈವರಿಗೂ ಹತ್ತುವದು. ಒಟ್ಟಿಗೆ ಪುರಾಣೋಕ್ತ ದೇವತೆಗಳು ಅವುಗಳ ಸಂಬಂಧದ ಕತೆಗಳೂ ಔಪಚಾರಿಕವೆಂದು ತಿಳಿದು ಕಥೆಗಳಿಂದ ಹೊರಡುವ ತತ್ವಗಳೂ ದೇವತೆಗಳ ಔಪಾಸನೆ

ಯಿಂದುಂಟಾಗುವ ಭಕ್ತಿ-ಜ್ಞಾನ-ವೈರಾಗ್ಯಗಳೂ ಮುಖ್ಯವೆಂದು ತಿಳಿದರೆ ವಾದಕ್ಕೆ ಹಾದಿಯೇ ಉಳಿಯುವುದಿಲ್ಲ.'

-ಈ ಉದಾತ್ತ ಮನೋಭೂಮಿಕೆಯಿಂದ ಪ್ರೇರಿತರಾದ ಗಳಗನಾಥರು ಅನೇಕ ಪುರಾಣಗ್ರಂಥಗಳನ್ನೂ ಹಲವು ವೀರಶೈವ ಗ್ರಂಥಗಳನ್ನೂ ಆಳವಾಗಿ ಪರಿಶೀಲಿಸಿ ಈ 'ಶೈವಸುಧಾರ್ಣವ'ವನ್ನು ರಚಿಸಿದರು.* 'ಸಮಾಜದ ತಪ್ಪು ತಿಳುವಳಿಕೆಗೆ ಕಾರಣವಾದ ವ್ಯಾಸನ ತೋಳು, ಶರಭಾವತಾರಗಳಂಥ ಹಲವು ಸಂಗತಿಗಳ ರಹಸ್ಯ ಸ್ಫೋಟವನ್ನು ಮಾಡಿ ಸಮಾಜದಲ್ಲಿ ವಿತುಷ್ಟತೆಯು ಇಲ್ಲವಾಗಬೇಕೆಂದು ಯಥಾಮತಿ ಮನಃಪೂರ್ವಕವಾಗಿ ಯತ್ನಿಸಿ'ದ್ದಾರೆ.

ಈ ಶಿವಚರಿತ್ರೆಯು ಶಿವಪಂಚಾಕ್ಷರೀ ಮಂತ್ರದ ಮಹಿಮೆಯಿಂದ ಆರಂಭವಾಗಿ ಶಿವಲೀಲೆಗಳ ವಿಸ್ತಾರ ವರ್ಣನೆಯಿಂದ ಕೂಡಿದೆ. ಸಿದ್ಧಮುನೀಶ್ವರನು ವಿವೇಕಶೀಲ ಮೊದಲಾದ ಶಿಷ್ಯರಿಗೆ ಇದನ್ನೆಲ್ಲ ನಿರೂಪಿಸಿದಂತೆ ಯೋಜಿಸಲಾಗಿದೆ. ಕೊನೆಯಲ್ಲಿ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡುವ ರೂಪದಲ್ಲಿ ಗಳಗನಾಥರು ಕೆಲವು ಕಥಾಪ್ರಸಂಗಗಳ ರಹಸ್ಯಗಳನ್ನು ವಿವರಿಸಿದ್ದಾರೆ. ಜೊತೆಗೆ ದ್ವಾದಶ ಲಿಂಗೋತ್ಪತ್ತಿ ಮತ್ತು ತತ್ಸಂಬಂಧದ ಕತೆಗಳು ಬಂದಿವೆ. 'ಜ್ಞಾನ ಪ್ರದೀಪ'ವೆಂಬ ಎರಡನೆಯ ಭಾಗದಲ್ಲಿ ಶೈವಭಕ್ತಿಯ ತಾತ್ವಿಕ ವಿವೇಚನೆ ಇದೆ. ಕೊನೆಯಲ್ಲಿ ಭಕ್ತರಿಗಾಗಿ ಕೆಲವು ಶಿವಸ್ತುತಿಗಳನ್ನು ಕೊಡಲಾಗಿದೆ. ಈ ಕೃತಿಯು ಭಾಗವತಾಮೃತಕ್ಕಿಂತ ಹೆಚ್ಚು ಸ್ವತಂತ್ರ ರಚನೆಯೆನಿಸಿದೆ. ಪ್ರತಿ ಪ್ರಕರಣ (ಸುಧಾತರಂಗ)ದ ಸಾಮಗ್ರಿಯನ್ನು ಬೇರೆ ಬೇರೆ ಪುರಾಣಗಳಿಂದ ಆಯ್ದುಕೊಂಡಿದ್ದು ಅವನ್ನು ಉಲ್ಲೇಖಿಸಲಾಗಿದೆ. ಉದಾ.ಗೆ ಪಂಚಾಕ್ಷರಿಮಂತ್ರ ಮಹಿಮೆಯ ಕಥೆಗೆ 'ರಾಜಶೇಖರ ವಿಳಾಸ'ವೂ 'ಗಿರಿಜಾ ಕಲ್ಯಾಣ' ಕಥೆಗೆ ಹರಿಹರನ ಕಾವ್ಯವೂ ಆಕರವಾಗಿವೆ. ಕೆಲವು ಹರಲೀಲೆಗಳಿಗೆ ಲಿಂಗ ಹಾಗೂ ಶಿವಪುರಾಣಗಳು ಆಧಾರವಾಗಿದ್ದಂತೆ ಮಹಾಭಾರತ ಭಾಗವತಗಳೂ ಅವರಿಗೆ ಸಾಮಗ್ರಿಯನ್ನು ಒದಗಿಸಿವೆ. ದ್ವಾದಶ

---

* ಇದನ್ನು ಬರೆಯುವ ಕಾಲಕ್ಕೆಯೋ ಅನಂತರವೋ [illegible] ಶ್ರೀ ಶಿವಯೋಗಿಗಳನ್ನೂ ಮತ್ತು ಹಾನಗಲ್ಲಿನ ಶ್ರೀ ಕುಮಾರಸ್ವಾಮಿಗಳನ್ನೂ ಕಂಡುಬಂದಿದ್ದರು.

ಜ್ಯೋತಿರ್ಲಿಂಗಗಳ ಚರಿತ್ರೆಯನ್ನು ಬರೆದವರು ಗಳಗನಾಥರ ಅಳಿಯಂದಿರಾದ ಮಲ್ಹಾರಿ ದೀಕ್ಷಿತರು.

ಗಳಗನಾಥರು ಇದೇ ಕ್ರಮದಿಂದ ಮಹಾಭಾರತಾಮೃತ ಮತ್ತು ರಾಮಾಯಣಾಮೃತಗಳನ್ನು ಕೊಡಬೇಕೆಂದು ಸಂಕಲ್ಪಿಸಿದರು. ಅವುಗಳಲ್ಲಿ ಮಹಾಭಾರತದ ಬರವಣಿಗೆಯನ್ನು ಆ ವೇಳೆಗೆ ಆರಂಭಿಸಿದ್ದರು. ೧೮ ಪರ್ವಗಳ ಈ ಮಹಾನ್ ಅನುವಾದವು ಬೇಗ ಮುಗಿಯಲಾರದಷ್ಟೆ. ವಾಲ್ಮೀಕಿಯ ಕೃತಿಯಿಂದ ರಾಮಾಯಣಾಮೃತವನ್ನು ಬರೆಯಲು ಮಾತ್ರ ಅವರಿಗೆ ಅನುಕೂಲವೊದಗಿಬರಲಿಲ್ಲ. ಬದಲಿಗೆ 'ತುಳಸೀರಾಮಾಯಣ' ಅನುವಾದಿಸಿಕೊಟ್ಟರು. ಅದಕ್ಕೆ ಅವರಿಗೆ ಯಾದವ ಶಂಕರ ಜಾಮದಾರ (ಜಮಾದಾರ) ಮರಾಠೀ ಅನುವಾದದ ನೆರವು ದೊರೆಯಿತು. ಪುರಾಣಗಳ ವಿಷಯದಲ್ಲಿಯ ಅನೂನ ಶ್ರದ್ಧೆ ಇಲ್ಲಿಯೂ ವ್ಯಕ್ತವಾಗಿದೆ. ರಾಮಕಥಾ ಅಭ್ಯಾಸ ಹಾಗೂ ಲೇಖನದಿಂದ ತಮ್ಮ ಬದುಕು ಸಾರ್ಥಕವಾಯಿತು. ಎಂದಿದ್ದಾರೆ.

***

೧೯೨೬-೧೯೨೯

# ಸಂಚಾರೀ ಮಾರಾಟಗಾರ

ಈ ಎಂಟು ವರ್ಷಗಳ ಗ್ರಂಥೋದ್ಯಮದಲ್ಲಿ ಗಳಗನಾಥರು ಗಳಿಸಿದುದು ಸುಮಾರು ೫೦ ಸಾವಿರ ರೂಪಾಯಿ!* ಆಗಿನ ಕಾಲದ ಯಾವ ಲೇಖಕ, ಪ್ರಕಾಶಕನಿಗೂ ಈ ಗಳಿಕೆ ಇದ್ದಿರಲಾರದು. ಆದರೆ ಅದೆಲ್ಲ ವೆಚ್ಚವಾಗಿ ಮೇಲೆ ಹನ್ನೆರಡು ಸಾವಿರದ ಸಾಲವಿದ್ದಿತು.

ಸಾಲ ಹೇಗಾಯಿತೆಂಬುದನ್ನು ಅವರ ವಾಣಿಯಿಂದಲೇ ತಿಳಿಯೋಣ:

"ಮಹಾಯುದ್ಧದ ಕಾಲ. ರೂಪಾಯಿಕೊಟ್ಟರೆ ಎರಡು ಸೇರು ಕಾಳು; ಕೇಳಿದ ಪದಾರ್ಥಗಳೆಲ್ಲ ಮಿತಿಮೀರಿ ತುಟ್ಟಿ, ಪಾಠಶಾಲೆಯ ನಲವತ್ತು ವಿದ್ಯಾರ್ಥಿಗಳ ಎರಡು ಹೊತ್ತಿನ ಊಟ, ಎಂಟು ಜನ ಪ್ರಾಧ್ಯಾಪಕರ ಮಾಸಾಶನದ ೨೦೦ ರೂ. ವೆಚ್ಚ, ಪ್ರಿಂಟಿಂಗ್ ಪ್ರೆಸ್ಸಿನ ನೌಕರರ ನೂರಾರು

---

* ಹಾಗೆಂದು ಗಳಗನಾಥರು ತಮ್ಮ ಗ್ರಂಥಗಳ ಜನಪ್ರಿಯತೆಯ ದುರುಪಯೋಗ ಮಾಡಿಕೊಂಡವರಲ್ಲ. ಆ ದುರುಪಯೋಗ ಎಂದರೆ ಬೆಲೆ ಹೆಚ್ಚುಮಾಡುವುದು. ಸದ್ಬೋಧ ಚಂದ್ರಿಕೆಯ ಚಂದಾಹಣ ಸುರುವಿಗೆ ಒಂದೇ ರೂಪಾಯಿ. ಮಾಧವಕರುಣಾ ವಿಲಾಸದಂತಹ ಬೃಹತ್ಕಾದಂಬರಿಯ ಬೆಲೆ ಕೇವಲ ಮೂರು ರೂಪಾಯಿ. 'ಇಂದಿರಾ' ಕಾದಂಬರಿಯ ವಿಮರ್ಶೆಯನ್ನು ಬರೆದರಷ್ಟೆ. ಅವರ ಬೆಲೆ ಹೆಚ್ಚಾಯಿತೆಂದು ಆಕ್ಷೇಪಿಸಿದ್ದಾರೆ. ಯಾರಾದರೂ ತಮ್ಮ ಗ್ರಂಥಗಳಿಗೆ ಹೆಚ್ಚು ಹಣ ಕೊಡಬಂದರೆ ಅದನ್ನವರು ತಕ್ಷಣ ಹಿಂತಿರುಗಿಸುತ್ತಿದ್ದರು.

ರೂಪಾಯಿ ಪಗಾರ, ತನ್ಮಧ್ಯೆ ೮ ಸಾವಿರ ರೂ.ಗಳನ್ನು ಕೊಟ್ಟು ಮುದ್ರಣದ ಸಾಧನಗಳನ್ನು ಕೊಳ್ಳಬೇಕಾದ ಪ್ರಸಂಗ, ಈ ಎಲ್ಲ ತಿಕ್ಕಾಟದಲ್ಲಿ ನನ್ನ ಇಬ್ಬರು ಹೆಣ್ಣುಮಕ್ಕಳ ಸಾಲಂಕೃತ ಕನ್ಯಾದಾನದ ಸುಯೋಗ. ಅಂದಬಳಿಕ ಕೇಳುವುದೇನು. ಹೊಳೆಯ ನೀರು ಏರಿದಂತೆ ಗಳಗನಾಥನ ಸಾಲವು ಭರದಿಂದ ಏರತೊಡಗಿತು. ಸಂಪಾದನದ ಬಹುದೊಡ್ಡ ಭಾಗವು ಪಾಠಶಾಲೆ, ಗೋಶಾಲೆಗಳಿಗಾಗಿ ವೆಚ್ಚವಾಗಿ ಹೋಗಿದ್ದಿತು. ಈ ದೀರ್ಘ ವೆಚ್ಚಕ್ಕಾಗಿ ಗಳಗನಾಥನು ಅಸೂಯೆಪಟ್ಟವನಲ್ಲ. ಅಥವಾ ನೀಗದಷ್ಟು ಸಾಲವಾದದ್ದಕ್ಕಾಗಿ ಆತನು ಎದೆಗುಂದಲಿಲ್ಲ. ಆತನ ಪಾಠಶಾಲೆ-ಸದ್ಗುರು ಮಾಸಪತ್ರಿಕೆಗಳು ಸಾಗುವ ಹಾಗೆ ಸಾಗಿದ್ದುವು. ಆದರೆ ಗಳಗನಾಥನ ಸತ್ವಪರೀಕ್ಷೆಗಾಗಿಯೇನೊ ಅನ್ನುವಂತೆ ಸಂಸ್ಕೃತ ಪಾಠಶಾಲೆ ಅಕಸ್ಮಾತ್ ನಿಂತುಬಿಟ್ಟಿತು. ಆಗಮಾತ್ರ ಗಳಗನಾಥನಿಗೆ ಪರಮಾವಧಿ ದುಃಖವಾಯಿತು."

-ಇದು ನಡೆದುದು ೧೯೨೩ನೆಯ ವರ್ಷದ ಆರಂಭಕ್ಕೆ. ಸದ್ಬೋಧ ಚಂದ್ರಿಕೆ ಹೊರಡುತ್ತಿದ್ದ ಕಾಲದಿಂದ ಗಳಗನಾಥರು ಆಗೀಗ ಕೈಗಡ ತರುತ್ತಲೆ ಇದ್ದರು. ಶೇಷಾಚಲಸ್ವಾಮಿಗಳಿದ್ದಾಗ ಪಾಠಶಾಲೆ - ಅನ್ನದಾನಗಳ ವೆಚ್ಚವು ಇವರ ಸ್ವಂತದ ಜವಾಬ್ದಾರಿಯಾಗಿರಲಿಲ್ಲ. ಹಾವೇರಿಯಲ್ಲಿ ಅದರ ಪೂರ್ಣ ಹೊಣೆ ಇವರ ಮೇಲೆಯೆ ಇದ್ದಿತು. ಗಳಿಕೆಯ ಮಾರ್ಗವೆಂದರೆ ಗ್ರಂಥ ಮಾರಾಟವೊಂದೇ. ಅಂತೂ ಹಣ ಸಾಲದೇಹೋಯಿತು.

ಗಳಗನಾಥರಿಗೆ ರಾ.ಬಾ. ಕರಂದೀಕರರನ್ನು ನೆನಪಿಗೆ ತರುವಂತೆ ಹಾವೇರಿಯಲ್ಲಿ ಮೋರೋಪಂತ ಅಭ್ಯಂಕರ ವಕೀಲರಿದ್ದರು. ಮೊದಲಿನಿಂದಲೂ ಅವರು ಗಳಗನಾಥರ ಹಿತೈಷಿಗಳು. ವ್ಯವಹಾರನಿಷ್ಠರಾದರೂ ಉದಾರಿಗಳು ಮತ್ತು ಧಾರ್ಮಿಕರು. ಹಾವೇರಿಯಲ್ಲಿ ಪಾಠಶಾಲೆಯನ್ನು ಆರಂಭಿಸಲು ಅವರು ಗಳಗನಾಥರಿಗೆ ಆರ್ಥಿಕ ನೆರವನ್ನು ನೀಡಿದ್ದರು. ಆಮೇಲೆ ಮತ್ತೊಮ್ಮೆ ಗಳಗನಾಥರು ಹೋದಾಗ ವಕೀಲರು "ನೀವು ಪಾಠಶಾಲೆಯನ್ನು ಒಂದು ಟ್ರಸ್ಟಿಗೆ ಒಪ್ಪಿಸಿರಿ. ಸುಳ್ಳೇ ಯಾಕೆ ಒದ್ದಾಡುತ್ತೀರಿ?" ಎಂದು ಹಿತವಚನವನ್ನು ಹೇಳಿದರು. ಗಳಗನಾಥರು 'ಅದಾಗದು, ಇದು ವೈದಿಕ ಪಾಠಶಾಲೆ. ಇದಕ್ಕೆ ವ್ಯವಹಾರ ಸ್ವರೂಪ ಕೊಡಲಾರೆ. ಹಣ ಸಂಪಾದಿಸಿ ಸಂಸ್ಥೆ ಮಾಡುವ ಉದ್ದೇಶ ನನ್ನದಲ್ಲ. ಸರಸ್ವತಿಯು ನನ್ನಿಂದ ಗ್ರಂಥ ಬರೆಯಿಸುತ್ತಾಳೆ. ಪಾಠಶಾಲೆಗೆ ಹಾಕಿಸುತ್ತಾಳೆ' ಎಂದರಂತೆ. ವಕೀಲರಿಗೆ ಇದು ಕೊನೆಬಾಳುವ ಮಾತಲ್ಲವೆಂದು

ಅನಿಸಿದುದು ಸ್ವಾಭಾವಿಕ. 'ಟ್ರಸ್ಟ್ ಮಾಡದೇ ಇದ್ದರೆ ನನ್ನಿಂದ ಧನಸಹಾಯ ಸಿಗದು. ಕೊಟ್ಟ ಹಣವನ್ನೂ ವಾಪಸು ಕೊಡಬೇಕಾದೀತು' ಎಂದು ಬಿರುಸಾಗಿ ಹೇಳಿದರು.

ಆಗ ಹೊರಟುಹೋದ ಗಳಗನಾಥರು ಕೆಲದಿನ ತಡೆದು ಮರಳಿಬಂದರು. ಈ ಸಲ ವಕೀಲರಿಂದ ತಂದಿದ್ದ ಅಸಲಿನ ಹಣ ವಾಪಸು ಮಾಡಲೆಂದು ಬಂದಿದ್ದರು! ಅಭ್ಯಂಕರ ವಕೀಲರು ಪಶ್ಚಾತ್ತಾಪಪಟ್ಟು ಆ ಹಣವನ್ನು ಇಸಿದುಕೊಳ್ಳದೇ, ಒಳಗಿನಿಂದ ಹಣ ತಂದುಕೊಡುತ್ತ -

"ನಿಮ್ಮ ದೃಢನಿಶ್ಚಯವೂ ಅವಿರಾಮವಾದ ಉದ್ಯೋಗಶೀಲತೆಯೂ ಹೆಚ್ಚಿನವು. ನೀವು ಹೀಗೆಯೇ ಧೈರ್ಯದಿಂದ ಕೆಲಸ ಮಾಡಿರಿ. ಪ್ರಸಂಗಬಿದ್ದರೆ ಮತ್ತೆ ಸಹಾಯ ಮಾಡುವೆವು" ಎಂದು ಹೇಳಿ ಕಳುಹಿಸಿದರು.

ಈ ಉತ್ತೇಜನಪರವಾದ ಮಾತನ್ನು ಒಳಗೊಂಡಿರುವ 'ಮಾಧವ ಕರುಣಾ ವಿಲಾಸ'ದ ಪ್ರಸ್ತಾವನೆಯಲ್ಲಿ (ಅಕ್ಟೋಬರ್ ೧೯೨೩) ಸಾಲದ ಇನ್ನೂ ಕೆಲವು ವಿವರಗಳಿವೆ.

'ಹನ್ನೆರಡು ಸಾವಿರ ರೂಪಾಯಿ ಸಾಲದ ಮೂಲಕ ಈಗ ಮೂರು ವರ್ಷಗಳಿಂದ ತನ್ನ ಅಸ್ತಿತ್ವದ ಸ್ವಾತಂತ್ರ್ಯವನ್ನೇ ಕಳೆದುಕೊಂಡ ನಾನು, ನನ್ನ ಧನಕೊ ಜನರ ಧರ್ಮೌದಾರ್ಯ. ಸೌಜನ್ಯಗಳಿಗಾಗಿ ಅವರನ್ನು ಅಭಿನಂದಿಸದೇ ಇರಲಾರೆನು. ನನ್ನ ಮುಖ್ಯ ಧನಕೋಗಳೆಂದರೆ, ಶ್ರೀ.ಸ್ವ. ಗಂ.ಭಾ. ರಾಧಾಬಾಯಿ. ಕೊಂ. ರಾವಜೀರಾವ್ ಕರಂದೀಕರರ ಗುರು ಪತ್ನಿಯವರು - ೬,೦೦೦ ರೂ. ಸಾಲ ಕೊಟ್ಟವರು ಮ.ರಾ.ರಾ. ಮೋರೋಪಂತ ಅಭ್ಯಂಕರ ವಕೀಲ ೪,೦೦೦ ರೂಪಾಯಿ ಕೊಟ್ಟವರು - ಎರಡನೆಯವರು. ಮ.ರಾ.ರಾ. ಹಣಮಂತನಾಯಕ ಬಾದಾಮಿ ಇವರು ಬೇಡಿದಾಗ ಬೇಡಿದಷ್ಟು ರೂಪಾಯಿ ಕೊಡುವವರು! ಇವರಲ್ಲದೇ ಸರಾಸರಿ ೧,೦೦೦ ರೂಪಾಯಿ ಸಾಲಕೊಟ್ಟ ಮಹನೀಯರು ಮೂವರಿರುವರು. ಈ ಆರು ಜನರಲ್ಲಿ ಒಬ್ಬರಾದರೂ ಈವರೆಗೆ ಅಸಲನ್ನಂತೂ ಇರಲಿ, ಬಡ್ಡಿಯನ್ನೂ ಕೇಳಿದವರಲ್ಲ.

.....ಈ ಪಿಲ್ಲಿ ಪುಣ್ಯವಂತರು ಸಾಲಗಾರನಾದ ನನಗೆ ಹಣಕ್ಕಾಗಿ ತರಾತ ಮಾಡಿ ನನ್ನ ಚಿತ್ತವನ್ನು ಚಂಚಲವಾಗಿ ಮಾಡಿದ್ದರೆ ನಾನು ಈಗ ಎರಡು ವರ್ಷಗಳ ಅವಧಿಯಲ್ಲಿ ಸರಾಸರಿ ೧,೬೦೦ ಪುಟದ ಮೂರು

ಪುಸ್ತಕಗಳನ್ನು ಬರೆದು ಸ್ವಂತದ ಪ್ರೆಸ್ಸಿನಲ್ಲಿ ಪ್ರಿಂಟು ಮಾಡಿಸುವುದು ಸಾಧ್ಯವಿದ್ದಿಲ್ಲ... ಮ.ರಾ.ರಾ. ಅಭ್ಯಂಕರ ವಕೀಲರ ಸದ್ಗುಣಗಳ ಅನುಭವ ಪಡೆದು ಕೃತಜ್ಞನಾದ ನಾನು ಈ ಕಾದಂಬರಿ ರೂಪದ ಅಲ್ಪಕೃತಿಯನ್ನು ಅವರಿಗೆ ಅತ್ಯಾದರದಿಂದ ಕಾಣಿಕೆಯಾಗಿ ಅರ್ಪಿಸಿರುವೆನು.'

ಇನ್ನೊಬ್ಬ 'ಧನಕೋ' ಆದ ಶ್ರೀಮತಿ ಕರಂದೀಕರರಿಗೆ 'ತುಲಸೀ ರಾಮಾಯಣ'ವನ್ನು ಅರ್ಪಿಸಿದ್ದಾರೆ. ಅದರ ಪ್ರಸ್ತಾವನೆಯಲ್ಲಿ – ಋಣಭಾರದ ನೆವದಿಂದ ಇಂಥ ಪಲವು ಪುಸ್ತಕಗಳು ಶ್ರೀ ಗುರುಪ್ರೇರಣೆಯಿಂದ ನನ್ನ ಮುಖಾಂತರ ಬಡಬಡ ಹೊರಬೀಳಬೇಕೆಂದು ದೇವರ ಸಂಕೋಚವಿರುವುದೋ ಅನ್ನುವಂತೆ ಸಾಲವು ತೀರದೇ ಇನ್ನು ಮತ್ತೆ ಯಾವ ಪುಸ್ತಕ ಬರೆಯಬೇಕೆಂಬ ಆತುರತೆ ನನ್ನಲ್ಲಿ ಹೆಚ್ಚುತ್ತಿರುವದು. ಇಂಥ ಸದ್ಗ್ರಂಥಗಳ ವ್ಯವಸಾಯದಿಂದ ನನ್ನ ಆತ್ಮಕ್ಕಾದ ಸುಸಂಸ್ಕಾರಕ್ಕಾಗಿ ನಾನು ನನ್ನ ಋಣಭಾರದ ವಿಷಯದಲ್ಲಿ ಅತ್ಯಂತ ಕೃತಜ್ಞನಾಗಿರುವುದು ಅವಶ್ಯವು ಎಂದಿದ್ದಾರೆ. ತಮ್ಮ ಪ್ರಿಯ ಕನ್ನಡಿಗರು ಈ ಸಾಲವನ್ನು ತೀರಿಸುವುದಕ್ಕೆ ಸಹಾಯವಾಗುವುದಲ್ಲದೆ ಪತ್ರಿಕೆ ಮತ್ತು ಪಾಠಶಾಲೆಗಳನ್ನು ಪುನಃ ಆರಂಭಿಸಲು ನೆರವಾಗುವರೆಂದು ಗಳಗನಾಥರು ನೆರೆನಂಬಿದ್ದರು.

ಮೊದಲಿನ ವೈಭವದಿಂದಲ್ಲವಾದರೂ ಪಾಠಶಾಲೆಯು ಕೆಲವು ವರ್ಷಗಳ ಅನಂತರ ಆರಂಭವಾಯಿತು. ಆದರೆ ಮಾಸಪತ್ರಿಕೆಯನ್ನು ಹೊರಡಿಸುವುದಾಗಲೆ ಇಲ್ಲ. ಅದರ ಮೇಲಿನ ಹಂಬಲ ಮಾತ್ರ ಕಡಿಮೆಯಾಗಲಿಲ್ಲವೆಂಬಂತೆ, ತಮ್ಮ ವಿಳಾಸವನ್ನು ಕೊನೆಯುವರೆಗೂ 'ಸದ್ಗುರು ಆಫೀಸ್' ಎಂದೇ ಬರೆಯುತ್ತಿದ್ದರು.

ಸಾಲವೊ ಹನುಮನ ಬಾಲದಂತೆ ಬೆಳೆಯುತ್ತ ನಡೆಯಿತು. ಅದರ ದುಷ್ಪರಿಣಾಮವೆಂದರೆ ಬರೆಯುವುದನ್ನೇ ಕೆಲವು ಕಾಲ ನಿಲ್ಲಿಸಿಬಿಟ್ಟರು – ಮತ್ತು ತಮ್ಮ ವಾರ್ಧಕ್ಯದ ಕಡೆಗೆ ಗಮನಕೊಡದೇ ಸ್ವತಃ ಪುಸ್ತಕಗಳನ್ನು ಹೊತ್ತುಕೊಂಡು ಮಾರಾಟಕ್ಕೆಂದು ಹೊರಬಿದ್ದರು. ಅದಕ್ಕಾಗಿ ಈ ಓಂದೆ ಮುದ್ರಿಸಿದ ಪುಸ್ತಕಗಳ ಸುಮಾರು ೪೦ ಸಾವಿರ ರೂ. ಬೆಲೆ ಬಾಳುವ ಸಂಗ್ರಹ ಹೇಗೂ ಇದ್ದಿತು.

ಲೇಖನ, ಪ್ರಕಾಶನ ಮತ್ತು ಮಾರಾಟ – ಇವು ಮೂರೂ ಭಾಷಾ ಸೇವೆಯ ಅಂಗಗಳೇ. ಅದರೆ ಶ್ರೇಷ್ಠಮಟ್ಟದ ಲೇಖಕನೊಬ್ಬ ತನ್ನ ಲೆಕ್ಕಣಿಕೆ

ಯನ್ನು ಬದಿಗಿರಿಸಿ, ಭಾಷಾಸೇವೆ, ವಿದ್ಯಾದಾನ ಕಾರ್ಯಗಳಿಗಾಗಿ ತನ್ನವೇ ಪುಸ್ತಕಗಳನ್ನು ಮಾರಾಟ ಮಾಡಲೆಂದು ಹೊರಬಿದ್ದ ಪ್ರಸಂಗವು ಕನ್ನಡ ಸಾಹಿತ್ಯೇತಿಹಾಸದಲ್ಲಿಯ ಒಂದು ಅಪೂರ್ವ ಘಟನೆಯಾಗಿದೆ. ಇದಕ್ಕಾಗಿ ಗಳಗನಾಥರು ಬೇಸರಿಸಲಿಲ್ಲ. 'ಇಂಥ ಸುಯೋಗವನ್ನು ಸರ್ವೇಶ್ವರನಾ ಒದಗಿಸಿಕೊಟ್ಟದ್ದಕ್ಕಾಗಿ ನನಗೆ ಪರಮಾನಂದವಾಗಿರುವುದು. ಯಾಕೆಂದರೆ ಪ್ರಾಮುಖ್ಯವಾಗಿ ಪುಸ್ತಕ ಮಾರುವಾಗ ನನಗಾದ ಅನುಭವದ ಲಾಭವನ್ನು ನಾನು ಇಷ್ಟೇ ಎಂದು ಹೇಳುವ ಹಾಗಿಲ್ಲ' ಎಂದಿದ್ದಾರೆ. ಅವರಿಗೆ ಬೇಸರ ಬರಿಸಿದ ವಿಷಯವೆಂದರೆ ತಾವು ಬರೆಯುವುದನ್ನೇ ಬಿಟ್ಟದ್ದು. 'ಇದೂ ಒಂದು ಲೋಕಸೇವೆಯೆಂದು ತಿಳಿದು ಈಶ್ವರಾಧೀನವೆಂಬ ಭಾವದಿಂದ ನಿಸ್ಪೃಹರಾಗಿ ಲೇಖನಕಾರ್ಯ ಸಾಗಿಸುವವರು ಶ್ರೇಷ್ಠ ಲೇಖಕರು. ಆದರೆ ಅಂಥ ಯೋಗ್ಯತೆಯಂತೂ ಇರಲಿ, ಹೊಸ ಪುಸ್ತಕಬರೆದರೆ ಸದ್ಯ ರುವಷ್ಟು ಹೊಸ ದುಡ್ಡು ಕೊಡುವನೆಂದು ತಿಳಿಯದೇ ಸಾಲವಾಯಿತಲ್ಲ ಎಂಬ ಚಿಂತೆಯಿಂದ ಬರೆಯುವದನ್ನೇ ಬಿಟ್ಟುಕೊಟ್ಟದ್ದು ಗಳಗನಾಥನಲ್ಲಿಯ ಉದಾತ್ತಗುಣದ ಕೊರತೆಯೇ ಸರಿ.'

ಈ ಬಗೆಯ ಅವರ ಸಂಚಾರದ ಅಧಿಕೃತ ಉಲ್ಲೇಖವು **ಸಂಸಾರಸುಖ** ಕಾದಂಬರಿಯಲ್ಲಿ ಮೊದಲಿಗೆ ದೊರೆಯುತ್ತದೆ. ತಮ್ಮ 'ಪುಸ್ತಕಗಳಿಗಾಗಿ ಲೋಕಾಶ್ರಯ ಪಡೆಯಲು' ಗದುಗಿಗೆ ಹೋದರಂತೆ. ಅಲ್ಲಿ ವಾಸವಾಗಿದ್ದ ಮುಸಿಗೇರಿ ಕುಲಕರ್ಣಿಯವರಾದ ನೀಲಕಂಠರಾಯರು ಗಳಗನಾಥರನ್ನು ಸಕುಟುಂಬವಾಗಿ ೩-೪ ತಿಂಗಳು ತಮ್ಮ ಮನೆಯಲ್ಲಿಯೇ ನಿಲ್ಲಿಸಿಕೊಂಡರು. ಅವರ ಉಪಕಾರಸ್ಮರಣೆಗಾಗಿ ಗಳಗನಾಥರು ಆ ಕಾದಂಬರಿಯನ್ನು ನೀಲಕಂಠ ರಾಯರಿಗೇ ಸಮರ್ಪಿಸಿದ್ದಾರೆ.

ಮುಂದುವರಿದ ಈ ಸಂಚಾರೀ ವ್ಯಾಪಾರದಿಂದ, ಧಾರವಾಡ ಜಿಲ್ಲೆಯೊಂದರಲ್ಲಿಯೇ ಎಂಟು ಸಾವಿರ ರೂ.ಗಳ ಸಾಲವು ತೀರಿತು! ಅನಂತರ ಅವರು ಇತರ ಜಿಲ್ಲೆಗಳಲ್ಲಿಯೂ ಸಂಚರಿಸಿದರು. ಈ ನಿಮಿತ್ತದಿಂದ ನಾಡಿನಾದ್ಯಂತ ಜನರಿಗೆ ಗಳಗನಾಥರ ಸಕೃದ್ದರ್ಶನವಾಗತೊಡಗಿತು. 'ಯಾರು ಈ ಗಳಗನಾಥರು' ಎಂಬ ಜನತೆಯ ಕುತೂಹಲವನ್ನು ತಣಿಸಿತು.

ಕ್ಷಾತ್ರವೃತ್ತಿಯನ್ನು ಬಿಂಬಿಸುವ ಅವರ ಬರವಣಿಗೆಯನ್ನು ಓದಿದವರಿಗೆ ಗಳಗನಾಥರ ವ್ಯಕ್ತಿತ್ವವು ಭವ್ಯವಾಗಿರಬೇಕೆನಿಸುವುದು. ಆದರೆ ಅವರ ರೂಪ,

ನಡೆ ಮತ್ತು ನುಡಿಗಳು ತೀರ ಸಾದಾ ಹಾಗೂ ಸೌಮ್ಯವಾಗಿದ್ದುವು. ಮತ್ತು ಸನಾತನ ಧರ್ಮವನ್ನು ಪ್ರತಿಬಿಂಬಿಸುತ್ತಿದ್ದುವು. ಬಗಲಗಸೆಯ ಅಂಗಿ, ಧೋತರ, ರುಮಾಲು ಮತ್ತು ಕಿರಿಯಂಚಿನ ಉತ್ತರೀಯ, ಹಣೆಯಮೇಲೆ ಅಡ್ಡನಾಮ ಇವು ಅವರ ವೇಷ-ಭೂಷಣಗಳು. ಮುಖಮುದ್ರೆಯೂ ಅಷ್ಟೇ ಸಾದಾ: ನರೆಗೂದಲಿನ ಹುಬ್ಬು-ಮೀಸೆ, ಸುಕ್ಕುಗಟ್ಟಿದ ಚರ್ಮ, ತಿಳಿಗಪ್ಪಿನ ಬಣ್ಣ. ಆದರೆ ಸಂಭಾಷಣೆಗೆ ತೊಡಗಿದರೆಂದರೆ, ಅವರ ವಿಶುದ್ಧ ವಿಚಾರ ಸರಣಿ, ಜನತೆಯ ಬಗ್ಗೆ ಕಳಕಳಿ ಹಾಗೂ ಧಾರ್ಮಿಕ ನಿಷ್ಠೆಗಳು ವ್ಯಕ್ತವಾಗಿ, ಅವರ ಯೋಗ್ಯತೆಯ ಕಲ್ಪನೆ ಬರುವಂತಿದ್ದಿತು.

ತಮ್ಮ ಸಾಲ ತೀರುವೆಗ ಮೈಸೂರು ಸಂಸ್ಥಾನವು ಹೆಚ್ಚು ಅನುಕೂಲ ವೆಂದು ಗಳಗನಾಥರಿಗೆ ಅನಿಸಿತು. ಸದ್ಬೋಧಚಂದ್ರಿಕೆಗಿದ್ದ ೭ ಸಾವಿರ ಚಂದಾದಾರರಲ್ಲಿ ೩ ಸಾವಿರ ಜನ ಮೈಸೂರವರೇ ಇದ್ದುದನ್ನು ನೆನೆದುಕೊಂಡರು. ಬೆಂಗಳೂರಿಗೆ ಕಲ್ಯಾಣಪುರಿಯೆಂಬ ಮತ್ತೊಂದು ಹೆಸರು ಇರುತ್ತದೆಂಬುದು ಗೊತ್ತಾದಾಗ ತಮ್ಮಂತಹ ದಿನ ಹೋದ, ದಣಿದ ಲೇಖಕರ ಕಲ್ಯಾಣವನ್ನು ಕಲ್ಯಾಣಪುರಿಯು ನಿಶ್ಚಯವಾಗಿ ಮಾಡುವುದೆಂಬ ನಂಬಿಗೆಯಿಂದ ಮೂವರನ್ನು ಸಹಾಯಕ್ಕೆಂದು ಕರೆದುಕೊಂಡು ಬೆಂಗಳೂರಿಗೆ ಬಂದರು (೧೯೨೭, ಅಕ್ಟೋಬರ್).

ಮೊದಲ ೮-೧೦ ದಿನಗಳಲ್ಲಿ ಅವರಾಗಲೀ ಸಂಗಡಿಗರಾಗಲೀ ಪುಸ್ತಕ ವ್ಯಾಪಾರದಲ್ಲಿ ಯಶಸ್ವಿಯಾಗಲಿಲ್ಲ. ಊರಿಗೆ ಹಿಂತಿರುಗುವ ಯೋಚನೆಯಿಂದ, ಸಂಗಡಿಗರು 'ಗಾಡಿಯ ವೆಚ್ಚದ ಮಟ್ಟಿಗೆ ಯಾರಿಗಾದರೂ ಬುಕ್ ಸೆಲ್ಲರರಿಗೆ ಕೊಟ್ಟುಬಿಡುವ' ಎಂಬ ಸೂಚನೆಯನ್ನು ಮಾಡಿದರು. ಮರುಕ್ಷಣ ಗಳಗನಾಥರ ಛಲಗಾರಿಕೆ ಜಾಗೃತವಾಯಿತು. 'ನಾನು ಬೆಂಗಳೂರಿನಲ್ಲಿ ಒಂದು ಸಾವಿರ ರೂಪಾಯಿಗಳನ್ನಾದರೂ ಸಂಪಾದಿಸದೇ ಊರಿಗೆ ಬರಲಿಕ್ಕಿಲ್ಲ. ನೀವು ಬೇಕಾದರೆ ಹೋಗಬಹುದು' ಎಂದರು. ಮುಂದಿನ ಮೂರುವರೆ ತಿಂಗಳಲ್ಲಿ ಎಲ್ಲರೂ ಸೇರಿ ಎರಡು ಸಾವಿರ ರೂ. ಬೆಲೆಯ ಪುಸ್ತಕಗಳನ್ನು ಮಾರಾಟಮಾಡಿಬಿಟ್ಟರು.

ಅದರಲ್ಲಿ ಗಳಗನಾಥರು ಸ್ವತಃ ಮಾರಾಟಕ್ಕೆ ಹೊರಟದ್ದು ಒಂದೆರಡು ದಿನ ಮಾತ್ರ. ಬೆಂಗಳೂರಿನ ವಾಸ್ತವ್ಯದ ಕಾಲದಲ್ಲಿ ಅವರು ಮಾಡಿದ ಮಹತ್ವದ ಕೆಲಸವೆಂದರೆ ಒಂದಲ್ಲ ನಾಲ್ಕು ಪುಸ್ತಕಗಳನ್ನು ಬರೆದುದು. ಅವುಗಳಲ್ಲಿ ರಾಣೀ **ಮೃಣಾಲಿನೀ** ಮತ್ತು **ರಾಣಾ ರಾಜಸಿಂಹ** ಎಂಬ ರಜಪೂತ

ಕಾದಂಬರಿಗಳನ್ನೂ, 'ಸದ್ಗುರು ಪ್ರಭಾವ'ವೆಂಬ ಆತ್ಮ ನಿರೂಪಣೆಯ ಪ್ರಬಂಧವನ್ನೂ ಬೆಂಗಳೂರಿನಲ್ಲಿಯೇ ಅಚ್ಚು ಹಾಕಿಸಿದರು. ಧಾರ್ಮಿಕತೇಜವೆಂಬ ಇನ್ನೊಂದು ಕಾದಂಬರಿ ಹಾಗೆಯೇ ಉಳಿಯಿತು - ಹಣದ ಅನನುಕೂಲತೆಯ ಮೂಲಕ 'ಸಂಪೂರ್ಣ ಪುಸ್ತಕ ಬರೆದು ಛಾಪಿಸದೇ ಉಳಿದದ್ದು ಇದೇ ಮೊದಲು' ಎಂಬುದಾಗಿ ಗಳಗನಾಥರು ಬೇಸರಪಟ್ಟರು.

ಹೀಗೆ ಒಂದೇ ಮಟ್ಟಿಗೆ ನಾಲ್ಕು ಪುಸ್ತಕಗಳನ್ನು ಬರೆಯಲು ಅಪ್ರತ್ಯಕ್ಷವಾಗಿ ಪ್ರೇರೇಪಿಸಿದವರು ಬೆಂಗಳೂರಿನ ಗಣ್ಯ ಕನ್ನಡಿಗರು. ಕಳೆದ ೨೦ ವರ್ಷಗಳಿಂದ ಸಾಹಿತ್ಯ ಕೃಷಿಯಲ್ಲಿ ಅವ್ಯಾಹತವಾಗಿ ತೊಡಗಿದ್ದ ಗಳಗನಾಥರ ಬಗ್ಗೆ ಸ್ವಾಭಾವಿಕವಾಗಿಯೇ ಅವರಲ್ಲನೇಕರಲ್ಲಿ ಆದರ ಭಾವ ಮೂಡಿದ್ದಿತು. ಗಳಗನಾಥರು ಆ ಮೊದಲು ಬೆಂಗಳೂರು-ಮೈಸೂರುಗಳಿಗೆ ಹೋದವರೂ ಅಲ್ಲ. ಅವರನ್ನು ಭೆಟ್ಟಿಯಾಗುವ ಯೋಗ ಬೆಂಗಳೂರಿನ ಲೇಖಕ ವರ್ಗಕ್ಕೆ ರೋಚಕವೆನಿಸಿತು. ಕೆಲವೆಡೆ ಅವರನ್ನು ಭಾಷಣಕ್ಕಾಗಿ ಆಮಂತ್ರಿಸಲಾಗಿದ್ದಿತು. ಭಾಷಣಕ್ಕಾಗಿ ಆಯ್ದುಕೊಂಡ ವಿಷಯ 'ವಿವೇಕಾನಂದರು ವೈದಿಕರಿಗೆ ಯಾರು?' 'ಗೀತೆಯ ಶ್ರವಣಾಧಿಕಾರ' ಇತ್ಯಾದಿ. ಭಗವದ್ಗೀತೆಯು ಅವರ ನಿತ್ಯ ಪಾರಾಯಣದ ಗ್ರಂಥವೇ ಆಗಿದ್ದಿತು.

ಸುಪ್ರಸಿದ್ಧ ಕಲಾವಿದರಾದ ಅ.ನ.ಸುಬ್ಬರಾಯರು ಗಳಗನಾಥರನ್ನು ತಮ್ಮ ಕಲಾಮಂದಿರಕ್ಕೆ ಬರಮಾಡಿಕೊಂಡು ಸನ್ಮಾನ ಮಾಡಿದರು. ಆ ದಿನ ಸನಾತನ ಧರ್ಮದ ಮೇಲ್ಮೆ ಮತ್ತು ಕನ್ನಡ ನುಡಿಯ ಪುನರುದ್ಧಾರ - ಇವುಗಳ ಕುರಿತು ಮಾತನಾಡಿದರು. ಅವರ ಮಾತುಗಾರಿಕೆ ಅತ್ಯಂತ ಸರಳ. ಅತ್ಯಂತ ಶ್ರದ್ಧೆಯಿಂದ ವಿಷಯವನ್ನು ಮಂಡಿಸುತ್ತಿದ್ದುದರಿಂದ ಅವರ ಭಾಷಣಗಳು ಶ್ರೋತೃಗಳ ಮನಸ್ಸನ್ನು ಸೆಳೆಯುತ್ತಿದ್ದವು. ಆದರೆ ವಾದಕ್ಕೆ ನಿಂತರೆಂದರೆ ಎಲ್ಲಿಲ್ಲದ ರಭಸ ಉಕ್ಕೇರುತ್ತಿತ್ತು.

ಪೂರ್ವ ಪರಿಚಯಸ್ಥರಲ್ಲಿ ಮೊದಲ ಭೆಟ್ಟಿ ಚಿದಂಬರಯ್ಯನವರದ್ದು, ಬೆಂಗಳೂರಿನಲ್ಲಿರುವ ಕನ್ನಡ ವಿದ್ವಾಂಸರು ಯಾರೆಂಬುದನ್ನು ಅವರಿಂದ ಅರಿತುಕೊಂಡರು. ಟಿ.ಎಸ್. ವೆಂಕಣ್ಣಯ್ಯನವರು ಧಾರವಾಡದ ಮಿಶನ್ ಸ್ಕೂಲಿನಲ್ಲಿ ಅಧ್ಯಾಪಕರಿದ್ದಾಗಿನಿಂದ ಗಳಗನಾಥರಿಗೆ ಅವರ ಪರಿಚಯವಿದ್ದಿತು. ಅಲ್ಲದೇ ಅಗಡಿಯ ಶೇಷಾಚಲರ ಸಾನ್ನಿಧ್ಯದಲ್ಲಿ ಕೂಡಿಯೇ ಕೆಲಕಾಲ ಕಳೆದಿದ್ದರು.

ವೆಂಕಣ್ಣಯ್ಯನವರು ತಮ್ಮ ಸ್ನೇಹಿತರೆದುರಿಗೆ ಗಳಗನಾಥರನ್ನು ಪ್ರಶಂಸಿಸುವದರಲ್ಲಿ ಧಾರಾಳರು.

ಅದರಂತೆ ಕರ್ಪೂರ ಶ್ರೀನಿವಾಸರಾಯರ ಮತ್ತು ಬೆಳ್ಳಾವೆ ವೆಂಕಟನಾರಣಪ್ಪನವರ ಪೂರ್ವಪರಿಚಯವೂ ಇದ್ದಿತು. ಇಂಜಿನಿಯರ್ ಶ್ರೀನಿವಾಸ ರಾಯರ ಔದಾರ್ಯ, ಧರ್ಮನಿಷ್ಠೆಗಳು ಉತ್ತರ ಕರ್ನಾಟಕದಲ್ಲಿಯೂ ತಿಳಿದು ಬಂದ ಅಂಶಗಳಾಗಿದ್ದವು. ಅವರು ಹಾವೇರಿ, ಧಾರವಾಡಗಳಲ್ಲಿ ಮಾಡಿದ್ದ ಧರ್ಮಪರ ಭಾಷಣಗಳನ್ನು ಕೇಳಿ ಗಳಗನಾಥರು ಮೆಚ್ಚಿದ್ದರು. ಬೆಳಗಾವಿಯ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಈ ಮಹನೀಯದ್ವಯರ ಗುರುತು ಆಗಿದ್ದಿತು. ಕನ್ನಡ ಭಾಷೆಯ ಏಕೀಕರಣವು ವೆಂಕಟನಾರಣಪ್ಪನವರ ಅತ್ಯಂತಿಕ ಹಂಬಲದ ವಿಷಯ. ಅದನ್ನು ಈಗ ಗಳಗನಾಥರೊಡನೆ ಚರ್ಚಿಸಿದರು. 'ಒಬ್ಬ ದೊಡ್ಡ ಭಾಷಾ ಪಂಡಿತನು ನಾನೆಂಬಂತೆ ಇವರು ನನ್ನೊಡನೆ ಕಸರಿಲ್ಲದೇ ಮಾತಾಡುವುದನ್ನು ನೋಡಿ ನಾನೊಬ್ಬ ಗಣ್ಯ ಮನುಷ್ಯನಿದ್ದೇನೆಂಬ ಅಹಂಕಾರವು ನನ್ನಲ್ಲಿ ಉಂಟಾಯಿತು' ಎಂದಿದ್ದಾರೆ ಗಳಗನಾಥರು. ಡಿ.ಕೆ. ಭಾರದ್ವಾಜರ ಪೂರ್ವಪರಿಚಯವು ಗಳಗನಾಥರಿಗಿದ್ದುದರ ಪ್ರಯೋಜನವೆಂದರೆ ಭಾರದ್ವಾಜರು ಬೇರೆ ವಿದ್ವಾಂಸರ ಕಡೆಗೆ ಇವರನ್ನು ಕರೆದುಕೊಂಡು ಹೋಗುವ ಕೆಲಸವನ್ನು ತಾವಾಗಿ ಒಪ್ಪಿಸಿಕೊಂಡುದು.

ರಾವಬಹಾದ್ದೂರ್ ಎಂ. ಶಾಮರಾಯರು ಆಗ ವಯೋವೃದ್ಧರು. ಗಳಗನಾಥರಿಗೆ ತಾವು ಮೂವತ್ತೈದು ವರ್ಷಗಳ ಹಿಂದೆ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದ ಕಾಲಕ್ಕೆ ಶಾಮರಾಯರಿಂದ ಬಹುಮಾನಗಳನ್ನು ಪಡೆದಿದ್ದುದರ ನೆನಪಾಯಿತು. 'ಈಗಲೂ ವಿದ್ಯಾರ್ಥಿಯಾಗಿಯೇ ಈ ಘನವಂತರ ದರ್ಶನ ಮಾಡಿಕೊಳ್ಳುವೆನಲ್ಲ' ಎಂಬ ಪವಿತ್ರ ಭಾವನೆಯಿಂದ ಗಳಗನಾಥರ ಹೃದಯ ಕಂಪಿಸಿತು. ಅದರಂತೆ ಆರ್. ನರಸಿಂಹಾಚಾರ್ಯರನ್ನು ಕಂಡಾಗ ಅವರು ಗಳಗನಾಥರನ್ನು ಕುರಿತು – 'ನಿಮ್ಮ ಕೀರ್ತಿಯನ್ನು ಕೇಳಿ ಕಿವಿ ತೃಪ್ತವಾದವು. ಹೊಟ್ಟೆಕಿಚ್ಚಿನಿಂದ ಜಗಳವಾಡುತ್ತಿದ್ದ ಕಣ್ಣು ತೃಪ್ತವಾದವು' ಎಂದು ಅಭಿಮಾನ ಪುರಸ್ಸರವಾಗಿ ಮಾತಾಡಿದರಂತೆ.

## ಗಳಗನಾಥ ಮಾಸ್ತರರು

'ನಾನು ಮತ್ತೊಮ್ಮೆ ಮಕರಸಂಕ್ರಮಣದ ದಿನ ನಮ್ಮ ಕಡೆಯ ಪದ್ಧತಿಯಂತೆ ಎಳ್ಳು ಸಕ್ಕರೆ ಕೊಡುವ ನೆವದಿಂದ ಆಚಾರ್ಯವರ್ಯರ ದರ್ಶನಕ್ಕಾಗಿ ಹೋಗಿದ್ದೆ. ಇಂಥ ದೊಡ್ಡವರೊಡನೆ ಹೆಚ್ಚು ಮಾತಾಡಲಿಕ್ಕೆ ಸಂಕೋಚಪಟ್ಟು ಮನೆಗೆ ಹೋಗಲಿಕ್ಕಾಗಿ ಅಪ್ಪಣೆ ಕೇಳಿಕೊಳ್ಳಲು ಆ ಗುರುಸ್ವರೂಪರು ಆದರದಿಂದ ನನ್ನನ್ನು ಕುಳ್ಳಿರಿಸಿಕೊಂಡು ರಸವತ್ತಾದ ಪಂಚಫಲಗಳನ್ನು ಆಶೀರ್ವಾದರೂಪವಾಗಿ ಕೊಟ್ಟು ನನ್ನ ಹೃದಯವನ್ನು ರಸವತ್ತಾಗಿ ಮಾಡಿದರು. ಈ ವಿಮರ್ಶನ ವಿಚಕ್ಷಣರ ವಿಮರ್ಶೆಗೆ ತಕ್ಕುದಾದ ಒಂದು ಗ್ರಂಥವನ್ನಾದರೂ ಇನ್ನು ಬೇಗನೆ ಬರೆಯಬೇಕೆಂಬ ಉತ್ಸಾಹವು ನನ್ನಲ್ಲಿ ಉಂಟಾಯಿತು' ಎಂಬುದಾಗಿ ನರಸಿಂಹಾಚಾರ್ಯರನ್ನು ಗಳಗನಾಥರು ನೆನೆದಿದ್ದಾರೆ.

ಎಸ್.ಜಿ. ಶಾಸ್ತ್ರಿಗಳವರ ಭೇಟಿಯ ಕಾಲಕ್ಕೆ ನಡೆದ ಸಂಭಾಷಣೆ ನೋಡುವ ಹಾಗಿದೆ:

ಶಾಸ್ತ್ರಿಗಳು – ನೀವು ಇಲ್ಲಿ ಇನ್ನು ಒಂದು ತಿಂಗಳು ಇರುವಿರಾ?

ಗಳಗನಾಥರು – ಹೌದು.

ಶಾಸ್ತ್ರಿ – ಈ ಪುಸ್ತಕವನ್ನು ನಿಮ್ಮ ಮುಂದೆ ಓದಬೇಕಾಗಿದೆ. ನಿಮ್ಮ ಮನೆಗೆ ಬರಬೇಕೆಂದಿದ್ದೇನೆ.

ಗಳಗನಾಥರು – ನನ್ನ ಮನೆ ಸಣ್ಣದು, ಕುಳಿತುಕೊಳ್ಳಲು ಸ್ಥಳವೂ ಇಲ್ಲ. ಅಪ್ಪಣೆಯಾದಾಗ ನಾನೇ ಬರುವೆನು.

ಶಾಸ್ತ್ರಿಗಳು – ನಿಮ್ಮಂಥವರ ಮನೆಗೆ ಬರುವದು ದೇವರ ಗುಡಿಗೆ ಬಂದಹಾಗೆ.

ಗಳಗನಾಥರು – ನನ್ನನ್ನು ಸಂಕೋಚಗೊಳಿಸಬಾರದು.

ಶಾಸ್ತ್ರಿಗಳು – ಉಂಹೂಂ. ನಿಮ್ಮ ಮನೆಗೆ ಬರುವ ಪುಣ್ಯವನ್ನು ಒದಗಿಸಿಕೊಡಿ.

ಗಳಗನಾಥರು ಕಂಡ ಇನ್ನಿತರರು ಅವರಿಗಿಂತ ವಯಸ್ಸಿನಲ್ಲಿ ಚಿಕ್ಕವರು. ಕನ್ನಡದ ಸರಕಾರೀ ಭಾಷಾಂತರಕಾರರಾಗಿದ್ದ ಎ. ನರಸಿಂಹಯ್ಯ, ಗೌರ್ನಮೆಂಟ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಎನ್. ಶೇಷಾದ್ರಿಶರ್ಮ ಇವರೊಡನೆ ಗಳಗನಾಥರು

ಬಿಚ್ಚು ಮನಸ್ಸಿನಿಂದ ಮಾತನಾಡುತ್ತಿದ್ದರಂತೆ. ಎ.ಆರ್. ಕೃಷ್ಣಶಾಸ್ತ್ರಿಗಳು ಗಳಗನಾಥರ ಎರಡೂ ಪತ್ರಿಕೆಗಳಿಗೆ ಅನೇಕ ವರ್ಷ ಚಂದಾದಾರರಾಗಿದ್ದರು. ಅವರಿಬ್ಬರೊಳಗೆ ಪತ್ರವ್ಯವಹಾರವೂ ಇದ್ದಿತು.*

ತಮ್ಮ ಬೆಂಗಳೂರು ವಾಸ್ತವ್ಯದ ಕಾಲದಲ್ಲಿ ಗಳಗನಾಥರು ವಿಶೇಷವಾಗಿ ಜ್ಞಾಪಿಸಿಕೊಂಡ ಇಬ್ಬರು ತರುಣ ಲೇಖಕರೆಂದರೆ ತಿ.ತಾ. ಶರ್ಮ ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರರು. ಮೆಟ್ರಿಕ್ ಪರೀಕ್ಷೆಗೆ ಪಠ್ಯವಾಗಿದ್ದ ಗಳಗನಾಥರ 'ಧರ್ಮರಹಸ್ಯ'ವನ್ನು ಶರ್ಮರು ಬೆಂಗಳೂರಿನ ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳಿಗೆ ಬೋಧಿಸುವಾಗ ಮಾಡುತ್ತಿದ್ದ ವಿಮರ್ಶೆಯ ಮಾರ್ಮಿಕತೆಯನ್ನು ಗಳಗನಾಥರು ಮೆಚ್ಚಿದ್ದರು. ಇತಿಹಾಸದ ವಿಷಯದಲ್ಲಿ ಅವರಿಬ್ಬರೊಳಗೆ ವಿಚಾರವಿನಿಮಯ ನಡೆಯುತ್ತಿದ್ದಿತು. ಗಾಂಧೀಜಿಯವರ ಅಸ್ಪೃಶ್ಯತಾನಿವಾರಣೆಯ ಬಗ್ಗೆ ಗಳಗನಾಥರು ಅಹೋರಾತ್ರಿ ಚರ್ಚಿಸಿದರೆಂಬುದನ್ನು ತಿ.ತಾ. ಶರ್ಮರು ಈಗಲೂ ನೆನೆಯುತ್ತಾರೆ.

---

* ಟಿ.ಎಸ್. ವೆಂಕಣ್ಣಯ್ಯನವರು ತೀರಿಕೊಂಡಾಗ ಕೃಷ್ಣಶಾಸ್ತ್ರಿಗಳು ಗಳಗನಾಥರ ಪತ್ರಕ್ಕೆ ಬರೆದ ಉತ್ತರವನ್ನು ಪ್ರಾಸಂಗಿಕವಾಗಿ ಇಲ್ಲಿ ಕೊಡುತ್ತಿದ್ದೇವೆ.

"ಬೆಂಗಳೂರು,೩೧-೩-೧೯೩೯

"ಶ್ರೀಮಾನ್ ಗಳಗನಾಥರವರ ಸನ್ನಿಧಾನದಲ್ಲಿ ಕೃಷ್ಣಶಾಸ್ತ್ರಿಯ ವಿಜ್ಞಾಪನೆಗಳು. – ತಮ್ಮ ೨೧ನೇ ತಾರೀಖಿನ ಪತ್ರವೂ ಅದರೊಡನೆ ಕಳಿಸಿದ ಪಾರ್ಸಲೂ ಕೈಸೇರಿದುವು. ನಾನು ಊರಲ್ಲಿರಲಿಲ್ಲ. ಇವೊತ್ತು ಬೆಳಿಗ್ಗೆ ಬಂದೆ. ಶ್ರೀಮಾನ್ ವೆಂಕಣ್ಣಯ್ಯನವರ ಮರಣದಿಂದ ತಮಗೆ ಎಷ್ಟು ನಷ್ಟ ದುಃಖಗಳು ಆಗಿವೆಯೋ ಅಷ್ಟೇ ನನಗೂ ಆಗಿದೆ. ನಾನು ಅವರನ್ನು ಕಳೆದ ಮೂವತ್ತೈದು ವರ್ಷಗಳಿಂದ ಬಲ್ಲೆ. ಅವರು ನನ್ನ ಹಿರಿಯ ಅಣ್ಣನಂತಿದ್ದರು. ದೈವಸಂಕಲ್ಪಕ್ಕೆ ಮಾಡುವುದೇನು?.... ತಮ್ಮ ಮತ್ತು ತಮ್ಮ ಗ್ರಂಥಗಳ ಬಗ್ಗೆ ಇತ್ತ ಕಡೆ ತುಂಬ ಗೌರವವಿದೆ. ತಾವೂ ಅದನ್ನು ಬಲ್ಲವರಾಗಿದ್ದೀರಿ. ಆದ್ದರಿಂದ ಆದಷ್ಟು ಅನುಕೂಲವಾಗುವುದೆಂದು ನಂಬಬಹುದು. ತಮ್ಮ ವಿಶ್ವಾಸದ ಮಾತುಗಳಿಗೆ ಕೃತಜ್ಞನಾಗಿದ್ದೇನೆ. ಇತಿ ನಮಸ್ಕಾರಗಳು.

–ಎ.ಆರ್. ಕೃ."

'ತರುಣ' ಮಾಸ್ತಿಯವರ ಸಣ್ಣಕತೆಗಳನ್ನೂ 'ಸಾಹಿತ್ಯ' ಮೊದಲಾದ ಪ್ರಬಂಧಗಳನ್ನೂ, ಗಳಗನಾಥರು ಓದಿ ಅವರ ಕೃತಿಗಳ ಬಗ್ಗೆ ಆದರ ಭಾವವನ್ನು ತಳೆದಿದ್ದರು. 'ಇವರ ದರ್ಶನದಿಂದ ನನ್ನ ಮೇಲಾದ ಪರಿಣಾಮವನ್ನು ಬರೆದು ಅದರ ಸತ್ವವನ್ನು ಕಡಿಮೆ ಮಾಡುವದಕ್ಕಿಂತ ಅದನ್ನು ಮೌನದಿಂದ ನಾನು ಪಚನಮಾಡುವದು ನೆಟ್ಟಗೆ. ಈ ರಸಿಕ ವಿದ್ವಾಂಸರ ವಿನಯವೆಷ್ಟು, ಪರರ ವಿಷಯದಲ್ಲಿ ಸಹಾಯವೆಷ್ಟು! 'ನೀವು ಕರ್ನಾಟಕದಲ್ಲಿ ಬಹಳ ಕೆಲಸ ಮಾಡಿದವರು. ನಮಗೆ ಹಿರಿಯರು' ಎಂದು ಈ ವಿಶಾಲ ಹೃದಯದ ತರುಣರು ಪ್ರಸನ್ನವದನದಿಂದ ಅನ್ನುವಾಗ ನಿಜವಾಗಿಯೂ ನನ್ನ ಹೃದಯ ವಿಶಾಲವಾಯಿತು' ಎಂದಿದ್ದಾರೆ.

ಇದಕ್ಕೆಲ್ಲ ಮಕುಟವಿಟ್ಟಂತೆ ಒದಗಿಬಂದದ್ದು - ಸಾಹಿತ್ಯ ಪರಿಷತ್ತಿನ ಗೌರವ. ಗಳಗನಾಥರ 'ಮಾಧವ ಕರುಣಾವಿಲಾಸ'ಕ್ಕೆ ದೇವರಾಜ ಚಾರಿಟಿ ಫಂಡು, ವಿದ್ಯಾವರ್ಧಕ ಸಂಘ - ಇವುಗಳಿಂದ ಬಹುಮಾನ ಬಂದಿತ್ತು. ಪರಿಷತ್ತಿನಿಂದಲೂ ದೊರೆಯಬೇಕೆಂಬ ಅಪೇಕ್ಷೆಯಿಂದ ಗಳಗನಾಥರು ಪ್ರತಿಯನ್ನು ಕಳಿಸುತ್ತ ಹೀಗೆ ಬರೆದರು, -

'ಸಾಹಿತ್ಯ ಪರಿಷತ್ತಿನಂತಹ ಗೌರವದ ಸಂಸ್ಥೆಯಿಂದ ಬಹುಮಾನ ಪಡೆಯುವದು ಯಾವದೊಂದು ಗ್ರಂಥಕಾರರಿಗೆ ಗೌರವದ ಸಂಗತಿಯಾಗಿರುವಂತೆ ಯೋಗ್ಯ ಗ್ರಂಥಗಳನ್ನು ಮನ್ನಿಸುವ ಭಾಗ್ಯ ಪಡೆಯುವದೂ ಪರಿಷತ್ತಿಗೆ ಗೌರವದ ಸಂಗತಿಯಾಗಿರುವದೆಂದು ನಾನು ತಿಳಿದಿರುವೆನು. ಈ ಕಾದಂಬರಿಯನ್ನು ಇಷ್ಟರಲ್ಲಿಯೇ ತಮ್ಮ ಪರಿಷತ್ತಿನ ಪರೀಕ್ಷಣಕ್ಕಾಗಿ ಕಳಿಸಬಹುದಾಗಿತ್ತು. ಆದರೆ ನನ್ನ ಈ ಕೃತಿಯು ಯೋಗ್ಯವಾದದ್ದೆಂದು ಲೋಕಾನುಭವದಿಂದಲೂ, ಇತರ ಸಂಸ್ಥೆಗಳ ಪರೀಕ್ಷಣದಿಂದಲೂ ನಿರ್ಣಯಿಸಲ್ಪಡುವವರೆಗೆ ತಮ್ಮ ಸಂಸ್ಥೆಯಂಥ ಶ್ರೇಷ್ಠ ವಿದ್ವತ್ಸಂಘ ಸೇವಿತ ಸಂಸ್ಥೆಗೆ ಕಳಿಸಲು ಮನಸ್ಸಾಗದ್ದರಿಂದ ಬಿಟ್ಟೆನು.... ನನ್ನ ಈ ಕಾದಂಬರಿಯು ಏನಾದರೂ ಹಿತಕರ ಲೋಕಜಾಗೃತಿಯನ್ನು ಮಾಡೀತೆಂದು ನಿಮಗೆ ತೋರಿದ ಪಕ್ಷದಲ್ಲಿ ಪ್ರತಿ ಒಬ್ಬ ಸಾಕ್ಷರ ಕನ್ನಡಿಗನು ಅದನ್ನು ಓದಲು ಉತ್ಸುಕನಾಗುವಂತೆ ತಮ್ಮ ಕರ್ನಾಟಕ ಹಿತತತ್ಪರ ಸಂಸ್ಥೆಯು ಇದನ್ನು ಯೋಗ್ಯ ಕಂಡಂತೆ ಬಹುಮಾನಿಸಬೇಕೆಂದು ಪ್ರಾರ್ಥಿಸುವೆನು.'

–ಇದಕ್ಕೆ ಪರಿಷತ್ತಿನಿಂದ ಬಂದ ಪ್ರತಿಕ್ರಿಯೆ ಹೀಗಿದೆ: "ಮಾ॥ರಾ॥ ಗಳಗನಾಥರವರು ಕನ್ನಡದಲ್ಲಿ ಅನೇಕ ಪ್ರೌಢಗ್ರಂಥಗಳನ್ನು ರಚಿಸಿ, ಅವುಗಳನ್ನು ಪ್ರಕಟಿಸಿ, ಮಾಡಿರುವ ಕರ್ನಾಟಕ ವಾಙ್ಮಯ ಸೇವಾತಿಶಯಕ್ಕಾಗಿ ಅವರಿಗೆ ಎರಡುನೂರಾ ಐವತ್ತು ರೂಪಾಯಿಗಳ ಸಂಭಾವನೆಯನ್ನು ಕೊಡತಕ್ಕದ್ದು." (೩೦-೧-೧೯೨೭ರಂದು ಸೇರಿದ್ದ ಕಾರ್ಯಸಮಿತಿಯ ನಿರ್ಣಯ.)

ನಂಗಪುರಂ ವೆಂಕಟೇಶಯ್ಯಂಗಾರರು ಆಗ ಪರಿಷತ್ತಿನ ಕಾರ್ಯದರ್ಶಿಗಳು. ಗಳಗನಾಥರನ್ನು ಪರಿಷತ್ತಿಗೆ ಕರೆಯಿಸಿಕೊಂಡು ಈ ಮಾತನ್ನು ಅವರಿಗೆ ತಿಳಿಸುವಾಗ ತಮಗೇ ಆ ಬಹುಮಾನ ಬಂದವರಂತೆ ಹೆಮ್ಮೆಪಟ್ಟರಂತೆ! 'ಒಂದು ಪುಸ್ತಕದ ಪ್ರಾಶಸ್ತ್ಯಕ್ಕಾಗಿ ಪರಿಷತ್ತು ಸಂಭಾವನೆ ನೀಡಿತಲ್ಲ' ಎಂದು ಗಳಗನಾಥರು ಆನಂದಪಟ್ಟರು. ನಂಗಪುರಂ ಅವರ ವೈಯಕ್ತಿಕ ಔದಾರ್ಯದ ಸಂಪರ್ಕವು ಗಳಗನಾಥರಿಗೆ ಮುಂದೂ ದೊರಕಿತು. ಅಷ್ಟೇಕೆ ಬೆಂಗಳೂರಿನಲ್ಲಿ ಭೆಟ್ಟಿಯಾದ ಎಲ್ಲ ಸಾಹಿತಿಗಳೂ ಗಳಗನಾಥರಲ್ಲಿ ಆದರವುಳ್ಳವರಾಗಿ, ತಂತಮ್ಮ ಕ್ಷೇತ್ರದಲ್ಲಿ ಸಕ್ರಿಯ ಸಹಾಯವನ್ನು ಒದಗಿಸಿದರು. ಈ ಯಶಸ್ವೀ ಯಾತ್ರೆಯ ಸಂಭ್ರಮವು ಗಳಗನಾಥರ ಸಾಲದ ಚಿಂತೆಯನ್ನು ಕೆಲಮಟ್ಟಿಗಾದರೂ ತಗ್ಗಿಸಿತು.

ಈ ಅವಧಿಯಲ್ಲಿ ಗಳಗನಾಥರ ನಾಲ್ಕು ಕಾದಂಬರಿಗಳು ಹೊರಬಂದುವು. ೧೯೨೭ರಲ್ಲಿ ಪ್ರಕಟವಾದ **ಸಂಸಾರ ಸುಖವು** ಬಾಬೂ ಹರಿಸದನ ಮುಕರ್ಜಿಯವರ 'ಖುಸ್ರು' ಕಾದಂಬರಿಯ (ಮರಾಠಿ ಅನುವಾದದ) ಮೇಲೆ ಆಧಾರಿತವಾಗಿದೆ. ಇದು ಅಕಬರನ ಸಂಸಾರದ ಕಥೆ! ರಾಜ್ಯ ತೃಷ್ಣೆಯ ಸುಳಿಯಲ್ಲಿ ಸಿಕ್ಕ ಅಕಬರನಿಗೆ ಸುಖವೆಲ್ಲಿದೆ? ಅದಕ್ಕೆ ಬಲಿಯಾದವನು ಅಕಬರನ ಮೊಮ್ಮಗನೂ ಮಾನಸಿಂಹನ ಅಳಿಯನೂ ಆದ ಖುಸ್ರು. ಸಲೀಮನು ಪಟ್ಟಕ್ಕೆ ಹಕ್ಕುದಾರನಾಗಿದ್ದರೂ ತಂದೆಯ ಅಪಕೃಪೆಗೆ ಪಾತ್ರನಾಗಿದ್ದುದರಿಂದ, ಈ ಅಂತಃಕಲಹ ನಡೆದಿದ್ದಿತು. ಸಲೀಮನ ಹೆಂಡತಿ ಜೋಧಬಾಯಿ (ಮಾನಸಿಂಹನ ತಂಗಿ)ಗೆ ಉಭಯಸಂಕಟ. ಕೊನೆಗೆ ಸಲೀಮನು ಮಗನ ಕಣ್ಣನ್ನೆ ಕೀಳಿಸಿದನು. ನೂರಜಹಾನಳು ಅವನ ಕೊಲೆಗೈಸಿದಳು. ಅತ್ಯಂತ ಆವಿದ್ಧ ಸನ್ನಿವೇಶಗಳಿಂದ ಕೂಡಿದ ಈ ಕಾದಂಬರಿಯು ಶಿವಾಜಿಯ ಮರಣ ಕಾಲದ ಇದೇ ಬಗೆಯ **ಗೃಹಕಲಹ**ವನ್ನು ನೆನಪಿಗೆ ತರುತ್ತದೆ. ಒಟ್ಟಿನಲ್ಲಿ ಈ ಕಾದಂಬರಿಯು ಸಂಸಾರವು ದುಃಖಮಯವೆಂಬುದನ್ನು ಚೆನ್ನಾಗಿ ತೋರಿಸುತ್ತದೆ. ಹೀಗಿದ್ದರೂ ಇದರ ಪಾತ್ರಗಳೆಲ್ಲ ಸುಖಲೋಲುಪವಾಗಿರುವಂತೆ ಲೋಕಕ್ಕೆ

ತೋರುತ್ತಿದ್ದುದರಿಂದ ಸಂಸಾರ ಸುಖವು ಲೋಕಭ್ರಮಕಾರಕವಿರುತ್ತದೆಂದು ಹೇಳಬೇಕಾಗುವದು - ಎಂಬ ವಿವರಣೆ ನೀಡುತ್ತ, ಕಾದಂಬರಿಯ ಕೊನೆಯಲ್ಲಿ ಗಳಗನಾಥರು 'ಪ್ರಿಯ ವಾಚಕರೇ ನೋಡಿರಿ ರಾಜಸಂಸಾರದ ಸುಖವು ಹೇಗಿರುತ್ತದೆ! ರಾಜಸಂಸಾರದಲ್ಲಿ ಇಂಥ ಕಲಹ, ಕೊಲೆಗಳು, ಮರೆ-ಮೋಸಗಳು ದೊಡ್ಡ ಪ್ರಮಾಣದಲ್ಲಿ ಕಂಡುಬಂದರೆ ನಮ್ಮ ಬಡವರ ಸಂಸಾರದಲ್ಲಿ ಅವು ಸಣ್ಣ ಪ್ರಮಾಣದಲ್ಲಿ ಕಂಡುಬರುತ್ತವೆ' ಎಂದು ಎಚ್ಚರಿಸಿದ್ದಾರೆ.

**ರಾಣಾ ರಾಜಸಿಂಹವು** ಔರಂಗಜೇಬ-ರಾಜಸಿಂಹ ಇವರ ಘರ್ಷಣೆಯ ಚಿತ್ರವಾಗಿದೆ. ರೂಪನಗರವೇ ಅದಕ್ಕೆ ರಂಗಭೂಮಿಯಾಯಿತು. ಅಲ್ಲಿಯ ರಾಜಪುತ್ರಿ ಚಂಚಲಕುಮಾರಿಯನ್ನು ಮದುವೆಯಾಗಬೇಕೆನ್ನುವಾಗ, ರುಕ್ಮಿಣಿಯ ಪತ್ರರೂಪೀ ಮೊರೆಯನ್ನು ಕೇಳಿ ಶ್ರೀಕೃಷ್ಣನು ಧಾವಿಸಿ ಬಂದಂತೆ ರಾಣಾ ರಾಜಸಿಂಹನು ಬಂದು ಅವಳನ್ನು ಕರೆದೊಯ್ಯುತ್ತಾನೆ. ಔರಂಗಜೇಬನ ಪತಿಯಿಂದ ಮುಬಾರಕನು ದಂಡೆತ್ತಿಬಂದಾಗ, ರಾಣಾ ರಾಜಸಿಂಹ-ವಿಕ್ರಮಸಿಂಹ ಇಬ್ಬರೂ ಸೇರಿ ಅವನನ್ನು ಸೋಲಿಸುತ್ತಾರೆ. ಹೀಗೆ ರಜಪೂತರ ಕ್ಷಾತ್ರತೇಜ ಮತ್ತೆ ಬೆಳಗುತ್ತದೆ. ಅಂತೆಯೇ 'ಮಹಾರಾಣಾ ರಾಜಸಿಂಹನು ಔರಂಗಜೇಬನಂತಹ ಬಲಾಢ್ಯ ಶತ್ರುವಿನ ಶಕ್ತಿ ಸರ್ವಸ್ವದ ಅಬ್ಬರದಲ್ಲಿಯಾದರೂ ತನ್ನ ಕೆಚ್ಚುಗಟ್ಟಿದ ಕ್ಷಾತ್ರವೃತ್ತಿಯನ್ನಲ್ಲದೇ, ಹೇಡಿತನವನ್ನು ಮುಂದೆಮಾಡಿರುವದಿಲ್ಲ. ಆ ಕ್ಷತ್ರಿಯೋತ್ತಮನ ಧೈರ್ಯ, ನಿಸ್ಪೃಹವೃತ್ತಿ, ನ್ಯಾಯ ನಿಷ್ಠುರತೆ, ದಯಾಲುತ್ವ, ಉದಾರಚರಿತೆ, ಪರಿಶುದ್ಧಾಚರಣೆ ಇವು ಈ ಕಾದಂಬರಿಯಲ್ಲಿ ಸ್ಪಷ್ಟವಾಗಿ ಕಾಣುತ್ತಿರುವುವು.' ಸತ್ಸಮಾಗಮದಿಂದ ಮನುಷ್ಯನ ಮನಸ್ಸು ತಿರುಗಿ ಹೇಗೆ ದಾರಿಗೆ ಹತ್ತುವದೆಂಬುದು ಮಾಣಿಕಲಾಲ, ಜೆಬುನ್ನಿಸೆ, ಉದೇಪುರಿ ಬೇಗಮೆ, ಮುಬಾರಕ ಇವರ ಚರಿತ್ರದಿಂದ ಚೆನ್ನಾಗಿ ಗೊತ್ತಾಗುವದು. ಅದೇ ರೀತಿ ದುಷ್ಟಸಹವಾಸವಿದ್ದಾಗ ಅವೇ ಪಾತ್ರಗಳು ಹೇಗೆ ಅಡ್ಡದಾರಿ ಹಿಡಿದಿದ್ದವೆಂಬುದೂ ಗೊತ್ತಾಗುವದು.'

**ಕ್ಷಾತ್ರತೇಜ** ಕಾದಂಬರಿಯಾದರೂ ಇದೇ ರೂಪನಗರದ ಕಥೆಯನ್ನೊಳಗೊಂಡಿದೆ. ಅಲ್ಲಿಯೂ ಔರಂಬಜೇಬ-ರಾಜಸಿಂಹರ ಯುದ್ಧದ ಪ್ರಸಕ್ತಿ ಇದೆ. 'ಕ್ಷಾತ್ರತೇಜ'ಕ್ಕೆ ಆಪಟೆ ನಿರ್ಮಿತ ಕಥಾನಕವಿದ್ದರೆ 'ರಾಣಾ ರಾಜಸಿಂಹ'ಕ್ಕೆ ವಿವಿಧ ಮೂಲಗಳಿಂದ ಗಳಗನಾಥರೇ ಸಾಮಗ್ರಿಯನ್ನು ಆಯ್ದುಕೊಂಡಂತೆ ತೋರುತ್ತದೆ. ಗಳಗನಾಥರು ತಮ್ಮ ಕಾದಂಬರಿಗಳಲ್ಲಿ

ಐತಿಹಾಸಿಕ ಸತ್ಯತೆಗಿಂತ ಇತಿಹಾಸದ ತಡಿಕೆಯಲ್ಲಿ ಶೌರ್ಯ, ಉದಾರತ್ವ, ಧರ್ಮನೀತಿಗಳನ್ನು ಬೆಳಗಿಸುವುದರ ಕಡೆಗೆ ಮಹತ್ವ ಕೊಡುತ್ತಿದ್ದರೆಂಬುದಕ್ಕೆ ಇದು ಸ್ಪಷ್ಟ ನಿದರ್ಶನವಾಗಿದೆ.

ರಜಪೂತರ ವಿಷಯವಾಗಿ ಗಳಗನಾಥರು ಬರೆದ ಕೊನೆಯ ಕಾದಂಬರಿ **ಧಾರ್ಮಿಕ ತೇಜ.** ಇದು 'ಛತ್ರಸಾಲ'ವೆಂಬ ಮರಾಠೀ ಕಾದಂಬರಿಯ ರೂಪಾಂತರವಾಗಿದೆ. ಬುಂದೇಲಖಂಡದ ರಜಪೂತರು ತಮ್ಮ ಒಳಜಗಳಗಳಿಂದಾಗಿ ಔರಂಗಜೇಬನಿಗೆ ತಮ್ಮ ಸ್ವಾತಂತ್ರ್ಯವನ್ನು ಮಾರಿಕೊಂಡಿದ್ದಾಗ, ಪ್ರಾಣನಾಥಪ್ರಭು ಎಂಬ ಧರ್ಮಗುರು ಅವರನ್ನೆಲ್ಲ ಹುರುದುಂಬಿಸಿ, ಮಹೋಬದ ಅರಸು ಛತ್ರಸಾಲನಿಂದ ಸ್ವರಾಜ್ಯಸ್ಥಾಪನೆ ಮಾಡಿಸುತ್ತಾರೆ.

**ರಾಣೀ ಮೃಣಾಲಿನಿಯು** ಈ ಹಿಂದೆ ಬರೆದ ಕಥಾನಕದ ಪರಿಷ್ಕೃತ ಹಾಗೂ ವಿಸ್ತೃತರೂಪವಾಗಿದೆ. ಈ ಗ್ರಂಥ ವಿಮರ್ಶೆ ಮಾಡುತ್ತ, ವಿ.ಸೀ. ಅವರು (ಪ್ರಬುದ್ಧ ಕರ್ಣಾಟಕ-೧೦-೪) '೨೫೩ನೆಯ ಪುಟದಲ್ಲಿ ವರ್ಣಿತವಾಗಿರುವ ಬಂಗಾಳದ ಭೀಷಣ ಸ್ಮಶಾನ ಸ್ಥಿತಿಯು ಹಿಂದೂ ಜನರ ದೌರ್ಭಾಗ್ಯ, ಅಧೋಗತಿಗಳು ಎಂತಹ ಪಾಪಕರ್ಮಗಳ ಫಲವೆಂದು ತಿಳಿಸಿ, ಕಣ್ಣಿಗೆ ನೀರು ತರುವುದು' ಎಂದಿದ್ದಾರೆ.

ಇಲ್ಲಿಗೆ ಅವರ ಕಾದಂಬರೀ ವ್ಯವಸಾಯದ ಕೊನೆಯ ಘಟ್ಟಕ್ಕೆ ಬರುತ್ತೇವೆ. ಹತ್ತು ವರ್ಷಗಳ ಅನಂತರ ಒಂದೆರಡನ್ನು ಬರೆದರೂ ಕಾದಂಬರಿಕಾರ ಗಳಗನಾಥರ ಲೇಖನಿ ಅಲ್ಲಿಗೆ ತಡೆದು ನಿಂತಿತೆಂದೇ ಹೇಳಬೇಕು. ಆ ನಿಮಿತ್ತದಿಂದ ಈ ಕ್ಷೇತ್ರದಲ್ಲಿ ಅವರ ಸಾಧನೆಯ ಪೂರ್ವಾಪರಗಳನ್ನು ತುಸು ಅವಲೋಕಿಸೋಣ. ಚರಿತ್ರೆಯ ದೃಷ್ಟಿಯಿಂದ ಕನ್ನಡ ಕಾದಂಬರಿಯುಗದ ಆರಂಭದ ಕೃತಿಗಳೆಂದು ಯಾದವ ಕಜ್ಜಿಗನ 'ಕಲಾವತೀ ಪರಿಣಯ' (ಸು. ೧೮೧೫), 'ಮುದ್ರಾಮಂಜೂಷ' (೧೮೨೪), ಎಂಬ ಸ್ವತಂತ್ರ ಕೃತಿಗಳನ್ನೂ, 'ರಾಬಿನ್‌ಸನ್ ಕ್ರೂಸೋ' (೧೮೫೭), ತುರುಮರಿಯವರ 'ಬಾಣ ಕಾದಂಬರಿ' (೧೮೭೫) ಮತ್ತು ಬಿ. ವೆಂಕಟಾಚಾರ್ಯರ 'ದುರ್ಗೇಶನಂದಿನಿ' ಎಂಬ ಅನುವಾದಗಳನ್ನು ಗಣಿಸುತ್ತೇವೆ. ಅನಂತರ ವೆಂಕಟಾಚಾರ್ಯರ ಇತರ ನಾವೆಲುಗಳೂ ತೆಲುಗಿನ ವೀರೇಶಲಿಂಗಂ ಪಂತಲು ಅವರ ಅನುವಾದ ಕೃತಿಗಳೂ, ದ.ಕ. ಜಿಲ್ಲೆಯಿಂದ ಸ್ವತಂತ್ರ ಸಾಮಾಜಿಕ ಕೃತಿಗಳೂ ಹೊರಬಂದಿದ್ದುವು.

ಗಳಗನಾಥರದೇ ಚೊಚ್ಚಲು ಕಾದಂಬರಿ 'ಪದ್ಮನಯನಾ' ಪ್ರಕಟವಾಗಿದ್ದಿತು. 'ಮಂಜುಘೋಷಾ', 'ಸೂರ್ಯಕಾಂತ' (೧೮೯೨) - ಇವು ಕೂಡ ಪ್ರಸಾರದಲ್ಲಿದ್ದವು. ಆದರೆ ಅಖಿಲ ಕರ್ನಾಟಕ ಮಟ್ಟದ ಕಾದಂಬರೀ ಪರಂಪರೆಗೆ ಇವಾವವೂ ನಿಮಿತ್ತಗಳಾಗಲಿಲ್ಲ. ಪ್ರಾಂತಭೇದದಿಂದಾಗಿ, ತುಸುಮಟ್ಟಿಗೆ ಭಾಷೆಯ ಬಿಗುವಿನಿಂದಾಗಿ, ವೆಂಕಟಾಚಾರ್ಯರ ಬಂಗಾಲೀ ಕಥಾನಕಗಳು ತುಂಗಭದ್ರೆಯನ್ನು ದಾಟಿ ಮುಂದೆ ಸಾಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಕಾದಂಬರಿಗಳು ಘಟ್ಟದ ಮೇಲೇರಲಿಲ್ಲ. ಇದೇ ರೀತಿಯಾಗಿ 'ಬಾಣಕಾದಂಬರಿ' 'ಸೂರ್ಯಕಾಂತ' ಮೊದಲಾದ ಉತ್ತರ ಕರ್ನಾಟಕದ ಕೃತಿಗಳ ಪ್ರಸಾರವು ಆ ಪ್ರಾಂತಕ್ಕಷ್ಟೇ ಸೀಮಿತವಾಯ್ತು.

ಗಳಗನಾಥರ 'ಕಮಲ ಕುಮಾರಿ'ಯಿಂದ ಮಾತ್ರ ಹೊಸದೊಂದು ಅಧ್ಯಾಯ ಮೊದಲಾಯಿತು. ಇದು ಮತ್ತು ಅವರ ಮುಂದಿನ ಕಾದಂಬರಿಗಳು ಉತ್ತರ ಕರ್ನಾಟಕದ ಸೀಮೋಲ್ಲಂಘನ ಮಾಡಿದುವು. ಅಲ್ಲದೆ, ವಿಶೇಷವಾಗಿ ಓದು ಬರಹ ಬಾರದಿದ್ದರೂ ಅವನ್ನು ಓದಿಸಿ ಕೇಳುವಂತಾಯ್ತು. ಹಳ್ಳಿಗಳಲ್ಲಿ ಜೈಮಿನಿ ಭಾರತ, ಗದುಗಿನ ಭಾರತ, ರಾಜಶೇಖರ ವಿಳಾಸಗಳನ್ನು ಓದಿಸುವಂತೆ ಇವರ ಕಾದಂಬರಿಗಳನ್ನೂ ಓದಿಸಿ ಜನ ಆನಂದಿಸುತ್ತಿದ್ದರು. ಹೀಗೆ ಕಾದಂಬರೀ ಸಾಹಿತ್ಯ ಪ್ರಕಾರವನ್ನು ನಿರ್ದುಷ್ಟವಾಗಿ ಜನಪ್ರಿಯಗೊಳಿಸಿದ ಶ್ರೇಯಸ್ಸು ಗಳಗನಾಥರಿಗೇ ಸಲ್ಲುತ್ತದೆ. ಅವರ ಮೂಲ ಕಾರಣವೆಂದರೆ, ಗಳಗನಾಥರು ಅತಿ ಸಾಮಾನ್ಯ ವಾಚಕನನ್ನು ತಮ್ಮ ಲೇಖನಿಯ ಲಕ್ಷ್ಯವಾಗಿಟ್ಟುಕೊಂಡಿದ್ದರು. ಇವರ ಕಾಲಾವಧಿಯಲ್ಲಿಯೇ ಹಲವು ಐತಿಹಾಸಿಕ ಕಾದಂಬರೀಕಾರರು ಆಗಿಹೋಗಿದ್ದಾರೆ. ಆದರೆ ಅವರು ಗಳಗನಾಥರ ಮಟ್ಟಕ್ಕೆ ನಿಲ್ಲುವವರಾಗಿರಲಿಲ್ಲ. ಕೆರೂರ ವಾಸುದೇವಾಚಾರ್ಯರಿಗೆ ಆ ಯೋಗ್ಯತೆ ಇದ್ದರೂ ಅವರು ಹೆಚ್ಚು ಕಾದಂಬರಿಗಳನ್ನು ಬರೆಯಲಿಲ್ಲ. ಹೀಗಾಗಿ ಗಳಗನಾಥರು ಸಂಪೂರ್ಣ ಎರಡು ದಶಕಗಳವರೆಗೆ (೧೯೦೯-೨೮) ಕನ್ನಡ ಕಾದಂಬರೀ ಕ್ಷೇತ್ರದ ಸಾಮ್ರಾಟರಾಗಿ ಬಾಳಿದರು. ಜೊತೆಗೆ ಕನ್ನಡಿಗರಲ್ಲಿಯ ವಾಚನಾಭಿರುಚಿಯನ್ನು ವ್ಯಾಪಕವಾಗಿ ಹೆಚ್ಚಿಸಿ ಮುಂದಿನ ಕಾದಂಬರೀಕಾರರಿಗೆ, ಇತರ ಲೇಖಕರಿಗೆ ಆ ಮಾರ್ಗವನ್ನು ಸುಗಮವಾಗಿಸಿದರು.

ವಾಚನಾಭಿರುಚಿಯನ್ನು ಹೆಚ್ಚಿಸುವ ಮಾತು ಪ್ರಕೃತ ಕಾಲದವರಾದ ನಮಗೆ ಸಾಮಾನ್ಯವಾಗಿ ತೋರಬಹುದು. ಆದರೆ ೭೦ ವರ್ಷಗಳ ಹಿಂದಿನ

ಕನ್ನಡದ ಸ್ಥಿತಿಯನ್ನು ನೆನೆದಾಗ, ಅದರ ಔಚಿತ್ಯ–ಮಹತ್ವಗಳು ಸ್ಪಷ್ಟವಾಗುವವು. ಅಂದು ಕನ್ನಡದುಂದುಭಿಯು ಸ್ವರ ಕ್ಷೀಣವಾಗಿದ್ದಿತು. ಮುಂಬಯಿ ಕರ್ಣಾಟಕದಲ್ಲಿಯಂತೂ ಮರಾಠಿಯ ಮಬ್ಬು ಕವಿದಿದ್ದಿತು. ಪ್ರಕಟವಾಗಿದ್ದ ಲಲಿತ ಗ್ರಂಥಗಳಿಗೆ ಜನರ ಚಿತ್ತವನ್ನು ಸೆಳೆಯುವ ಆಕರ್ಷಣೆ ಇರಲಿಲ್ಲ. ಪತ್ರಿಕೆಗಳು ಹೊರಡುತ್ತಿದ್ದರೂ ಮನರಂಜನೆಗೆ ಅವುಗಳಲ್ಲಿ ಪ್ರಾಧಾನ್ಯವಿರಲಿಲ್ಲ. ಗಳಗನಾಥರು ತಮ್ಮ ೧೮–೨೦ ಕಾದಂಬರಿಗಳ ಮೂಲಕ ಅದನ್ನು ಸಾಧಿಸಿದರು. ಕುಣಿಕುಣಿದು ಓದಿಸುವಂಥ ಬರವಣಿಗೆಯದು. ಅಂತೆಯೇ ಅವರ ಕೃತಿಗಳು ಅವರ ಜೀವಮಾನದಲ್ಲಿಯೇ ಐದಾರು ಆವೃತ್ತಿಗಳನ್ನು ಕಂಡವು. ಆ ಶೈಲಿಯ ಆಕರ್ಷಣೆಯಿಂದಾಗಿಯೇ ಅಲ್ಲವೇ, ಸದ್ಬೋಧ ಚಂದ್ರಿಕೆಗೆ ಏಳು ಸಾವಿರ ಚಂದಾದಾರರಾದುದು.

ಹೋಜೆಂದರೆ ಗಳಗನಾಥರು 'ಪದ್ಮನಯನಾ' ಒಂದನ್ನು ಬಿಟ್ಟರೆ ಕಾದಂಬರಿಗಾಗಿ ಕಾದಂಬರಿಯನ್ನು ಬರೆಯಹೊರಟವರಲ್ಲ. ಇಂದಿನ ಅನೇಕ ಕಾದಂಬರಿಕಾರರಿಗಿದ್ದಂತೆ, ಜನರಿಗೆ ಮನರಂಜನೆಯನ್ನೊದಗಿಸುವ ಏಕಮೇವ ಉದ್ದೇಶವೂ ಅವರಿಗಿದ್ದಿಲ್ಲ. "ಕೇವಲ ಲೌಕಿಕ ಭಾವನೆಯಿಂದ ಬರೆದ ಲೇಖನಗಳು ದುಡ್ಡು ಕೂಡಿಸುವ ಮಟ್ಟಿಗೆ ಬಹಳವಾದರೆ ವಾಚಕರ ಮನೋರಂಜನ, ಮನೋವಿಕಾರಗಳ ಜಾಗೃತಿ ಮಾಡುವ ಮಟ್ಟಿಗೆ ಮಾತ್ರ ಉಪಯೋಗಕ್ಕೆ ಬರುವವು. ಆದರೆ ಇವುಗಳೊಡನೆ ಮನಸ್ಸನ್ನು ಜಗ್ಗಿಕೊಂಡು, ತಮ್ಮ ಸತ್ವಬಲದಿಂದ ಆ ಮನಸ್ಸನ್ನು ಒಳ್ಳೆಯ ಹಾದಿಗೆ ಹಚ್ಚುವ ಲೇಖಗಳೇ ನಿಜವಾದ ಲೇಖಗಳು – ಎಂಬುದು ಅವರ ನಿಲುವೆಯಾಗಿದ್ದಿತು. 'ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿ ಅವರ ಮನಸ್ಸಿನಲ್ಲಿ ಉದಾತ್ತ ಭಾವನೆಗಳ ಅಂಕುರೋತ್ಪಾದನ ಮಾಡುವದೇ' ತಮ್ಮ ಕಾದಂಬರೀ ಲೇಖನದ ಉದ್ದೇಶವೆಂದು" 'ಭಾಗವತಾಮೃತ'ದ ಪ್ರಸ್ತಾವನೆಯಲ್ಲಿ ಹೇಳಿಬಿಟ್ಟಿದ್ದಾರೆ.

ಅವರ ಉತ್ತರಾರ್ಧದ ಕಾದಂಬರಿಗಳಿಗೆ ಆರ್ಥಿಕ ಅಡಚಣೆಯೆಂಬ ಇನ್ನೊಂದು ಪ್ರೇರಣೆ ಜೊತೆಗೂಡಿತೆಂಬುದನ್ನು ನೋಡಿದ್ದೇವೆ. ಹೀಗೆ 'ದುಡ್ಡಿಗಾಗಿ ಭರದಿಂದ ಕಾದಂಬರಿಗಳನ್ನು ಬರೆಯತೊಡಗಿದಾಗ ಎಲ್ಲ ಉತ್ತಮ ಕಾದಂಬರಿಗಳನ್ನೇ ಬರದೇನೆಂಬ ಪ್ರತಿಜ್ಞೆ ನಡೆಯಲಿಕ್ಕಿಲ್ಲ' ಎಂಬುದನ್ನೂ ಅವರು ಚೆನ್ನಾಗಿ ಅರಿತಿದ್ದರು.

ಇಷ್ಟಾದರೂ ಕನ್ನಡಿಗರ ಮನರಂಜನೆ ಮಾಡುವಲ್ಲಿ ಅವರ ಕಾದಂಬರಿಗಳು ಎಂದೂ ಹಿಂದೆ ಬೀಳಲಿಲ್ಲ! ಅದರ ಕಾರಣ, ಅವರು ಏನನ್ನೇ ಬರೆಯಲಿ ಯಾವ ಉದ್ದೇಶದಿಂದಲೇ ಬರೆಯಲಿ, ಅದರಲ್ಲಿ ಅವರು ತೋರುತ್ತಿದ್ದ ಶ್ರದ್ಧೆ, ಜೊತೆಗೆ ಪಾತ್ರಗಳು ಹಾಗೂ ಸನ್ನಿವೇಶಗಳಲ್ಲಿ ಅವರಿಗಿದ್ದ ತಾದಾತ್ಮ್ಯ. ಅದರಿಂದಾಗಿ ಅವರಿಗೆ ಎಲ್ಲಿ ಬೇಕೆಂದಲ್ಲಿ ಬರೆಯುವ ಸ್ಫೂರ್ತಿ ಬರುತ್ತಿತ್ತು. ಸ್ನಾನಮಾಡಿ ಶುಚಿರ್ಭೂತರಾಗಿ ಇನ್ನೇನು ಕೂಡಬೇಕು, ಅಷ್ಟರಲ್ಲಿ ಕಾದಂಬರಿಯ ಸನ್ನಿವೇಶವೊಂದು ಮನದಲ್ಲಿ ತುಂಬಿಕೊಂಡಿತೆಂದರೆ ಅಲ್ಲಿಯೇ ಬರಯುವದಕ್ಕೆ ಆರಂಭಮಾಡಿಬಿಡುತ್ತಿದ್ದರು. ಶೋಕರಸದ ಸನ್ನಿವೇಶವಾಗಿದ್ದರೆ, ಮನೆಜನರು ಮತ್ತು ಕಂಪೋಸಿಟರರು ಓದುವದಕ್ಕೆ ಮೊದಲೇ ಅದನ್ನು ಕಂಡುಕೊಳ್ಳುತ್ತಿದ್ದರು - ಆ ಕಾಗದದ ಮೇಲೆ ಬಿದ್ದ ಗಳಗನಾಥರ ಕಣ್ಣೀರಿನ ಹನಿಗಳಿಂದ!

೧೯೨೮ರಲ್ಲಿ 'ರಾಣೀ ಮೃಣಾಲಿನಿ'ಯ ವಿಮರ್ಶೆ ಮಾಡುತ್ತ ವಿ.ಸೀ.ಯವರು ಗಳಗನಾಥರ ಕಾದಂಬರಿಗಳ ಜನಪ್ರಿಯತೆಯ ಗುಟ್ಟನ್ನು ವಿವರಿಸಿದ್ದಾರೆ. ಸಮಕಾಲೀನವಾದ ಆ ಅಭಿಪ್ರಾಯವು ಗಮನಾರ್ಹವಾಗಿದೆ:

'ಓದು ತಿಳಿದ ಕನ್ನಡಿಗರಲ್ಲಿ ಗಳಗನಾಥರವರ ಹಲವು ಕಾದಂಬರಿಗಳನ್ನಾದರೂ ಓದದಿರುವವರು ಅಪರೂಪ...... ಅವರ ಶೈಲಿ ಗಂಡುಶೈಲಿ. ಅವರ ಬರವಣಿಗೆಯಲ್ಲಿ ಹೆಚ್ಚು ನಯವಿಲ್ಲದಿರಬಹುದು. ಕಲೆಯ ವಿಲಾಸ, ನಯಗೆಲಸಗಳು ಕಡಿಮೆಯಾಗಿರಬಹುದು. ಅವರ ಕಥಾಪ್ರಪಂಚದಲ್ಲಿ ಹೆಚ್ಚಿನ ಗಂಭೀರತೆ, ಆಳಗಳಿಲ್ಲದಿರಬಹುದು. ಆದರೆ ಅದರಲ್ಲಿ ಚಂಡ ಸತ್ವವಿದೆ. ಓಜಸ್ಸಿದೆ. ಒಳ್ಳೆಯ ಕಥೆಯನ್ನು ಕಟ್ಟಿ ಮೊದಲ ಪಂಕ್ತಿಯಿಂದ ಹಿಡಿದು ಕೊನೆಯವರೆಗೂ ಇವರು ನಮ್ಮ ಮನಸ್ಸನ್ನು ಸೆರೆಹಿಡಿಯಬಲ್ಲರು. ಕಥೆಯ ವ್ಯಕ್ತಿಗಳಿಗೆ ಜೀವವೆರೆದು ಅವರನ್ನು ಮಾತನಾಡಿಸಿ ಅವರಿಂದ ತಮಗೆ ಬೇಕಾದ ಕೆಲಸವನ್ನು ಮಾಡಿಸಬಲ್ಲರು. ಅವರ ಸ್ವಭಾವವು ವ್ಯಕ್ತವಾಗುವಂತೆಯೂ ಅವರ ಶೀಲಚಾರಿತ್ರ್ಯಗಳು ಕಳೆಗೊಳ್ಳುವಂತೆಯೂ ಜನರ ನಡೆ-ನುಡಿ, ವ್ಯವಹಾರಗಳನ್ನು ತೋರಿಸಬಲ್ಲರು. ಕಥೆಯ ಆವರಣಕ್ಕೂ, ಕಟ್ಟಡಕ್ಕೂ ಹೊಂದಿಕೊಳ್ಳುವ ಅದರ ಓಟವನ್ನು ಬಹುವಾಗಿ ತಡೆಯದ, ಓದುವವರ ಆಸಕ್ತಿ-ಕುತೂಹಲಗಳನ್ನು ಸಡಲಿಸದ ಸನ್ನಿವೇಶಗಳನ್ನು ಕಲ್ಪಿಸಬಲ್ಲರು. ಕಲ್ಪಿತವ್ಯಕ್ತಿಗಳ ಸಂಭಾಷಣೆಗೆ ಪ್ರಾಣತುಂಬಿ ಕಥೆಯ ನಡೆಯನ್ನು ಮುಂದರಿಸ

ಬಲ್ಲರು. ಮನುಷ್ಯರ ಅಂತರಂಗದಲ್ಲಿದ್ದುಕೊಂಡು, ಬಲಿತು, ಅದರಿಂದ ಆ ರೀತಿ, ಈ ರೀತಿ, ಕೆಲಸ ಮಾಡಿಸುವ ಉದ್ದೇಶಗಳನ್ನೂ ಮರ್ಮಗಳನ್ನೂ ಹೊರಗೆಡವಬಲ್ಲರು. ಬೇರೆ ಬೇರೆ ಜನರ ಆಶೆ-ಆಶಯಗಳನ್ನು ಬೆಳೆಸಿ ಅವರಲ್ಲಿ ಮಿತ್ರತ್ವ ಶತ್ರುತ್ವಗಳನ್ನು ಉಂಟುಮಾಡಿ, ಪರಸ್ಪರ ಸಂಬಂಧಗಳನ್ನು ಹೂಡಿ, ಕಥೆಯ ಪರಿಣಾಮಕ್ಕೆ ಸಾಧನವಾವುದೆಂಬುದನ್ನು ತೋರಿಸಿ, ತಮಗೆ ತೋರಿದ ನೀತಿಗಳನ್ನು ಅಲ್ಲಿಯೇ ತಿಳಿಸುವರು. ಕಾಲದೇಶಗಳ ಚಿತ್ರವನ್ನು ಬರೆದು ಕಥೆಯ ಆವರಣವನ್ನು ಕಲ್ಪಿಸಿ ಆಗಿನ ಪರಿಸ್ಥಿತಿಯು ನಮ್ಮ ಕಣ್ಣಿಗೆ ಬಂದು ನಿಲ್ಲುವಂತೆ ಮಾಡಬಲ್ಲರು.' (ಪ್ರ.ಕ. ೧೦-೪)

ಇದೇ ೧೯೨೮ನೆಯ ವರುಷ, ಕಾರಂತರ 'ದೇವದೂತರು' ಪ್ರಕಟವಾಯಿತು. ಗಳಗನಾಥರು ತಮ್ಮ ಮೆಚ್ಚಿನ ಧಾರ್ಮಿಕ ಲೇಖನಕ್ಕಾಗಿ ಕಾದಂಬರಿಯನ್ನು ಬದಿಗಿರಿಸಿದ್ದಾದರೆ, ಕಾರಂತರು ತಮ್ಮ ಮೊದಲ ಕೃತಿಯ ಮೂಲಕ ಧಾರ್ಮಿಕ ವಿಡಂಬನೆಯನ್ನು ಕೈಗೆತ್ತಿಕೊಂಡುದು, ಕಾಲಗತಿಯಲ್ಲಿ ಪರಿವರ್ತನೆಯಾದುದರ ದ್ಯೋತಕವಾಗಿದೆ. ಮುಂದೆ ೪-೫ ವರ್ಷಗಳಲ್ಲಿ ಹೊಸಬಗೆಯ ಕಾದಂಬರೀ ಲೇಖನ ಕಾರ್ಯವು ನಾಡಿನಾದ್ಯಂತ ಕಂಡು ಬಂದಿತು.

ದ.ಕ. ಜಿಲ್ಲೆಯಿಂದ ಕಾರಂತರು (ಸೂಳೆಯ ಸಂಸಾರ-೧೯೩೨) ಮೈಸೂರ ಸೀಮೆಯಿಂದ ಅ.ನ.ಕೃ. (ಉದಯರಾಗ, ೧೯೩೨), ಮುಂಬಯಿ ಕರ್ಣಾಟಕದಿಂದ ಆನಂದಕಂದ (ಸುದರ್ಶನ, ೧೯೩೩) ಹೀಗೆ ಮೂವರು ಪ್ರಮುಖ ಕಾದಂಬರಿಕಾರರು ಏಕಕಾಲಕ್ಕೆ ಮೂಡಿಬಂದುದನ್ನು ಗಮನಿಸಬೇಕು. 'ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ನಿನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದೀಯೆ. ಇನ್ನೀಗ ಮುಂದಿನ ತಲೆಮಾರಿನವರ ಕೆಲಸ' ಎಂಬುದಾಗಿ ವಿಧಿನಿಯಾಮಕನು ಗಳಗನಾಥರನ್ನು ಕಾದಂಬರೀ ಲೇಖದಿಂದ ನಿವೃತ್ತಿಗೊಳಿಸಿದನೆನ್ನೋಣವೆ?

ಕಾದಂಬರಿಯನ್ನು ಬದಿಗಿರಿಸಿದರೂ ತಮ್ಮ ಮಧ್ಯಜೀವನದಲ್ಲಿ ಮಾಡಿದ್ದ ಸಾಲದ ಪ್ರಾರಬ್ಧವೊಂದಿತ್ತಲ್ಲ; ಗಳಗನಾಥರು ಪುಸ್ತಕದ ಹಸಿಬೆಯನ್ನು ಹೆಗಲೇರಿಸಿ ಮಾರಾಟಕ್ಕೆ ಹೊತ್ತೊಯ್ಯುವ ತಮ್ಮ ಯಾತ್ರೆಯನ್ನು ಮುಂದುವರಿಸಬೇಕಾಯಿತು. ಆಗಿನ ದಿನಗಳಲ್ಲಿ ಬುರ್ಲಿ ಬಿಂದುಮಾಧವರು ಜ್ಞಾಪಿಸಿಕೊಂಡ ಇದೊಂದು ಪ್ರಸಂಗ-

"ಏನು ಬುರ್ಲಿಯವರೆ, ನಿಮಗೆ ಇದೇ ಉದ್ಯೋಗವೇನು? ಒಮ್ಮೆ ರಾಷ್ಟ್ರೀಯ ಶಾಲೆಗೆ ಫಂಡು ಎಂದು ಬರುವಿರಿ. ಮಗುದೊಮ್ಮೆ ವಿದ್ಯಾರ್ಥಿ ನಿಲಯಕ್ಕೆ ಕಾಳುಕೊಡಿರಿ ಎನ್ನುವಿರಿ. ಸಭೆ ಮೆರವಣಿಗೆಗೆ ದುಡ್ಡು ಬೇಕು ಎನ್ನುವಿರಿ. ಈಗ ಈ ಹಿರಿಯರನ್ನು ಕರೆತಂದಿರುವಿರಿ!"

-ಧಾರವಾಡದ ಅಗ್ರಿಕಲ್ಚರ್ ಫಾರ್ಮಿನ ಅಧಿಕಾರಿಗಳಾಗಿದ್ದ ರಾವಸಾಹೇಬ ಕೆಣ್ಣೂರ ಶಂಕರರಾಯರು ಹೀಗೆ ಜರಿದು ಮಾತನಾಡಿದ್ದು ಕೇಳಿ ಬುರ್ಲಿಯವರಿಗೆ ಆಘಾತವಾಯಿತು. ಕೋಣ್ಣೂರರು ದೇಶಪ್ರೇಮಿಗಳು, ಉದಾರರು ಮತ್ತು ದಯಾಮಯರು. ಜೊತೆಗೆ ಬಂದ ಹಿರಿಯರು ಇನ್ನಾರೂ ಅಲ್ಲ ಗಳಗನಾಥರು. ಅವರು ಈ ಅಪಮಾನವನ್ನು ಎಂತು ಸಹಿಸಿಯಾರು ಎಂಬ ಯೋಚನೆಯಿಂದ ಬುರ್ಲಿಯವರು ಏನು ಮಾತಾಡಬೇಕೆಂದು ತಿಳಿಯದೇ ಸುಮ್ಮನಿದ್ದಾಗ ಗಳಗನಾಥರೇ ನುಡಿದರು. ಅದೂ ಶಾಂತವಾಗಿ!

"ರಾಯರೇ, ತಮಗೆ ಇಷ್ಟು ಬೇಸರವಾಗುತ್ತಿದ್ದರೆ ನಾವು ಹೋಗಿ ಬರುತ್ತೇವೆ. ನಾವೇನೂ ಭಿಕ್ಷುಕರಲ್ಲ. ಸರಸ್ವತಿಯ ಸೇವೆಯಲ್ಲಿ ನಿರತರಾದವರು" ಎಂದು ಹೇಳಿ ಪುಸ್ತಕದ ಗಂಟನ್ನು ಹೆಗಲಮೇಲಿಟ್ಟುಕೊಂಡು ಹೊರ ಹೊರಟರು.

ಮಧ್ಯಾಹ್ನ, ಇಬ್ಬರೂ ಊಟಕ್ಕೆ ಕೂಡ್ರಬೇಕು ಎನ್ನುವಾಗ ರಾವ ಸಾಹೇಬ ಕೋಣ್ಣೂರ ಅವರು ಸ್ವತಃ ಬರಬೇಕೆ? ಅಪರೂಪದ ಸಂದರ್ಭ - ಶ್ರೀ ಬುರ್ಲಿಯವರು ಮಣೆಹಾಕಿ ಅವರನ್ನು ಕುಳ್ಳಿರಿಸಿ. "ಅಕಸ್ಮಾತ್ ಬಂದಿದ್ದೀರಿ, ಇಲ್ಲೇ ಊಟ ಮಾಡಬೇಕು" ಎಂದು ಉಪಚರಿಸಿದರು. ಗಳಗನಾಥರೂ "ರಾಯರೇ ಏಳಿರಿ. ಈ ಸಮಯಕ್ಕೆ ಬಂದವರಲ್ಲಿ ದೇವಾಂಶವಿರುತ್ತದೆ. ತಾವೂ ನಮ್ಮೊಂದಿಗೆ ಊಟ ಮಾಡಬೇಕು" ಎಂದರು.

ಆಗ ಶಂಕರರಾಯರು, "ಬುರ್ಲಿಯವರೇ, ನಾನು ಅಪರಾದಿ. ನನ್ನನ್ನು ಕ್ಷಮಿಸಿರಿ. ಹಿರಿಯರ, ಸರಸ್ವತಿಯ ಅಪಮಾನ ಇಂದು ಮಾಡಿದೆ" ಎಂದು ಗಳಗನಾಥರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದರು. ಆಗ ಗಳಗನಾಥರ ಕಂಠ ಬಿಗಿದು ಬಂತು. "ದೇವಾ ನನ್ನ ಪಾಪಕ್ಷಾಲನೆಗಾಗಿ ಅವರ ಮುಖದಲ್ಲಿ ನಿಂತು ನನ್ನನ್ನು ಬೈದಿ. ಪಾಪಕ್ಷಾಲನೆ ಆಯಿತೆಂದು ನನ್ನ ಮೇಲೆ ಕರುಣೆಸಲು ಅವರನ್ನು ಇಲ್ಲಿಗೆ ಕರೆತಂದೆಯಾ?" ಎಂದು ನುಡಿದು ರಾವಸಾಹೇಬರನ್ನು ಮೇಲಕ್ಕೆಬ್ಬಿಸಿ "ದೇವರು ನಿಮಗೆ ಕಲ್ಯಾಣ ಮಾಡಲಿ" ಎಂದು ಹರಸಿದರು.

ಮಾತು ಮುಂದುವರಿದು, "ರಾಯರೇ ಇದೆಲ್ಲವೂ ಅವನ ಆಟ. ನಮ್ಮ ಪಾಪಕ್ಷಾಲನೆಗಾಗಿ ಅವನು ಇಂಥ ಪ್ರಸಂಗ ತರುತ್ತಾನೆ. ಆದರೆ ಅಹಂಕಾರಿಗಳಾದ ನಾವು ಮಾತ್ರ ಇದಕ್ಕೆ ಅಪಮಾನವೆಂದು ಬಗೆಯುತ್ತೇವೆ. ಇದೊಂದು ಪಾಪಕ್ಷಾಲನೆಯ ಸುಲಭ ಮಾರ್ಗ. ಅದಕ್ಕಾಗಿಯೇ ಪುರಂದರದಾಸರು, ಅಪಮಾನವಾದರೆ ಒಳಿತು - ಎಂದು ಹಾಡಿದ್ದಾರೆ" ಎಂದರು.

ಶಂಕರರಾಯರು ತಿರುಗಿ ಹೋಗುವಾಗ ಗಳಗನಾಥರ ಎಲ್ಲ ಪುಸ್ತಕಗಳ ಬೆಲೆ ಎಷ್ಟೆಂದು ವಿಚಾರಿಸಿ ಅವನ್ನೆಲ್ಲ ಪಡೆದುಕೊಂಡರೆಂದು ಬೇರೆ ಹೇಳಬೇಕಿಲ್ಲ.

ಬೆಟಗೇರಿ ಕೃಷ್ಣಶರ್ಮರೆದುರು ಗಳಗನಾಥರೇ ಹೇಳಿದ ಒಂದು ಅನುಭವ ಕಥನವಿದು:

"ನನ್ನ ಪುಸ್ತಕಗಳ ಮಾರಾಟಕ್ಕಾಗಿ ಹೈದರಾಬಾದಿಗೆ ಹೋಗಿದ್ದೆ. ಅಲ್ಲಿಯ ಸಾಮಾನ್ಯ ಪರಿಸ್ಥಿತಿಯು ಕನ್ನಡಿಗರಿಂದ ನನಗೆ ಮನ್ನಣೆಯೂ ತಕ್ಕ ಮಟ್ಟಿಗೆ ಹಣವೂ ದೊರೆತೀತೇನೊ ಸರಿ. ನಮ್ಮ ಉತ್ತರ ಕರ್ನಾಟಕದಿಂದ ಅಲ್ಲಿಗೆ ಹೋಗಿ ನೆಲೆಸಿದ್ದ ಡಾಕ್ಟರರೊಬ್ಬರ ಕಡೆಗೂ ನಾನು ಹೋಗಿದ್ದೆ. ನಾನು ನನ್ನ ಪುಸ್ತಕಗಳ ಗಂಟನ್ನು ಹೊತ್ತುಕೊಂಡು ಹೋಗಿ ನಿಂತಾಗ ಅವರು ನನ್ನನ್ನು ಸ್ವಾಗತಿಸಲಿಲ್ಲ. ನಾನೇ ಒಂದು ಕುರ್ಚಿಯ ಮೇಲೆ ಕುಳಿತು ನಾನಾರೆಂಬುದನ್ನೂ ಏತಕ್ಕೆ ಬಂದಿರುವೆನೆಂಬುದನ್ನೂ ಹೇಳಿದೆ. ಆಗ ಡಾಕ್ಟರು 'ಓ! ನೀವೇ ಗಳಗನಾಥರೇನು? ನಿಮ್ಮ ಹೆಸರು ಕಿವಿಗೆ ಬಿದ್ದಿತ್ತು. ನಮಸ್ಕಾರ. ನಮ್ಮ ಮನೆಯಲ್ಲಿ ಯಾರಿಗೂ ಕನ್ನಡ ಪುಸ್ತಕ ಓದಲಿಕ್ಕೆ ಬರುವದಿಲ್ಲ. ಇಲ್ಲಿ ಕನ್ನಡಿಗರು ಸಾಕಷ್ಟು ಜನರಿದ್ದಾರೆ. ಅವರ ಬಳಿಗೆ ಹೋದರೆ ಅಲ್ಪಸ್ವಲ್ಪ ಸಹಾಯ ನಿಮಗೆ ದೊರಕೀತು!' ಎಂದರು. ನಾನು ಅವರಿಗೆ ಬಿಚ್ಚುನುಡಿಗಳಲ್ಲಿ ಹೇಳಿದೆ- 'ನೀವೂ ಕನ್ನಡಿಗರೆಂದು ನಿಮ್ಮ ಬಳಿಗೆ ಬಂದಿದ್ದೇನೆ. ಪುಸ್ತಕಕ್ಕಾಗಿ ನೀವು ನನಗೆ ಕೊಟ್ಟ ಹಣ ವ್ಯರ್ಥವಾಗದು. ದಯವಿಟ್ಟು ಕೆಲವು ಪುಸ್ತಕಗಳನ್ನಾದರೂ ಕೊಳ್ಳಿರಿ' ಆಗ ಅವರು ಜೇಬಿನಿಂದ ಎಂಟಾಣೆ ನಾಣ್ಯವೊಂದನ್ನು ತೆಗೆದಿಟ್ಟು 'ಇಷ್ಟು ಬೆಲೆಗೆ ಯಾವ ಪುಸ್ತಕ ಬರುವದೊ ಕೊಟುಬಿಡ್ರಿ' ಎಂದು ಹೇಳಿದರು. ನಾನು ಅಷ್ಟೇ ಬೆಲೆಯ, ಚಿಕ್ಕ ಪುಸ್ತಕವನ್ನು

ಅವರ ಟೇಬಲ್ಲಿನ ಮೇಲೆ ಇರಿಸಿ, ಎಂಟಾಣೆ ತೆಗೆದುಕೊಂಡು ಅಲ್ಲಿಂದ ಹೊರಟುಬಿಟ್ಟೆನು. ಮನಸ್ಸು ಕೆಲವು ಸಮಯ ತುಂಬ ಉದ್ವೇಗಗೊಂಡಿತ್ತು.

ಆದರೆ ಆಶ್ಚರ್ಯದ ಸಂಗತಿ ಎಂದರೆ, ಅಂದೆಯೆ ರಾತ್ರಿ ೮ ಗಂಟೆಗೆ, ಆ ಡಾಕ್ಟರರ ಹೆಂಡತಿ ನನ್ನನ್ನು ಹುಡುಕಿಕೊಂಡು ನಾನಿದ್ದಲ್ಲಿಗೆ ಬಂದರು. ಅವರು ಬೊಮ್ಮನಹಳ್ಳಿಯವರಂತೆ. ನನ್ನ ಪುಸ್ತಕಗಳನ್ನೆಲ್ಲ ಬಿಡದೆ ಓದಿದವರಂತೆ. ಡಾಕ್ಟರರ ಟೇಬಲ್ಲಿನ ಮೇಲೆ ಇರಿಸಿ ಬಂದ ಪುಸ್ತಕವನ್ನು ನೋಡಿದಾಗ ನಾನು ಅಲ್ಲಿ ಬಂದ ವಿಷಯ ಗೊತ್ತಾಯಿತಂತೆ. ಆಕೆ ಮುಖದ ಮೇಲೆ ಪಶ್ಚಾತ್ತಾಪ ಭಾವವನ್ನು ಮೂಡಿಸಿಕೊಂಡೇ ನನ್ನಲ್ಲಿಗೆ ಬಂದಿದ್ದರು. ತಮ್ಮ ಪತಿಯ ನಡೆವಳಿಕೆಗಾಗಿ ನನ್ನಲ್ಲಿ ಕ್ಷಮೆಯನ್ನು ಯಾಚಿಸಿ ಮರುದಿನ ಮಧ್ಯಾಹ್ನ ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಔತಣವಿತ್ತರು. ಆಕೆಯ ಆತ್ಮೀಯ ಭಾವದ ಔತಣವನ್ನು ತಿರಸ್ಕರಿಸಲಿಕ್ಕೆ ನನ್ನಿಂದಾಗಲಿಲ್ಲ.

ಮರುದಿವಸ ನನ್ನನ್ನು ಕರೆದುಕೊಂಡು ಹೋಗಲು ಡಾಕ್ಟರರ ಕಾರು ಬಂದಿತು. ಹೋದ ಮೇಲೆ ಸವಿಯಡಿಗೆಯ ಊಟ – ಡಾಕ್ಟರರೊಡನೆ ಸವಿಮಾತಿನೊಂದಿಗೆ ನಡೆಯಿತು. ಊಟವಾದ ಮೇಲೆ ಆ ಮಹಾತಾಯಿಯ ಹೇಳಿಕೆಯಂತೆ ನಾನು ಜತೆಗೆ ತೆಗೆದುಕೊಂಡು ಹೋದ ನನ್ನ ಪ್ರತಿಯೊಂದು ಪುಸ್ತಕದ ಒಂದೊಂದು ಪ್ರತಿಯನ್ನು ಅವರಿಗೆ ಕೊಟ್ಟಾಯಿತು. ಇನ್ನೂರಾ ಮೂವತ್ತು ರೂಪಾಯಿ – ಆ ಪುಸ್ತಕಗಳ ಬೆಲೆ. ಮೊದಲ ದಿನ ಮನಸ್ಸಿಲ್ಲದೇ ಕೊಟ್ಟ ಆ ಡಾಕ್ಟರರೇ ಆಗ, ಹೆಂಡತಿಯ ದಾಕ್ಷಿಣ್ಯವಾಗಿ, ಇನ್ನೂರಾ ಮೂವತ್ತು ರೂಪಾಯಿಗಳನ್ನು ತಮ್ಮ ಪೆಟ್ಟಿಗೆಯಿಂದಲೇ ತೆಗೆದು, ಸಮಾಧಾನ ಮನಸ್ಕರಾಗಿಯೇ ನನಗೆ ಸಲ್ಲಿಸಿದರು. ಇಷ್ಟೇ ಅಲ್ಲ, ಮೊದಲ ದಿನದ ತಮ್ಮ ಉಪೇಕ್ಷೆಯ ವರ್ತನೆಗಾಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದರು. ಇಂತಹ ಅನುಭವಗಳು ನಿತ್ಯವೂ ನನಗೆ ಬರುತ್ತಲಿವೆ. ನನ್ನ ಪುಸ್ತಕಗಳನ್ನು ಮಾರಾಟ ಮಾಡಲಿಕ್ಕೆ ಬೇರೆಯವರ 'ವಶೀಲಿ' ಬೇಕಾಗುತ್ತದೆ."

–ಪುಸ್ತಕಗಳನ್ನು ಕೊಳ್ಳುವುದಕ್ಕೆ ದುಡ್ಡಿನ ಹೆಚ್ಚಿನ ಅನುಕೂಲ ವಿಲ್ಲದವರನ್ನೂ ಅವರು ಕೇಳುತ್ತಿದ್ದರು. ಆಗ ಅವರು ಅರೆಮನದಿಂದ

ಮಾತಾಡಿದರೆ, 'ಇದು ಕನ್ನಡದೊಳಗೆ ಬರೆದದ್ದು ಇದರೊಳಗೆ ಇಂಥಿಂಥ ವಿಚಾರಗಳಿವೆ, ಅವಶ್ಯ ಓದು. ಸಾಧ್ಯವಾದರೆ ರೊಕ್ಕ ಕೊಡು' ಎನ್ನುತ್ತಿದ್ದರು.

ಪ. ರಾಮಕೃಷ್ಣಶಾಸ್ತ್ರಿಗಳೆಂಬವರು ಮಾರಾಟಗಾರ ಗಳಗನಾಥರು ತಮ್ಮ ಮನೆಗೆ ಬಂದಿದ್ದ ಘಟನೆಯನ್ನು ಈಚೆಗೆ ವರದಿಮಾಡಿದ್ದಾರೆ. ಪುಸ್ತಕಕೊಳ್ಳಲು ಅವರ ತಾಯಿಯ ಬಳಿ ಹಣವಿಲ್ಲದಾಗ, ಆಕೆ ಮನೆಯಲ್ಲಿಯ ಆಭರಣವನ್ನು ಒತ್ತೆ ಇಟ್ಟಾದರೂ ಪುಸ್ತಕ ಕೊಳ್ಳುವ ಆತುರವನ್ನು ತೋರಿದವರಂತೆ. ಕನ್ನಡ ನಾಡಿನ ಹೆಣ್ಣುಮಕ್ಕಳ ಈ ವಾಚನಪ್ರೀತಿಯನ್ನು ನೆನೆದಾಗ ಅವರನ್ನು ವಿದ್ಯೆ ಕಲಿಯದವರು, ಅಶಿಕ್ಷಿತರು ಎಂದು ಹೇಳಲುಂಟೆ? ಅವರು ಹೈಸ್ಕೂಲು ಕಾಲೇಜುಗಳ ಕಟ್ಟೆಯನ್ನು ಏರಿರದಿದ್ದರೂ ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಅವರು ಸುಸಂಸ್ಕೃತ ನಡೆವಳಿಕೆಯನ್ನು ರೂಢಿಸಿ ಕೊಂಡಿದ್ದರೆನ್ನ ಬೇಕಾಗುವುದು. ಗಳಗನಾಥರಂತಹ ಬರೆಹ ಮತ್ತು ಬದುಕು ಆ ರೀತಿಯ ಸಂಸ್ಕೃತಿ ಸಂವರ್ಧನೆಗೆ ನೆರವಾಗಬಲ್ಲುದಲ್ಲವೆ.

ಬೀಚಿಯವರು ಹರಪನಹಳ್ಳಿಯ ಸಂಸ್ಕೃತ ಶಾಸ್ತ್ರಿಗಳೊಬ್ಬರ ವ್ಯಕ್ತಿ ಚಿತ್ರದಲ್ಲಿ ಕೊಟ್ಟ ಘಟನೆಯಿದು. ಈ ಶಾಸ್ತ್ರಿಗಳು ಧರ್ಮಾರ್ಥ ಚಿಕಿತ್ಸಾಲಯವನ್ನೂ ನಡಿಸುತ್ತಿದ್ದರು. ಅದರ ಮುಂದು ಮಾಮೂಲಿನಂತೆ ಜನಜಾತ್ರೆ –

"ಅಳುವ ಮಕ್ಕಳು, ಸಂತೈಸುವ ತಾಯಂದಿರು, ಅವರನ್ನು ಗದರಿಸುವಂತಿಲ್ಲ. ಇತ್ತ ಶಾಸ್ತ್ರಿಗಳಿಗೆ ಒಂದೇ ಅವಸರ– ಪಾಠಶಾಲೆಗೆ ತಡವಾಗಿದೆಯೆಂದು. ಈ ಗಡಿಬಿಡಿಯಲ್ಲಿ ಅದಾವನೋ ಒಬ್ಬ ಮುದುಕ – ಹರಕಲು ಗಡ್ಡ, ಕೆಂಬಣ್ಣದ ಪಂಜೆ ಉಟ್ಟಿದ್ದಾನೆ. ಭುಜಕ್ಕೊಂದು ನೇತಾಡುವ ಹಸಿಬೆ. ನಿಂತಲ್ಲಿಂದಲೇ ಕೂಗಿ ಕೇಳಿದ – 'ಪುಸ್ತಕ ನೋಡ್ತೀರೇನು?' 'ಹೋಗಪಾ ಮಾರಾಯ. ನಿನ್ನ ಪುಸ್ತಕಾ ಬ್ಯಾಡಾ, ಏನೂ ಸುಡುಗಾಡೂ ಬ್ಯಾಡಾ.'– ಮುಖ ಕಿವಿಚಿಕೊಂಡು ಗದರಿಸಿಬಿಟ್ಟರು – ಶಾಸ್ತ್ರಿಗಳು. ಬಜ್ಜೆಯಾದ ಹಸಿಬೆ ಹೊತ್ತು ನಡೆದ ಮುದುಕ.

ಆಸ್ಪತ್ರೆ ಮುಗಿಯಿತು. ಹಿಂಬದಿಗೇ ಇದ್ದ ಮನೆಗೆ ಬಂದು, ಶಾಸ್ತ್ರಿಗಳು ಸ್ನಾನಕ್ಕಿಳಿದರು. ಶಿವಪೂಜೆ ಆಗಬೇಕು. ಮಣೆಹಾಕಿ ವಿಭೂತಿ ಇಟ್ಟು ಎಲ್ಲವನ್ನೂ ಅಣಿಮಾಡಿತ್ತು – ಪುಟ್ಟಮಗಳು. ಆಚೆ ಮನೆಯವರೊಬ್ಬರು ಒಳಬಂದು ಕೇಳಿದರು – 'ಬುಕ್ಕಾ ಕೊಣುಕೊಂಡ್ರೇನು? ಗಳಗನಾಥ ಬಂದಿದ್ನಲ್ಲಾ.'

ಅದನ್ನು ಕೇಳಿ ಹಾವು ತುಳಿದವರಂತಾದರು ಶಾಸ್ತ್ರಿಗಳು. ಆಚೆಮನೆಯವರು ಮುಂದುವರಿದು 'ಹಸಿಬೀ ಹೊತಗೊಂಡು ಬರಲಿಲ್ಲೇ ಮುದುಕಾ? ನಾನೇ ನಿಮ್ಮ ಮನೆಗೆ ಕಳಿಸಿದ್ದೆ' - ಎಂದರು. 'ಶಿವಶಿವಾ' ಎಂದು ತಲೆಗೆ ಕೈಯಿಟ್ಟರು ಶಾಸ್ತ್ರಿಗಳು - ನನಗಿದನ್ನು ಹೇಳುವಾಗ. 'ಎಂಥಾ ಮೂರ್ಖನಪಾ ನಾನು. ಬಾಗಿಲಿಗೆ ಬಂದ ಗಳಗನಾಥರನ್ನು ಗದರಿಸಿ ಕಳಿಸಿಬಿಟ್ಟೆ. ಸರಸ್ವತಮ್ಮನಿಗೇ ಅವಮಾನ - ಅದೂ ನನ್ನ ಮನಿಯಾಗೇ."

ಎಂದೋ ನಡೆದ ಘಟನೆ. ಎಷ್ಟೋ ಬಾರಿ ಹೇಳಿದ್ದರವರು. ಈಗ ಮತ್ತೆ ಶಾಸ್ತ್ರಿಗಳ ಕಣ್ಣಂಚಿನಲ್ಲಿ ನೀರು, 'ಸತ್ತೆ, ಕೆಟ್ಟೆ ಅಂತ ಒಂದೇ ಓಟ ಓಡಿದೆ, ಭೀಮಸೇನ್ರಾವ್' ಎಂದರು. 'ಶಿವಪೂಜೆ?' ಎಂದು ನಾನು ಕೇಳಿದೆ. 'ಯಾಕೆ ಮಾಡೋದು' ಶಿವ ತಗೋತಾನೇನು ನನ್ನ ಪೂಜೇನ, ಬಾಗಿಲಿಗೆ ಬಂದ ಶಿವನ ಬೈದು ಕಳಿಸಿ ಇಲ್ಲಿ ಪೂಜೆ ಮಾಡಿದ್ರ, ಏನು ಬಂತಪಾ?' ಎಂದು ಮನೆಯಿಂದ ಹೊರಬಿದ್ದರು.

ಗಳಗನಾಥರನ್ನು ಪತ್ತೆಮಾಡುವುದು ಎಷ್ಟೂ ಕಷ್ಟವಾಗಲಿಲ್ಲ. ಊರ ಹೊರಗಿನ ಈಶ್ವರ ದೇವಸ್ಥಾನದ ಬಾವಿಯಲ್ಲಿ ಮುಳುಗೆದ್ದು ಸಂಧ್ಯಾವಂದನೆ ಮಾಡುತ್ತಿದ್ದರು. ಅವರನ್ನು ಕಂಡು ದೂರದಿಂದಲೇ ದೀರ್ಘದಂಡ ನಮಸ್ಕಾರ ಮಾಡಿಬಿಟ್ಟರು ಶಾಸ್ತ್ರಿಗಳು. 'ನನ್ನಿಂದ ಮಹಾಪರಾಧವಾಗಿದೆ ಸ್ವಾಮೀ, ಕ್ಷಮಿಸಬೇಕು' ಎಂದರು. ಗಳಗನಾಥರ ಸ್ಥಿತಿ - ಏನಾಗಿರಬೇಕು, ಪಾಪ! ಓಡಿಬಂದು, ಕೈಹಿಡಿದು ಎಬ್ಬಿಸಿ ಪ್ರತಿನಮಸ್ಕಾರ ಮಾಡಿದರಂತೆ. ಗಳಗನಾಥರಿಗೆ ಶಾಸ್ತ್ರಿಗಳ ಆಗ್ರಹದ ಔತಣ. ಆದರೆ ವೀರಶೈವರಾದ ಶಾಸ್ತ್ರಿಗಳ ಮನೆಯಲ್ಲಿ ಅವರು ಉಣ್ಣುವಂತಿಲ್ಲ. 'ಬ್ಯಾಡ ಸ್ವಾಮೀ, ನೀವೇ ಅಡಿಗೆ ಮಾಡಿಕೊಳ್ಳಿ. ಅಕ್ಕಿ, ಹಾಲು, ಮೊಸರು ಕಾಯಿಪಲ್ಲೆ ಎಲ್ಲಾ ಕೊಡ್ತೀನಿ' ಶಾಸ್ತ್ರಿಗಳ ಪ್ರೀತಿವಿಶ್ವಾಸಕ್ಕೆ ಗಳಗನಾಥರು ಮಾರುಹೋದರು....."

ಇಂಥ ಸಂದರ್ಭಗಳಿಗೆ ಲೆಕ್ಕವೇ ಇಲ್ಲ. ಗಳಗನಾಥರ ಕೃತಿಗಳು ನಾಡಿನ ಮೂಲೆಮೂಲೆಗೂ ಚದರಿಹೋಗಿ, ಅವರು ಆರಾಧ್ಯಮೂರ್ತಿಯಾಗಿದ್ದರೆನ್ನುವುದರಲ್ಲಿ ಸಂದೇಹವೇನಿದೆ? ಗೃಹಿಣಿಯರು, ಪದವೀಧರರು, ಪಂಡಿತರು, ಹಳ್ಳಿಗರು - ಎಲ್ಲರಿಗೂ ಅವರು ಅಚ್ಚುಮೆಚ್ಚಿನವರಾಗಿದ್ದರು. ಸಾತ್ವಿಕಚೇತನವಿರುವಲ್ಲೆಲ್ಲ ಗಳಗನಾಥರು ಸನ್ನಿಹಿತರಾಗಿದ್ದರು. ಈ ಸಂಚಾರದಿಂದಾಗಿ ಅವರ ಸದ್ಗುಣಗಳು, ಪರಿಶುದ್ಧ ಆಚಾರ-ವಿಚಾರಗಳು

ಜನರಿಗೆ ಸ್ಫುಟವಾಗಿ ಗೋಚರವಾದುವು. ಅವರ ಲೇಖನದಂತೆ ಅವರ ವ್ಯಕ್ತಿತ್ವವೂ ದೊಡ್ಡದೆಂಬ ಕಲ್ಪನೆ ಅವರ ಸಂಪರ್ಕ ಬಂದವರಿಗೆಲ್ಲ ಉಂಟಾಗದಿರಲಿಲ್ಲ. ಜನತೆ ಅವರನ್ನು ಇಷ್ಟೊಂದು ಆರಾಧಿಸುತ್ತಿದ್ದುದರ ಗುಟ್ಟು. ಅವರು ಕನ್ನಡಿಗರನ್ನು ಆರಾಧಿಸುತ್ತಿದ್ದರೆಂಬುದೇ ಆಗಿದೆ.

ಅವರದು ಸರಳ ಮನಸ್ಸಿನ, ಸ್ವಾಭಿಮಾನಪೂರ್ಣವಾದ ವ್ಯಕ್ತಿತ್ವ, ಹೃದಯ ವೈಶಾಲ್ಯವೇ ಅದರ ತಳಹದಿ. ವಿಚಾರ, ಮಾತು ಮತ್ತು ಕೃತಿ – ಈ ತ್ರಿಕರಣಶುದ್ಧಿಯೇ ಆ ವ್ಯಕ್ತಿತ್ವದ ಜೀವನಾಡಿ. ಗಳಗನಾಥರು ಸನಾತನ ಧರ್ಮದ ಕಟ್ಟಾಭಿಮಾನಿಗಳಾದರೂ, ಧಾರ್ಮಿಕ ಡಂಭಾಚಾರ ಅವರಿಗೆ ಸೇರುತ್ತಿರಲಿಲ್ಲ. ಓರ್ವ ವೀರಶೈವ ತರುಣನು ಅವರಲ್ಲಿಗೆ ಬಂದಾಗ, ಗಳಗನಾಥರು ಆತನಿಗೆ ತಿನ್ನಲು ಉಂಡಿ ಅವಲಕ್ಕಿಯನ್ನು ಕೊಟ್ಟರು. ಅವನಿಗೂ ಸಂಕೋಚ! ಆಗ ಗಳಗನಾಥರು ತಮ್ಮ ಪಾಲಿನದನ್ನು ಅವನ ಮುಂದೆ ಚಾಚಿ, 'ಇದನ್ನು ನೀವು ಮುಟ್ಟಿರಿ. ನಾನು ತಿನ್ನುತ್ತೇನೆ' ಎಂದರಂತೆ.

ಸ್ವಾಮಿಗಳೊಬ್ಬರ ಪಾದಪೂಜೆ (ಸಂಜಾತ) ಮಾಡಿಸಿದ್ದ ಗಳಗನಾಥರಿಗೆ ರಾತ್ರಿಯ ಮಂಗಳಾರತಿ ಹಾಗೂ ತೀರ್ಥಪ್ರಸಾದಕ್ಕೆ ಕರೆ ಹೋಗಿದ್ದಿತು. ಅವರು ತಮ್ಮ ವಿದ್ಯಾರ್ಥಿಗಳೊಡನೆ ಹೋದಾಗ ೯ ಗಂಟೆ. ಆಗ ಸ್ವಾಮಿಗಳು ಆರತಿ-ಮಿಗಿಸಿಬಿಟ್ಟಿದ್ದರು. ಮರುದಿನವಾದರೂ ತೀರ್ಥಪ್ರಸಾದ ಲಭಿಸಲಿ ಎಂದು ಸಮಯಕ್ಕೆ ಸರಿಯಾಗಿ ಹೋದರು. ಆ ದಿನ ಓರ್ವ ದೊಡ್ಡ ಆದಿಕಾರಿಯು ಪಾದಪೂಜೆ ಮಾಡಿಸಿದ್ದನು. ಸ್ವಾಮಿಗಳು ಆ ಅಧಿಕಾರಿಯು ಬರುವವರೆಗೆ ತಡೆದರು. ಆರತಿ ಆದನಂತರ, ಗಳಗನಾಥರು 'ಬಡವ, ಬಲ್ಲಿದ ಎಂಬ ಭೇದ ಈ ಮಠದಲ್ಲಿಯೂ ಇರುವುದಲ್ಲ!' ಎಂದು ನಿರ್ಭೀತೆಯಿಂದ ಕೇಳಿಬಿಟ್ಟರಂತೆ. ತಾಸಿನವರೆಗೆ ಇಬ್ಬರಿಗೂ ವಾಗ್ವಾದ ವಾಗ್ವಾದ, ಸಿಟ್ಟಿಗೆದ್ದ ಸ್ವಾಮಿಗಳು ಶಾಪದ ಮಾತನ್ನು ಆಡಿದಾಗ ಗಳಗನಾಥರು "ನೀವು ಶಾಟಿಯ ಸನ್ಯಾಸಿಗಳಿರಬಹುದು. ಆದರೆ ನಾನು ಹೃದಯಸ್ಥ ಸನ್ಯಾಸಿ. ನೀವು ಕೊಟ್ಟ ಶಾಪವನ್ನು ನನ್ನ ಗುರುಗಳ ಅನುಗ್ರಹದಿಂದ ಸಹಿಸಿಕೊಳ್ಳಬಲ್ಲೆ" ಎಂದು ಉತ್ತರಕೊಟ್ಟರಂತೆ. ಈ ನಿಲುಮೆಯ ಹಿಂದಿನ ನೈತಿಕ ಧೈರ್ಯ, ಸಾಧನೆಗಳನ್ನು ಗಮನಿಸಬೇಕು. ಆರ್. ಕಲ್ಯಾಣಮ್ಮನವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯೊಂದರಲ್ಲಿ ಓರ್ವ ಭಾಷಣಕಾರರು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಿನ ಹೇಳಿಕೆಯನ್ನು ಹೀನಾಯ ಮಾಡಿದಾಗ ಗಳಗನಾಥರು

ಸಿಡಿದೆದ್ದು ಸ್ತ್ರೀಯರ ವಿಷಯದಲ್ಲಿ ಮನುವಿಗೆ ಆದರ ಭಾವವಿತ್ತೆಂಬುದನ್ನು ಸಮರ್ಥನ ಮಾಡಿದರು. ಪಂ. ತಾರಾನಾಥರು ಧಾರವಾಡದ ಕಡಪಾಶ್ಯೆಲಿನಲ್ಲಿ ಭಾಷಣ ಮಾಡುತ್ತ, 'ಅಥರ್ವಣವನ್ನು ಆಧರಿಸಿ ಯಾಜ್ಞವಲ್ಕ್ಯರು ಮನುಷ್ಯನ ದೇಹದಲ್ಲಿ ಇಷ್ಟು ಎಲುಬುಗಳಿವೆಯೆಂದು ಹೇಳಿದ್ದಾರೆ. ಅದು ಸರಿ ಅಲ್ಲ. ನಾನೇ ಸ್ವತಃ ಆಪರೇಷನ್ ಮಾಡಿ ನೋಡಿದ್ದೇನೆ' ಎಂದು ಹೇಳಿದಾಗ ಗಳಗನಾಥರು ತಕ್ಷಣವೇ ಎದ್ದು ನಿಂತು "ನೀವೆಲ್ಲೋ ನಿದ್ದೆಗಣ್ಣಿನಲ್ಲಿ ಮಾಡಿರಬೇಕು. ಯಾಜ್ಞವಲ್ಕ್ಯರು ಹೇಳಿದ್ದೇ ಸರಿ. ಆ ದ್ರಷ್ಟಾರರು ತಪ್ಪು ಮಾಡಲಾರರು" ಎಂದರಂತೆ.

ಈ ದಿಟ್ಟತನದಲ್ಲಿ ಹಟಮಾರಿತನವಿರಲಿಲ್ಲ. ತಮ್ಮದು ತಪ್ಪಿದ್ದರೆ ಅದನ್ನು ಪ್ರಾಂಜಲವಾಗಿ ಒಪ್ಪಿಕೊಳ್ಳಲು ಗಳಗನಾಥರು ಹಿಂಜರಿದವರೇ ಅಲ್ಲ. ಕೀರ್ತನೆ ಮಾಡುತ್ತಿದ್ದ ಶಾಸ್ತ್ರಿಗಳೊಬ್ಬರು ಒಮ್ಮೆ ವಿಷಯಾಂತರ ಮಾಡಿದರು - ಎಂಬುದಾಗಿ ಗಳಗನಾಥರು ಆಕ್ಷೇಪಿಸಿದರು. ಆಗ ಕೀರ್ತನಕಾರರು ಹಾಗೂ ನೆರೆದವರಲ್ಲಿ ಹಲವರು 'ಹಾಗೆ ಆಗಿಲ್ಲ' ಎಂದು ಪ್ರತಿಯಾಗಿ ವಾದಿಸಿದರು. ಗಳಗನಾಥರಿಗೆ ಅವರ ವಾದ ಬಹುಮಟ್ಟಿಗೆ ಸರಿ ಕಂಡಿತು. ಕೂಡಲೇ ಶಾಸ್ತ್ರಿಗಳಿಗೆ ಸಾಷ್ಟಾಂಗವೆರಗಿ ಕ್ಷಮೆ ಕೇಳಿದರು.

ಅನ್ಯರ ಕಷ್ಟಕಾರ್ಪಣ್ಯಗಳ ವಿಚಾರದಲ್ಲಿ ಅವರಿಗೆ ಅತೀವ ಅನುಕಂಪೆ. ಹಾನಗಲ್ಲಿನ ಬಡಬ್ರಾಹ್ಮಣನೊಬ್ಬ ಮಗಳ ಮದುವೆಯನ್ನು ಹಮ್ಮಿಕೊಂಡು "ಗಂಟೆನೊಳಗಿನ ಸೀರೆ ಒಂದನ್ನು ನೋಡಿ ಇಟ್ಟೇನಿ. ಆದರೇನು, ರೊಕ್ಕ ತರಲಿಲ್ಲ" ಎಂಬುದಾಗಿ ಸುತ್ತು ಬಳಸಿನಲ್ಲಿ ಹೇಳುತ್ತಿದ್ದಾಗ ಗಳಗನಾಥರು ತಮ್ಮ ಮೇಜಿನ ಡ್ರಾವರದಿಂದ ೮೦ ರೂ.ಗಳನ್ನು ತೆಗೆದುಕೊಟ್ಟುಬಿಟ್ಟರಂತೆ. ರತ್ನಗಿರಿಯ ತಾಂಬೇಶಾಸ್ತ್ರಿಗಳು ಸಂಸ್ಕೃತ ಗ್ರಂಥಗಳನ್ನು ಮುದ್ರಿಸುವ ವಿಚಾರ ಮಾಡಿದಾಗ ಗಳಗನಾಥರು ನಿಸ್ಸಂಕೋಚವಾಗಿ ತಮ್ಮ ಒಂದು ಹ್ಯಾಂಡ್ ಪ್ರೆಸ್ಸನ್ನೇ ಕೊಟ್ಟರು. ಆಳು ದುರಗಪ್ಪ ಹರಕು ಅಂಗಿ ಹಾಕಿ ಕೊಂಡು ಚಳಿಯಲ್ಲಿ ನಡುಗುತ್ತಿದ್ದಾನೆಂದು ಅನಿಸಿತು. ತಕ್ಷಣವೇ ತಮ್ಮ ಮೈಮೇಲಿನ ಬಗಲಬಂಡಿಯನ್ನು ತೆಗೆದು ಅವನಿಗೆ ಕೊಟ್ಟರಂತೆ. ದಾನ ಕೊಡುವಾಗ ಇವರು ನಮ್ಮವರು ನಮ್ಮ ಮತದವರು, ನಮ್ಮ ಊರಿನವರು ಇವಾವುದನ್ನೂ ಗಳಗನಾಥರು ಲೆಕ್ಕಿಸಿದವರೇ ಅಲ್ಲ. ಇಂಥ ನೂರಾರು ಘಟನೆಗಳನ್ನು ಹಿರಿಯ ತಲೆಮಾರಿನವರು ನೆನೆಯಬಲ್ಲರು.

ಪ್ರಾಣಿಗಳ ವಿಚಾರದಲ್ಲಿಯೂ ಅವರ ಅನುಕಂಪೆ ಸಹಜಸ್ಫೂರ್ತವಾಗಿ ಹೊರಹೊಮ್ಮುತ್ತಿತ್ತು. ತಮ್ಮ ಗೋಶಾಲೆಯ ಯಾವ ಹಸುವನ್ನೂ ಅದು ಸತ್ತಮೇಲೆ ಮಾದಿಗರಿಗೆ ಕೊಟ್ಟುದಿಲ್ಲ. ಅವರು ತಮ್ಮ ಗೋವುಗಳಿಗೆ ಕಬ್ಬು ತಿನ್ನಿಸಿದ ಕಥೆ ಅನೇಕರಿಗೆ ಪರಿಚಿತವಾದದ್ದೇ. ಅದರ ಹಿನ್ನೆಲೆ ಮಾತ್ರ ಹೀಗಿದೆ.*

ಆಗ ಗಳಗನಾಥರು ಗದುಗಿನಲ್ಲಿ ಇದ್ದರು. ಮಲಗಿದಾಗ ಮನೆಯಲ್ಲಿ ಗೋವುಗಳು ಉಪವಾಸ ಇವೆಯೆಂದು ಕನಸುಬಿದ್ದಿತು. ಮನೆಗೆ ಬಂದು ನೋಡಿದರೆ ಪರಿಸ್ಥಿತಿ ಹಾಗೇ ಇತ್ತು. 'ನೀವು ಉಪವಾಸವಿದ್ದಿರಾ?' ಅವಕ್ಕೆ ಸೊಪ್ಪುಸೆದೆ ಏನೂ ಇಲ್ಲ - ಎಂದು ಮನೆಯಲ್ಲಿದ್ದವರನ್ನೆಲ್ಲ ತರಾಟೆಗೆ ತೆಗೆದುಕೊಂಡರು. ಈ ನಿಷ್ಪಾಪದ ಪ್ರಾಣಿಗಳಿಗೆ ಸಾದಾದಂಟೂ ಇಲ್ಲದೇ ಹೋಯಿತ ಎಂಬ ಸಾತ್ವಿಕ ಸಂತಾಪದಲ್ಲಿ, ಬೆಳೆಯುತ್ತಿರುವ ಕಬ್ಬಿನ ಹೊಲವನ್ನೇ ಖರೀದಿಗೆ ಹಿಡಿದು ಸಂಜೆಯೊಳಗಾಗಿ ಮನೆಯಲ್ಲಿದ್ದವರಿಂದಲೆ ಕೊಯ್ಸಿ, ಹೊರಿಸಿ ಗೋಶಾಲೆಗೆ ತಂದು ಹಾಕಿಸಿದರು!

---

* ಅವರ ಅಳಿಯ ಶಂಕರಪ್ಪ ಅವರು ಹೇಳಿದಂತೆ.

೧೯೨೯-೧೯೪೨

# ಮಹಾಭಾರತಾದಿ ಧಾರ್ಮಿಕ ಲೇಖನ

ಬೆಂಗಳೂರಿನಿಂದ ಹಿಂತಿರುಗಿದ ಕಾಲಕ್ಕೆ ಗಳಗನಾಥರಿಗೆ ಅರವತ್ತು ವರ್ಷದ ಗಡುವು ಸಮೀಪಿಸಿದ್ದಿತು. ಸದಾ ಕರ್ತವ್ಯನಿರತರಾದ ಅವರ ಆಯುಷ್ಕ್ರಮಣವು ಭರದಿಂದ ಸಾಗಿದ್ದುದರ ಕಲ್ಪನೆಯೇ ಇರಲಿಲ್ಲ. ಇತ್ತ ಮುಪ್ಪು 'ನನ್ನ ಸೀಮೆಯಲ್ಲಿ ಕಾಲಿಟ್ಟಿದ್ದೀಯೆ' ಎಂಬುದಾಗಿ ಎಚ್ಚರಿಸುತ್ತಿದೆಯೆಂಬಂತೆ ಅವರ ಮೈಯಲ್ಲಿ ಆಗ ಸ್ವಸ್ಥವಿರಲಿಲ್ಲ.

ಆದರೂ ಧರ್ಮನಿಷ್ಠರಾದ ಅವರು ತಮ್ಮ ಷಷ್ಟಿಪೂರ್ತಿ ಸಮಾರಂಭವನ್ನು ವೈಭವದಿಂದಲೇ ಆಚರಿಸಲು ನಿರ್ಧರಿಸಿ, ಅನೇಕ ವಿದ್ವಾಂಸರಿಗೂ, ಇಷ್ಟಮಿತ್ರರಿಗೂ ಆಮಂತ್ರಣ ಕಳಿಸಿದರು. ಇವರನ್ನು ಆಶೀರ್ವದಿಸಲು ಬಂದವರಲ್ಲಿ, ಲೋಕಾಪುರದ ಶ್ರೀ ಜ್ಞಾನೇಶ್ವರ ಮಹಾರಾಜರು, ಶ್ರೀ ಕೃಷ್ಣಾನಂದ ಸ್ವಾಮಿಗಳು ಮತ್ತು ಗುರುಪತ್ನಿಯಾದ ಶ್ರೀಮತಿ ರಾಧಾಬಾಯಿ ಕರಂದೀಕರರು ಪ್ರಮುಖರು. ತುಲಾಭಾರ ಮುಂತಾದ ಧಾರ್ಮಿಕ ಕಾರ್ಯಗಳ ಜೊತೆಗೆ ಕೀರ್ತನ, ಪ್ರವಚನಗಳೂ ಜರುಗಿದವು. ವಿದ್ವದ್ರತ್ನ ಶ್ರೀ ನಾಗೇಶ ಶಾಸ್ತ್ರಿಗಳು 'ಈಶ್ವರೋಪಾಸನೆ - ಲೋಕಸೇವೆಗಳಲ್ಲಿ ಆಯುಷ್ಯವನ್ನು ಕಳೆಯುವವರ ಜೀವನವೇ ಜೀವನವು. ಅಂಥವರ ಆಯುರ್ವೃದ್ಧಿಗಾಗಿ ಯತ್ನಿಸುವುದು ಪ್ರತಿ ಒಬ್ಬರ ಕರ್ತವ್ಯವಾಗಿದೆ' ಎಂದು ಆರಂಭಿಸಿ, ಆಯುಷ್ಯದ ಸದುಪಯೋಗ ಮಾಡುವ ರೀತಿಯನ್ನು ಕುರಿತು ಭಾಷಣ ಮಾಡಿದರು. ಅಲ್ಲಿ ನೆರೆದಿದ್ದ ವಿಪ್ರಸ್ತೋಮದ ಹಾಗೂ ಇತರ ಮಿತ್ರರ 'ಆಶೀರ್ವಾದ'ವು ಗಳಗನಾಥರ

ಚೈತನ್ಯವನ್ನು ವರ್ಧಿಸಿತು. ಕೆಲವು ತಿಂಗಳು ಅನಂತರ ಕೂಡಲಿ ಶೃಂಗೇರಿ ಜಗದ್ಗುರುಗಳ ಪೀಠಾಂತರ ಸಮಾರಂಭವು ಗಳಗನಾಥರ ಮನೆಯಲ್ಲಿಯೇ ಜರುಗಿತು. ಶ್ರೀ ನರಸಿಂಹಭಾರತೀ ಭಗವತ್ಪಾದರಿಂದ ಪೀಠಾಧಿಕಾರವನ್ನು ಪಡೆದ ಶ್ರೀಸುರೇಶ್ವರಶಂಕರ ಭಾರತೀ – ಇವರ ಪೂರ್ವದ ಹೆಸರು ಶ್ರೀ ಕರ್ಕಿಹಳ್ಳಿ ಮಲ್ಲಾರಿ ದೀಕ್ಷಿತರು – ಅವರು ಮುರಗೋಡದ ಶ್ರೀ ಚಿದಂಬರ ದೀಕ್ಷಿತರ ವಂಶದವರು.* ಗಳಗನಾಥರು ಹಳೆ ಹೊಸ ಪೀಠಾಧಿಪತಿಗಳಿಬ್ಬರ ಸಮಾಗಮದಿಂದ ತಾವು ಧನ್ಯರಾದೆವೆಂದುಕೊಂಡರು. ಇವೆರಡು ಸಮಾರಂಭಗಳಿಂದ ಅವರ ಉತ್ಸಾಹ ಇಮ್ಮಡಿಸಿತು. ಹಿಂದೆ ಪ್ರಾರಂಭ ಮಾಡಿದ್ದ ಮಹಾಭಾರತದ ಅನುವಾದವನ್ನು ಕೈಗೆತ್ತಿಕೊಂಡರು. ಮೂಲ ಮಹಾಭಾರತದೊಳಗಿನ ದ್ವಿರುಕ್ತಿಯನ್ನು ಕೈಬಿಟ್ಟಿದ್ದರೂ ವಿಶೇಷ ವಿಚಾರಗಳನ್ನು ಸಂಗ್ರಹಿಸಿ, ಯುದ್ಧವರ್ಣನ ಪರ್ವತಾದಿ ಸೃಷ್ಟಿ ಸೌಂದರ್ಯ, ಕ್ಷೇತ್ರ ವರ್ಣನೆಗಳಂಥ ಮಿತಿಮೀರಿ ಬೆಳೆದ ವರ್ಣನೆಗಳನ್ನು ಕಡಿಮೆಮಾಡಿ, ಉಳಿದ ವಿಷಯಗಳಲ್ಲಿ ರಸಭಂಗವಾಗಲಿ, ಬೋಧನ ಕೊರತೆಯಾಗಲಿ ಆಗದಂತೆ ಗ್ರಂಥವನ್ನು ಅಚ್ಚುಕಟ್ಟನಲ್ಲಿ ಬರೆದಿಬ್ಬಾರೆ. 'ತಮ್ಮ ಉಡಿಯೊಳಗಿನ ಒಂದು ಅಕ್ಷರವನ್ನು ಕೂಡ ಸೇರಿಸುವದಿಲ್ಲ'ವೆಂಬುದಾಗಿ ಗಳಗನಾಥರು ಪ್ರತಿಜ್ಞಾಪೂರ್ವಕವಾಗಿ ನುಡಿದಿದ್ದಾರೆ. ಅನುವಾದ ಕಾರ್ಯದಲ್ಲಿ ಗಳಗನಾಥರು ಕೃಷ್ಣರಾಜವಾಣೀವಿಲಾಸದ ಕನ್ನಡರೂಪ ಹಾಗೂ ಚಿಪಳೂಣಕರ ಮಂಡಲಿಯವರ ಮರಾಠೀ ಕೃತಿ – ಇವನ್ನು ಮುಂದಿಟ್ಟುಕೊಂಡಿದ್ದರು.

ಸಮಗ್ರ ಮಹಾಭಾರತದ ಅನುವಾದವನ್ನು ಎರಡು ವರ್ಷಗಳಲ್ಲಿಯೆ ಮುಗಿಸಬೇಕೆಂದು ಸಂಕಲ್ಪಿಸಿ ಆ ಇಳಿವಯಸ್ಸಿನಲ್ಲಿ ಕಾರ್ಯೋದ್ಯುಕ್ತರಾದ

---

* ಈ ಪೀಠಾಧಿಕಾರ ದಾನದ ಹಿಂದೆ ಗಳಗನಾಥರ ಸಹಕಾರವಿದ್ದಿತು. ಅದೇನು ಶ್ರೀಮಂತ ಮಠವಲ್ಲ. ಆದರೆ ಗಳಗನಾಥರು ಹೊಸ ಸ್ವಾಮಿಗಳವರ ನಿತ್ಯನೈಮಿತ್ತಿಕ ವೆಚ್ಚಕ್ಕೆ ಪ್ರತಿ ತಿಂಗಳೂ ಹಣವನ್ನು ತಮ್ಮ ಕೈಲಾದಷ್ಟು ಒದಗಿಸುತ್ತಿದ್ದರು. ಅವರು ಬ್ರಹ್ಮೀಭೂತರಾದಾಗ ಅವರ ಸಮಾಧಿಯನ್ನು ಹಾವೇರಿಯಲ್ಲಿಯ ತಮ್ಮ ಸ್ವಂತ ಜಾಗದಲ್ಲಿಯೆ ಮಾಡಿಸಿದರು. ಒಂದು ದಿನ ನಸುಕಿನಲ್ಲಿ ಗಳಗನಾಥರಿಗೆ ಸಮಾಧಿಯಲ್ಲಿಂದ ಬೆಳಗುವ ಜ್ಯೋತಿ ಕಂಡಿತಂತೆ. ಅದು ಜೀವಂತ ಸಮಾಧಿಯೆಂದೆನಿಸಿ ಅವರಿಗೆ ನೆರಳು ಇರಬೇಕೆಂದು ಅಲ್ಲಿ ಮಠವನ್ನೇ ಕಟ್ಟಿಸಿದರು.

ಅವರ ಲೇಖನ ಸಾಹಸ ಬಲುದೊಡ್ಡದು. ಸಾಲದ್ದಕ್ಕೆ ಇದುವರೆಗೆ ಅವರ ಸಮಗ್ರ ಅನುವಾದವನ್ನು ಯಾರೂ ಮಾಡಲು ಶಕ್ತರಾಗಿಲ್ಲವೆಂಬ ಭಾವುಕತನದ ಅಳುಕು ಬೇರೆ. ಕಾಕತಾಲೀಯವೆಂಬಂತೆ ಅವರ ಮೊಮ್ಮಕ್ಕಳಿಬ್ಬರು ೩-೪ ತಿಂಗಳ ಅಂತರದಲ್ಲಿಯೆ ತೀರಿಕೊಂಡರು. ಕಳೆದ ಮೂವತ್ತು ವರ್ಷಗಳಿಂದ ಅವರ ಮನೆಯಲ್ಲಿ ಸಾವಿನ ಕರಿಛಾಯೆ ಬಿದ್ದಿರಲಿಲ್ಲ. ಆದರೂ ತಮ್ಮ ಸದ್ಗುರುವಿನ ಪ್ರಭಾವವೂ ಮೇಲೆ ಹೇಳಿದಂತೆ ಬ್ರಾಹ್ಮಣಾಶೀರ್ವಾದವೂ ತಮ್ಮ ಬೆಂಬಲಕ್ಕಿದೆಯೆಂದು ನಂಬಿ, ಅನುವಾದವನ್ನು ಮುಂದುವರಿಸಿ ಮುಗಿಸಿಬಿಟ್ಟರು.

ಮಹಾಭಾರತದ ಪೀಠಿಕೆಯಲ್ಲಿ ಧರ್ಮದ ವ್ಯಾಖ್ಯೆ ಮತ್ತು ವಿವೇಚನೆ ಬಂದಿದ್ದು ಪಂಚಮಹಾಭೂತಗಳು ಕೂಡ ತಂತಮ್ಮ ಧರ್ಮಪರಿಪಾಲನೆ ಮಾಡುತ್ತಲಿವೆ - ಎಂದಿದ್ದಾರೆ. ದೇವರಿಗೆ ನಾಲ್ಕು ಬಗೆಯ ಮಕ್ಕಳು ಎಂಬ ಹೊಸವಿಚಾರ ಮಂಡಿಸಿದ್ದಾರೆ. ಪಂಚಮಹಾಭೂತಗಳು ಅವನ ಇಂದ್ರಿಯ ಹೀನ ಮಕ್ಕಳು. ತಮ್ಮಲ್ಲಿ ಚೇತನವಿದ್ದುದು, ಅಂದರೆ ಅವಕ್ಕೆ ಹುಟ್ಟು, ಬೆಳವಣಿಗೆ, ಸಾವುಗಳಿದ್ದದ್ದು ಗೊತ್ತಾಗುವುದಿಲ್ಲ. ಇತ್ತ ವೃಕ್ಷಾದಿಗಳಿಗೆ ಬೇರು, ಟೊಂಗೆ, ಎಲೆ, ಮುಂತಾದ ಅವಯವಗಳೆಂಬ ಅವ್ಯವಸ್ಥಿತ ಇಂದ್ರಿಯಗಳನ್ನು ದೇವರು ಕೊಟ್ಟಿದ್ದಾನೆ. ಮತ್ತು ಅವಕ್ಕೆ ಉಳಿವು-ಅಳಿವು ಇದ್ದೇ ಇದೆ. ಆದರೆ ಇವಕ್ಕೆ ಸ್ಥಳಾಂತರ ಮಾಡಲಿಕ್ಕೆ ಬಾರದ್ದರಿಂದ ಇವು ಪರಮೇಶ್ವರನ ಹೆಳವ ಮಕ್ಕಳು. ಇನ್ನು ಪ್ರಾಣಿಗಳಿಗೆ ಪರಮೇಶ್ವರನು ಪಂಚಕರ್ಮೇಂದ್ರಿಯಗಳು ಪಂಚಜ್ಞಾನೇಂದ್ರಿಯಗಳು, ಅಂತರಿಂದ್ರಿಯವಾದ ಮನಸ್ಸು ಎಂಬ ಹನ್ನೊಂದು ಇಂದ್ರಿಯಗಳನ್ನು ಅಪೂರ್ಣಸ್ಥಿತಿಯಲ್ಲಿಯೇ ಆಗಲೊಲ್ಲದೇಕೆ, ಕೊಟ್ಟಿರುವುದರಿಂದ, ಅವು ಸ್ವಚ್ಛಂದವಾಗಿ ಸಂಚರಿಸಲಿಕ್ಕೂ, ವ್ಯವಹರಿಸಲಿಕ್ಕೂ ಸಮರ್ಥವಾಗಿವೆ. ಮತ್ತು ಅವಕ್ಕೆ ಮಾನಸಿಕ ವಿಕಾರಗಳಿರುವುದೂ ಸ್ಪಷ್ಟ. ಆದರೆ ಇವಕ್ಕೆ ಬುದ್ಧಿಯಿಲ್ಲದ್ದರಿಂದ ಇವು ಪರಮೇಶ್ವರನ ಬುದ್ಧಿಗೇಡಿ ಅಂದರೆ ದಡ್ಡ ಮಕ್ಕಳಾಗಿರುವವು. ಕೊನೆಯದಾಗಿ ಮನುಷ್ಯನಲ್ಲಿ ಆ ಹನ್ನೊಂದು ಇಂದ್ರಿಯಗಳೂ ಪೂರ್ಣಸ್ಥಿತಿಯಲ್ಲಿವೆ. ಬುದ್ಧಿಯೆಂಬ ಸಾಧನಸಂಪತ್ತೂ, ಪರಮೇಶ್ವರನ ಗುಣಾಂಶಗಳ ಕಿಂಚಿತ್ ಜ್ಞಾನ, ಕಿಂಚಿತ್ ಸ್ವಾತಂತ್ರ್ಯಗಳೆಂಬ ದಿವ್ಯಸಾಧನಗಳೂ ಇರುತ್ತವೆ. ಆದ್ದರಿಂದ ಮನುಷ್ಯರು ದೇವರ ಬುದ್ಧಿವಂತ ಮಕ್ಕಳು.

ಈ ನಾಲ್ಕೂ ಬಗೆಯ ಮಕ್ಕಳ ಯೋಗಕ್ಷೇಮವನ್ನು ವಹಿಸುವಲ್ಲಿ ಪರಮೇಶ್ವರನು ವಿಲಕ್ಷಣ ಸಮತೆಯನ್ನು ತೋರಿಸಿದ್ದಾನೆ. ಹೀಗೆ ತೋರಿಸುವಾಗ – 'ಸಾಧನ ಸಂಪತ್ತಿಯ ಕೊರತೆಯುಳ್ಳ ದೀನರಿಗೆ ದೇವರ ಸಹಾಯವು ಹೆಚ್ಚು; ಸಾಧನ ಸಂಪತ್ತಿನ ವಿಪುಲತೆಯುಳ್ಳ ಸಮರ್ಥರಿಗೆ ಅವನ ಸಹಾಯವು ಕಡಿಮೆ! ಉದಾಹರಣೆಗೆ, ಪಶು–ಪಕ್ಷಿಗಳಿಗೆ ಬುದ್ಧಿಯ ಕೊರತೆ ಇರುವದರಿಂದ, ಅವಕ್ಕೆ ಬಹುತರ ಆಹಾರದ ಕೊರತೆಯಾಗದಂತೆಯೂ, ಅವಕ್ಕೆ ರೋಗಬಾಧೆಗಳು ವಿಶೇಷ ಆಗದಂತೆಯೂ, ಅವುಗಳಿಂದ ಲೋಕಪೀಡೆಯು ಮಿತಿಮೀರ ದಂತೆಯೂ ವ್ಯವಸ್ಥೆ ಮಾಡಿರುವನು. ಅದೇ ಮನುಷ್ಯನಿಗೆ ದೇವರು ಸಾಕಷ್ಟು ಸಾಧನ ಸಂಪತ್ತನ್ನು ಕೊಟ್ಟಿರುವುದರಿಂದ ಮನುಷ್ಯನ ಯೋಗಕ್ಷೇಮದ, ಯಾವ ಭಾರವನ್ನೂ ವಹಿಸದೆ 'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ' ಅಂದರೆ 'ನನ್ನ ವಿಷಯದಲ್ಲಿ ನೀನು ಹೇಗೊ, ನಿನ್ನ ವಿಷಯದಲ್ಲಿ ನಾನು ಹೀಗೆ' ಎಂಬ ಸಿದ್ಧಾಂತದಂತೆ ಆ ಮನುಷ್ಯ ಪ್ರವೃತ್ತಿಯ ವಿಷಯದಲ್ಲಿ ತಟಸ್ಥ ವೃತ್ತಿಯನ್ನು ತಾಳಿ ಇರುವನು. ಅಲ್ಲದೆ ಮನುಷ್ಯರ ನಡವಳಿಕೆಯ ಸ್ವರೂಪದಂತೆ, ಅವರವರ ಕರ್ಮದ ಫಲಗಳನ್ನು ಅವರವರಿಗೆ ಕೊಡುತ್ತ, ನಗುವವರನ್ನು ಅಳಿಸದೆ, ಅಳುವವರನ್ನು ನಗಿಸದೆ ಕೇವಲ ಸಾಕ್ಷೀಭೂತನಾಗಿ ತಾನು ಇದ್ದುಬಿಟ್ಟಿರುವನು! ದೇವರ ಈ ತಟಸ್ಥ ವೃತ್ತಿಯ ಮೂಲಕ ಮನುಷ್ಯನ ಯೋಗಕ್ಷೇಮದ ಭಾರವು ಮನುಷ್ಯನ ಮೇಲೆ ಬಿದ್ದು, ಅದಕ್ಕಾಗಿ ಆತನು ಕರ್ಮಾಸಕ್ತನಾಗಲೇಬೇಕಾಗಿ, ಆತನು ತನ್ನ ಕರ್ಮಾಸಕ್ತಿಯ ಮೌನದಿಂದ ಹೆಚ್ಚು ಕಡಿಮೆ ಆಯಾಸ ಪಡಬೇಕಾಗುವದು! ಎಂಬೀ ಬಗೆಯ ಗಳಗನಾಥರ ಸ್ವತಂತ್ರ ವಿಚಾರ ಸರಣಿಯು ಅತ್ಯಂತ ಮನೋಜ್ಞವಾಗಿದೆ.

ಮಹಾಭಾರತದ ಸಮಗ್ರ ಅನುವಾದ ಗ್ರಂಥವನ್ನು ಮುದ್ರಿಸುವದಕ್ಕೆ ಸಹಸ್ರಾರು ರೂಪಾಯಿಗಳು ಬೇಕು! ಇದುವರೆಗೆ ತಮ್ಮ ಯಾವದೇ ಲೇಖನ ಕಾರ್ಯಕ್ಕೆ ಕನ್ನಡಿಗರು ಪ್ರೋತ್ಸಾಹಿಸುತ್ತಲೇ ಬಂದಿರುವರು. ಈ ವಿಷಯ ದಲ್ಲಿಯೂ ನೆರವಾಗುವರು – ಎಂಬ ಧೈರ್ಯ ಅವರದು. ಪರಿಷತ್ತಿನಿಂದ ದೊರೆತ ಗೌರವವಂತೂ ಸರಿಯೇ. ನಂ. ವೆಂಕಟೇಶಯ್ಯಂಗಾರರು ಮತ್ತು ಬೆಳ್ಳಾವೆ ವೆಂಕಟನಾರಣಪ್ಪ ಮುಂತಾದವರು ಆರ್ಥಿಕ ಸಹಾಯುವನ್ನೂ ಮಾಡಿದ್ದರು. ಅದಾಗಿ ಎರಡು ವರ್ಷಗಳ ಅನಂತರ ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ಸದಸ್ಯರು ಅವರನ್ನು ಬರಮಾಡಿಕೊಂಡು

ಮಾನಪತ್ರವನ್ನು ಅರ್ಪಿಸಿದುದು ಮಹತ್ವದ ಘಟನೆಯಾಗಿದೆ (೧೯೨೯). ಅದರಲ್ಲಿಯ ಕೆಲವು ಮಾತುಗಳು ಇಲ್ಲಿ ಪ್ರಸ್ತುತವೆನಿಸುತ್ತವೆ; "ಈಗ ಸುಮಾರು ಎರಡು ವರ್ಷಗಳ ಹಿಂದೆ ತಾವು ಬೆಂಗಳೂರಿನಲ್ಲಿ ಕೆಲವು ದಿನ ನಿಂತಿದ್ದ ವೇಳೆಯಲ್ಲಿ ತಮ್ಮ ದರ್ಶನ ಲಾಭವು ಮೈಸೂರ ನಗರದ ನಮಗೂ ದೊರೆಯುವದೆಂದು ನಿರೀಕ್ಷಿಸಿಕೊಂಡಿದ್ದೆವು. ಅಂದು ಕೈಗೂಡದ ಹಾರೈಕೆ ನಮ್ಮ ಭಾಗ್ಯವಿಶೇಷದಿಂದ ಇಂದು ನೆರವೇರಿತು. ನಮ್ಮ ಪ್ರಾರ್ಥನೆಯನ್ನು, ತಮಗೆ ಸಹಜವಾದ ಕರುಣೆಯಿಂದಲೂ ಸೌಜನ್ಯದಿಂದಲೂ ಒಪ್ಪಿಕೊಂಡು, ತಾವು ಈಗ ಹಿಡಿದಿರುವ ಮಹಾಕಾರ್ಯಕ್ಕೆ ಒದಗತಕ್ಕ ವಿಚ್ಛೇದನವನ್ನೂ, ದೂರ ಪ್ರಯಾಣದ ಶ್ರಮವನ್ನೂ ಗಮನಿಸದೆ ನಮ್ಮನ್ನು ಅನುಗ್ರಹಿಸಿರುವುದಕ್ಕಾಗಿ ನಾವು ತಮಗೆ ಅತ್ಯಂತ ಕೃತಜ್ಞರಾಗಿರುತ್ತೇವೆ.

...ಈಗ ಮೂವತ್ತು ವರ್ಷಗಳ ಹಿಂದಿನಿಂದಲೂ, ಕನ್ನಡಕ್ಕೆ ಈಗಿರುವ ಪುರಸ್ಕಾರವಿಲ್ಲದಿದ್ದ ಕಾಲದಿಂದಲೂ ತಾವು ನಮ್ಮ ಸಾಹಿತ್ಯದ ಏಳಿಗೆಗಾಗಿ ಶ್ರಮವನ್ನೆಣಿಸದೆ ದುಡಿಯುತ್ತಿದ್ದೀರಿ. ಸರ್ಕಾರದ ಕೈಕೆಳಗೆ ತಾವು ಉಪಾಧ್ಯಾಯರಾಗಿದ್ದಾಗ ಸಾಹಿತ್ಯ ಸೇವೆಗೆ ಪೂರ್ಣಾವಕಾಶವು ಸಿಕ್ಕದಿದ್ದುದರಿಂದ ಅಲ್ಲಿ ಇನ್ನೂ ಅಭಿವೃದ್ಧಿಗೆ ಬರುವಂತಿದ್ದರೂ ಆ ಪ್ರಯೋಜನವನ್ನು ಕಡೆಗಣಿಸಿ, ಕೆಲವು ಜನ ವಿದ್ಯಾರ್ಥಿಗಳಿಗೆ ಮಾತ್ರ ದೊರೆಯುತ್ತಿದ್ದ ತಮ್ಮ ಉಪದೇಶ ಸಾಮರ್ಥ್ಯದ ಫಲವನ್ನು ದೇಶಕ್ಕೆಲ್ಲಾ ದೊರೆಯುವಂತೆ ಮಾಡಿದಿರಿ.

ತಮ್ಮ ಉಜ್ವಲವಾದ ಐತಿಹಾಸಿಕ ಕಾದಂಬರಿಗಳು ನಮ್ಮ ನಾಡಿನ ಗತವೈಭವವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ, ನಮ್ಮ ದೇಶಪ್ರೇಮವನ್ನು ಉಕ್ಕಿಸುತ್ತದೆ. ಮಹಾರಾಷ್ಟ್ರ ವೀರರೂ ರಾಜಪುತ್ರ ರಮಣಿಯರೂ ಕನ್ನಡ ಕಲಿಗಳೂ ತಮ್ಮ ಲೇಖನಿಯ ಪ್ರಭಾವದಿಂದ ನಮ್ಮ ಸ್ಮೃತಿ ಮಂದಿರದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ....

ಕನ್ನಡಿಗರಲ್ಲೆಲ್ಲ ಐಕ್ಯಮತ್ಯಭಾವನೆಯನ್ನು ಬಲಪಡಿಸುವದರಲ್ಲಿ ತಮ್ಮ ಕಾದಂಬರಿಗಳಿಂದ ಸಹಾಯವು ದೊರೆತಿರುವದನ್ನು ಇಲ್ಲಿ ಹೇಳದಿರಲಾರೆವು. ಉತ್ತರ ಕರ್ಣಾಟಕದೊಡನೆ ಬಳಕೆ ನಮ್ಮ ಮೈಸೂರಿನವರಿಗೆ ಮುಖ್ಯ ಉಂಟಾದುದು, ಅಲ್ಲಿಯ ಲೇಖಕರಲ್ಲಿ ಅಗ್ರಗಣ್ಯರಾದ ತಮ್ಮ ಮೂಲಕವೇ.

"ವಯಃಪರಿಣತಿಯಿಂದಲೂ, ಜ್ಞಾನಸಂಪತ್ತಿಯಿಂದಲೂ ಗ್ರಂಥ ಸಮೃದ್ಧಿಯಿಂದಲೂ ತಾವು ಅಖಿಲ ಕರ್ನಾಟಕಕ್ಕೆ ಪೂಜ್ಯರಾಗಿದ್ದೀರಿ; ಭೂಷಣರಾಗಿದ್ದೀರಿ. ಈ ವಯಸ್ಸಿನಲ್ಲಿ ಕೂಡ ತಾವು ಉತ್ಸಾಹದಿಂದಲೂ ಏಕನಿಷ್ಠೆಯಿಂದಲೂ ಮಾಡುತ್ತಿರುವ ಸಾಹಿತ್ಯ ಸೇವೆಯನ್ನು ನೋಡಿ ತರುಣರಾದ ನಾವೆಲ್ಲರೂ ನಾಚಿ ತಮ್ಮಿಂದ ಉದ್ಯೋಗಶೀಲತೆಯ ಪಾಠವನ್ನು ಕಲಿಯಬೇಕಾಗುತ್ತದೆ."

ಈ ಮಾನಪತ್ರ ವಿಚಾರದ ಸೂತ್ರಧಾರರು ಇನ್ನಾರೂ ಅಲ್ಲ - ಬಿ.ಎಂ.ಶ್ರೀ.ಯವರು. ಕನ್ನಡದ ಯಾವುದೇ ಕೆಲಸವಿರಲಿ, ಯಾರೇ ಮಾಡಿದ್ದಿರಲಿ, ಅದನ್ನು ಎತ್ತಿ ಹಿಡಿಯುವ ಸಹಜ ಮನೋಧರ್ಮದ ಶ್ರೀಯವರು ಗಳಗನಾಥರನ್ನು ಹಾವೇರಿಯಿಂದ ಉದ್ದೇಶಪೂರ್ವಕವಾಗಿ ಬರಮಾಡಿ ಕೊಂಡರು. 'ಶ್ರೀ' ಅವರ ಬಗ್ಗೆ ಗಳಗನಾಥರಿಗೂ ವಿಶೇಷ ಗೌರವ. ಸೆಂಟ್ರಲ್ ಕಾಲೇಜಿನ ಕನ್ನಡ ಸಂಘದವರು ಬೆಂಗಳೂರಲ್ಲಿ 'ಗದಾಯುದ್ಧ' ನಾಟಕವನ್ನು ಅಭಿನಯಿಸಿದಾಗ ಅದನ್ನು ನೋಡಿ 'ಆನಂದಪರವಶನಾದೆನೆಂದು' ಗಳಗನಾಥರು ಒಂದೆಡೆ ಹೇಳಿದ್ದಿದೆ. ತಾವು ಬರೆದ ಸಮಗ್ರ ಮಹಾಭಾರತದ ಹಸ್ತಪ್ರತಿಯನ್ನು ಬಿ.ಎಂ.ಶ್ರೀ. ಅವರ ಮುಂದಿರಿಸಿ 'ಇದನ್ನು ತಾವು ಮುಟ್ಟಿ ಆಶೀರ್ವದಿಸಬೇಕು' ಎಂದು ಗಳಗನಾಥರು ವಿನಂತಿಸಿದಾಗ ಶ್ರೀಯವರ ಹೃದಯ ತುಂಬಿಬಂದಿತು. 'ಇದನ್ನು ಮುಟ್ಟುವ ಯೋಗ್ಯತೆಯೂ ನನಗಿಲ್ಲ' ಎಂದರಂತೆ!*

ಮೊದಲ ಸಂಪುಟವಾದ ಆದಿಪರ್ವವು ಮುದ್ರಣಕ್ಕಾಗಿ ಸಿದ್ಧವಾಯಿತು. ಎಂದಿನಂತೆ ಚಿತ್ರಗಳನ್ನು ಅಳಿಯಂದಿರಾದ ಮಲ್ಲಾರಿ ದೀಕ್ಷಿತರು ತೆಗೆದರು. ಹಸ್ತಪ್ರತಿಯ ಬಗ್ಗೆ ಗಳಗನಾಥರೊಡನೆಯ ಚರ್ಚೆಯಲ್ಲಿಯೂ ಅಚ್ಚಿನ ಕರಡನ್ನು ತಿದ್ದುವ ಕೆಲಸದಲ್ಲಿಯೂ ಗಣಪತಿಶಾಸ್ತ್ರಿ, ಸರ್ಪಕರ್ಣೇಶ್ವರ ಹಾಗೂ ಶಂಕರಪ್ಪ ಜೋಶಿಯವರು ವಿಶೇಷವಾಗಿ ನೆರವಾದರು. ಮುದ್ರಣ? ಆ ವೇಳೆಗೆ ಹಣದ ಅಭಾವದಿಂದ ಗಳಗನಾಥರ ಶ್ರೀ ವೆಂಕಟೇಶ್ವರ ಪ್ರೆಸ್ ನಿಂತು ಹೋಗಿದ್ದಿತು! ಸರಿ. ಬೆಂಗಳೂರಲ್ಲಿ ಮಾಡಿಸಬೇಕೆಂದು ನಿರ್ಧರಿಸಿದರು. ಹಣಕ್ಕಾಗಿ ಯಥಾಪ್ರಕಾರ ಜೋಳಿಗೆ ಹಿಡಿದರು. ಸುಮಾರು ಹನ್ನೆರಡು ಸಾವಿರ

---

* ಗಳಗನಾಥರು ಸಭಾಪರ್ವದ ಮುದ್ರಿತ ಗ್ರಂಥವನ್ನು ಶ್ರೀ ಅವರಿಗೇ ಅರ್ಪಣ ಮಾಡಿದ್ದಾರೆ.

ರೂಪಾಯಿಗಳು ಸಂಗ್ರಹವಾದುವು. ಸಹಾಯ ಮಾಡಿದವರಲ್ಲಿ ಶ್ರೀಮಂತ, ಬಡವ, ಅಥವಾ ಜಾತಿ-ಮತಗಳ ಭೇದವಿಲ್ಲದುದು ಗಳಗನಾಥರ ಸತ್ಯನಿಷ್ಠೆ ಹಾಗೂ ಪ್ರಾಮಾಣಿಕತೆಗೆ ಪುರಾವೆಯಾಗಿದೆ. ಮುದ್ರಣಕ್ಕೆ ಬೇಕಾದಷ್ಟು ಕಾಗದವನ್ನು ಬೆಂಗಳೂರಿನ ವ್ಯಾಪಾರಿ ಅಬ್ದುಲ್ ಮಜೀದರು ಉದ್ದರಿಯಾಗಿ ಪೂರೈಸಿದರು. ಮುದ್ರಕರಾದ ಬಿ.ಎಲ್. ನರಸಿಂಹಯ್ಯನವರ ಸಹಾಯವೂ ನೆನೆಯುವಂತಹದು. ಹಾವೇರಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಮಾಗಾವಿ ಬಂಧುಗಳದಂತೂ ನಿತ್ಯನಿರಂತರ ನೆರವು: 'ಈ ಮಾಗಾವಿ ಮನೆತನದವರ ಸಹಾಯವು ಈಗ ಮೂವತ್ತು ವರ್ಷಗಳಿಂದ ನಮಗಿರುವದು. ಇವರ ಅಂಗಡಿಗಳೆಲ್ಲ ನಮ್ಮ ಮನೆಯ ಅಂಗಡಿಗಳಂತೆ ಇರುವದರಿಂದ ನಮಗೆ ಯಾವ ಬಗೆಯ ಕೊರತೆಯೂ ಈವರೆಗೆ ಬಂದಿರುವದಿಲ್ಲ. ಅಡಚಣೆಯ ಪ್ರಸಂಗದಲ್ಲಿ ಬೇಡಿದಾಗ ದುಡ್ಡು ನೀಡಿರುವರು' ಎಂದು ಗಳಗನಾಥರು ಅವರನ್ನು ಸ್ಮರಿಸಿದ್ದಾರೆ.

ಬೆಂಗಳೂರಿನಲ್ಲಿ ಮಹಾಭಾರತದ ಮುದ್ರಣ ನಡೆದ ಕಾಲಕ್ಕೆ ಈ ಮಾಗಾವಿ ಸೋದರರಲ್ಲಿ ಒಬ್ಬರಾದ ಚಂಬಣ್ಣನವರು ಗಳಗನಾಥರಿಗೆ ಬರೆದ ಪತ್ರದ ಒಕ್ಕಣಿಕೆಯನ್ನು ಗಮನಿಸಬೇಕು:

"ತಮ್ಮ ಪ್ರೇಮಸೂಚಕ ಪತ್ರ ಮುಟ್ಟಿ ಆನಂದವಾಯಿತು. ಮಹಾಭಾರತದ ಪ್ರಿಂಟು ನಡೆದಿರುವದನ್ನು ಓದಿ ಬಹಳ ಸಂತೋಷವಾಯಿತು. ಅದರಲ್ಲೂ ಈಗಿನ ಕಾಲದಲ್ಲಿ ಧಾರ್ಮಿಕ ಗ್ರಂಥಗಳನ್ನು ಪ್ರಿಂಟು ಮಾಡಿಸಿ ಜನಸಾಮಾನ್ಯರಿಗೆಲ್ಲ ಧರ್ಮಬುದ್ಧಿಯುಂಟಾಗುವಂತೆ ಮಾಡುವವರು ಬಹಳ ವಿರಳ! ತಾವು ತಮ್ಮ ಇಡೀ ಆಯುಷ್ಯದಲ್ಲಿ ಈ ರೀತಿ ಧಾರ್ಮಿಕ ಗ್ರಂಥಗಳನ್ನೂ ಸಾಹಿತ್ಯ ಗ್ರಂಥಗಳನ್ನೂ ಬರೆದು ಪ್ರಚುರಮಾಡುವದರಲ್ಲಿಯೇ ಮನಸ್ಸು ಹಾಕುತ್ತ ಬಂದಿರುತ್ತೀರಿ... ತಾವು ಬರೆದ ಪ್ರಕಾರ ಅವರು ಕೇಳಿದ ಕೂಡಲೆ ರೂಪಾಯಿಗಳನ್ನು ಕೊಡುತ್ತೇವೆ."

ಆದಿಪರ್ವದ ಪ್ರತಿಗಳನ್ನು ಮುದ್ರಿಸಿಕೊಂಡು ಹಾವೇರಿಗೆ ಹಿಂತಿರುಗಿದ ಮೇಲೆ (ಮೇ ೧೯೩೧) ತಮ್ಮ ವಾಸ್ತವ್ಯಕ್ಕಾಗಿ ಮನೆಯೊಂದನ್ನು ಕಟ್ಟಿಸುವದರಲ್ಲಿ ತೊಡಗಿದರು. ಷಷ್ಟಿಪೂರ್ತಿ ಸಮಾರಂಭದ ಕಾಲಕ್ಕೆಯೇ ಆ ವಿಚಾರ ಮೂಡಿದ್ದಿತು. ವಾಸ್ತವ್ಯಕ್ಕಾಗಿ ಮನೆ, ಪಾಠಶಾಲೆ, ಪ್ರೆಸ್ ಇವೆಲ್ಲಕ್ಕೂ ಸ್ವಂತದ

ನಿವೇಶನ ಬೇಕೆಂದು ಹಾವೇರಿ ನಗರದ ವಿಸ್ತರಣ ಪ್ರದೇಶದಲ್ಲಿ (ಎಕ್ಸ್‌ಟೆನ್ಶನ್) ಜಾಗವನ್ನು ಕೊಂಡಿದ್ದರು. ಈಗ ಕಟ್ಟೋಣ ಮತ್ತು ಬಾವಿ ಅಗೆಯುವ ಕೆಲಸ ಮುಂದುವರಿಯಿತು. ಇಲ್ಲಿಯೂ ಅವರ ಉದಾರ ಪೋಷಕರ ನೆರವು ಸಿದ್ಧವೇ!

ಈ ಹೊಸ ನಿವೇಶನದಲ್ಲಿ ಅವರಿಗೆ ಮುದ್ರಣಾಲಯವನ್ನು ಪುನರುಜ್ಜೀವಿಸುವುದು ಅಗತ್ಯದ, ಹೃದಯಕ್ಕೆ ತಾಗಿದ ಕೆಲಸವಾಗಿದ್ದಿತು. ಹಾಗೆ ಆರಂಭವಾಗಿ, ಸಭಾಪರ್ವ ಹಾಗೂ ವನಪರ್ವದ ಕೆಲವು ಭಾಗ ಸೇರಿ ಮಹಾಭಾರತದ ಎರಡನೆಯ ಪುಸ್ತಕವು ಹೊರಬಿದ್ದು ಗಳಗನಾಥರಿಗೆ ತುಂಬ ಸಂತೋಷವನ್ನು ತಂದಿತು.

ಗಳಗನಾಥರಿಗೆ ತಮ್ಮ ಪ್ರೆಸ್ ಪುನಃ ಆರಂಭವಾದುದೇ ಹೆಚ್ಚಿನ ಸಂತೋಷವನ್ನುಂಟುಮಾಡಿದ್ದಿತು. ಅದಕ್ಕೆ ಕಾರಣರೆಂದರೆ ಬೆಂಗಳೂರಿನ ನ್ಯಾಷನಲ್ ಟೈಪ್ ಫೌಂಡ್ರಿಯ ರಂಗಸ್ವಾಮಿಯವರು. ಗಳಗನಾಥರ ಮುಖ ಪರಿಚಯವಿಲ್ಲದಾಗ, ಬರಿಯ ಅವರ ಸಾದಾ ಪತ್ರದ ಮೇಲಿಂದ ೨ ಸಾವಿರ ರೂ. ಬೆಲೆಯ ಮೊಳೆಗಳನ್ನು ರಂಗಸ್ವಾಮಿ ಅವರು ಪೂರೈಸಿದುವನ್ನು ಕೃತಜ್ಞತೆಯಿಂದ ನೆನೆದಿದ್ದಾರೆ.

ಮುದ್ರಣದ ಕೆಲಸ ನಡೆದಿದ್ದಾಗ, ವಿಶೇಷ ಮಳೆಯಿಂದಾಗಿ ಮೇಲಿನ ತೊಲೆಯು ಸರಿದು ಕಟ್ಟಡ ಕುಸಿದುಬಿದ್ದಿತು. ಆದರೆ ಸುದೈವದಿಂದ ಅಲ್ಲಿಯ ಯಂತ್ರಗಳಿಗಾಗಲೀ, ಕೆಲಸಗಾರರಿಗಾಗಲೀ ಧಕ್ಕೆ ತಗಲಲಿಲ್ಲ. ಹೀಗಿರುವಾಗ ಮ.ರಾ.ರಾ. ಗುರುಬಸಪ್ಪ ಮಾವಾಗಿಯವರು ೫೦೦ ರೂಪಾಯಿಗಳ ಕಟ್ಟಿಗೆ, ಕಬ್ಬಿಣಗಳ ಸಾಮಾನುಗಳನ್ನು ಅನುಕೂಲತೆಯಂತೆ ಹಣ ಕೊಡುವ ಕರಾರಿನಿಂದ ತಟ್ಟನೆ ಕೊಡಿಸಿದುದಲ್ಲದೆ ಸ್ವತಃ ತಾವು ಬಂದು ನಿಂತು ಮುದ್ರಣಾಲಯದ ಕಟ್ಟಡದ ಕಾರ್ಯವನ್ನು ಸರಿಪಡಿಸಿದರಂತೆ.

ಗಳಗನಾಥರ **ಮಹಾಭಾರತಾಮೃತ**ದ ವಿಶೇಷತೆಯೆಂದರೆ ಅದರಲ್ಲಿಯ ರಹಸ್ಯಗಳ ವಿವರಣೆ. ಮಹಾಭಾರತದಲ್ಲಿಯ ಯಾವದೊಂದು ಘಟನೆ ಇಲ್ಲವೆ ಉಪದೇಶ ಪ್ರಸಂಗ – ಇವುಗಳ ಮೇಲೆ ಗಳಗನಾಥರು ವ್ಯಕ್ತಪಡಿಸಿದ ಸ್ವತಂತ್ರ ವಿಚಾರಗಳೇ ಈ ರಹಸ್ಯಗಳು. ಈ ರಹಸ್ಯ ವಿವರಣೆಯನ್ನು ಪ್ರಚಲಿತ ರಾಜಕೀಯಕ್ಕೆ ಸಮನ್ವಯಿಸಿ ಹೇಳಿದ್ದುದು ಇನ್ನೊಂದು ವೈಶಿಷ್ಟ್ಯವಾಗಿದೆ. ಅಂತೆಯೇ 'ರಾಜಕೀಯ ರಹಸ್ಯಗಳು' ಹಾಗೂ 'ಇತರ ರಹಸ್ಯಗಳು' ಎಂಬ

ಎರಡು ಪ್ರಕಾರಗಳನ್ನು ಅವರೇ ಗುರುತಿಸಿರುತ್ತಾರೆ. ಹೀಗೆ ಸ್ವರಾಜ್ಯ, ರಾಜಪ್ರಜಾ ಸಂಬಂಧ, ಧರ್ಮ ಮತ್ತು ರಾಜಕಾರಣ, ಹಳ್ಳಿಯ ಉತ್ಕರ್ಷ, ಲೋಕಮತ (ಪ್ರಜಾಸತ್ತೆ), ಧಾರ್ಮಿಕ ಹಿಂಸೆ, ಮುಂತಾದ ಹಲವಾರು ವಿಷಯಗಳ ಬಗ್ಗೆ ಅವರ ಟಿಪ್ಪಣಿಗಳನ್ನು ಅಲ್ಲಿ ಕಾಣುತ್ತೇವೆ. ಮಹಾಭಾರತದ ಎರಡೂ ಸಂಪುಟಗಳಲ್ಲಿ ಒಟ್ಟಿಗೆ ೫೯ 'ರಹಸ್ಯ'ಗಳು ಬಂದಿವೆ. 'ಶೈವ ಸುಧಾರ್ಣವ'ದಿಂದಲೇ ಇಂಥ ರಹಸ್ಯಗಳ ವಿವರಣಾಕ್ರಮವನ್ನು ಅವರು ಅನುಸರಿಸಿದ್ದುದು. ಆ ಮುಂದೆ ಅವರ ಇತರ ಧಾರ್ಮಿಕ ಗ್ರಂಥಗಳಲ್ಲಿಯೂ ಕಾಣಿಸಿಕೊಂಡಿತು. ಶ್ರೀನಿವಾಸನರಸಿಂಹ ಕಾಕೋಟಿ ಎಂಬವರು ಅನುವಾದಿಸಿದ **ಶ್ರೀ ವೆಂಕಟೇಶ ಮಾಹಾತ್ಮ್ಯ**ದ ಎರಡನೇ ಆವೃತ್ತಿಯನ್ನು ಪ್ರಕಟಿಸುವಾಗಲೂ (೧೯೩೨) ಗಳಗನಾಥರು ಅದರ ರಹಸ್ಯಾಂಶಗಳನ್ನು ತಮ್ಮ ಸುದೀರ್ಘ ಪೀಠಿಕೆಯಲ್ಲಿ ವಿಸ್ತರಿಸಿದ್ದಾರೆ.

ಈ ರಹಸ್ಯ ವಿವರಣೆಯ ಕಾಲಕ್ಕೆ ಗಳಗನಾಥರ ವಿಚಾರಧಾರೆ ತಡೆದು ನಿಂತಿದ್ದಾಗ ಸದ್ಗುರುವಿನ ಕೃಪೆಯಿಂದಲೇ ಅದರ ಸ್ಫುರಣವಾಯಿತೆಂಬ ಕಾರಣದಿಂದ ಗಳಗನಾಥರು ಮಹಾಭಾರತದ ರಹಸ್ಯ ವಿವರಣೆಗೆ 'ಶ್ರೀ ಶೇಷ ಸದ್ಗುರು ಸೂಕ್ತಿ ರೂಪ'ವೆಂಬ ಹೆಸರಿನಿಂದ ಕರೆದರು. 'ರಹಸ್ಯ ಬರೆಯುವ ಉದ್ದೇಶದಿಂದಲೇ ನಾವು ಮಹಾಭಾರತಾಮೃತವನ್ನು ಬರೆಯಹತ್ತಿರುವೆವೆಂದು' ಗಳಗನಾಥರು ಸ್ಪಷ್ಟಪಡಿಸಿದ್ದಾರೆ.

ಈ ವಿನೂತನ ಕ್ರಮದ ಯುಕ್ತಾಯುಕ್ತತೆ ಮತ್ತು ಪ್ರಯೋಜನದ ಬಗ್ಗೆ ಸುರುವಿಗೆ ಗಳಗನಾಥರಿಗೆ ಅಳುಕು ಇದ್ದಿತು. ಆಗ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು "ಈ ರಹಸ್ಯ ಲೇಖನವು ಕೇವಲ ಪಾಂಡಿತ್ಯಕ್ಕೆ ಸಾಧ್ಯವಲ್ಲವು; ನಿಮ್ಮ ರಹಸ್ಯಗಳನ್ನು ಓದಿ ನನಗೂ ರಹಸ್ಯ ಸ್ಫೂರ್ತಿಯಾಗತೊಡಗಿದೆ. ನಿಮ್ಮ ಕೃತಿಯನ್ನು 'ಮಹಾಭಾರತ ರಹಸ್ಯಾಮೃತ' ಎಂದು ಕರೆಯುವದು ನನಗೆ ಸಮ್ಮತವಾಗಿರುವುದು" ಎಂಬ ಅಭಿಪ್ರಾಯವನ್ನಿತ್ತು ಈ ವಿಷಯವಾಗಿ ಗಳಗನಾಥರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದರು.

ಇನ್ನು ಮಹಾಭಾರತಾಮೃತದ ಮುಂದಿನ ಪರ್ವಗಳು ಬೆಳಕಿಗೆ ಬರಬೇಕಷ್ಟೆ. ಆಗ ಗಳಗನಾಥರು 'ಕನ್ನಡಿಗರಿಗೆ ಪ್ರಾರ್ಥನೆ'ಯನ್ನು ಮಾಡಿಕೊಂಡರು.

"ಈಗ ಮೂವತ್ತು ವರ್ಷಗಳಿಂದ ಕನ್ನಡಿಗರ ಸೇವೆಗಾಗಿ ಹಾಗೂ ಸಂಸ್ಕೃತ ವಿದ್ಯಾದಾನದ ಕಾರ್ಯಕ್ಕಾಗಿ ೬೦-೭೦ ಸಾವಿರ ರೂಪಾಯಿ ಸಾಲ ಮಾಡಿ ತೀರಿಸುವಾಗ 'ಮೊದಲು ನಾನು ಸಾಲ ಮಾಡಿ ಪುಸ್ತಕ ಛಾಪಿಸಬೇಕು. ಆಮೇಲೆ ನನ್ನ ಪ್ರಿಯ ಕನ್ನಡಿಗರು ನನ್ನ ಪುಸ್ತಕ ಕೊಂಡು ಅದನ್ನು ತೀರಿಸಬೇಕು' ಈ ರೀತಿಯು ಅನುಸರಿಸಿದ್ದಾಗಿದೆ. ಇನ್ನು ಮೇಲಾದರೂ ಕನ್ನಡಿಗರ ಸೇವೆಯನ್ನು ದೇಹದಂಡನ - ಮನೋದಂಡನಗಳಿಂದ ಬೇಕಾದಷ್ಟು ಮಾಡುವೆನು: ಆದರೆ ದುಡ್ಡಿಗಾಗಿ ಮಂದಿಗೆ ಬಾಯಿ ತೆರೆಯುವದು ಇಲ್ಲಿಗೆ ಸಾಕು! ನನ್ನ ಪ್ರಿಯ ಕನ್ನಡಿಗರು ೬೨ ವರ್ಷದ ವಯಸ್ಸಿನ ನನ್ನ ಈ ಕೋಳಿಪಾಟವನ್ನು ಇನ್ನು ದೂರಮಾಡಬೇಕು. ಈಗಾಗಿರುವ ಸಾಲವನ್ನು ಆದಿಪರ್ವ ಭಾರತದ ಐದು ಸಾವಿರ ಪ್ರತಿಗಳನ್ನು ಮಾರಿ ತೀರಿಸಬೇಕೆಂತಲೂ, ಇನ್ನು ಮುಂದೆ ಯಾವ ಕೆಲಸಕ್ಕೂ ಸಾಲ ಮಾಡಲಿಕ್ಕಿಲ್ಲವೆಂತಲೂ ಪ್ರತಿಜ್ಞೆ ಮಾಡಿರುವೆನು. ನಾನು ಸೇವೆ ಮಾಡುತ್ತ ಮಾಡುತ್ತ ಸಾಲಗಾರನಾಗಿಯೇ ಇರುವುದು ನನ್ನ ಸೇವ್ಯರಾದ ಪ್ರಿಯ ಕನ್ನಡಿಗರಿಗೆ ಭೂಷಣವಾಗಬಹುದೆ?"

ಮರುವರ್ಷ 'ಶ್ರೀ ವೆಂಕಟೇಶ ಮಹಾತ್ಮ್ಯ'ವನ್ನು ಪ್ರಕಟಿಸುವಾಗಲೂ ಇದೇ ಬಗೆಯ ಮೊರೆ ಕೇಳಬರುತ್ತದೆ:

"ನಾವು ದೀರ್ಘ ಋಣದಿಂದ ಪೀಡಿತರಾಗಿರುವಾಗ ಆ ಋಣದ ವಿಮೋಚನೆಗಾಗಿ ಶ್ರೀ ವೆಂಕಟೇಶ ಮಹಾತ್ಮ್ಯದ ಎರಡನೆಯ ಆವೃತ್ತಿಯನ್ನು ಹೊರಡಿಸಿರುವೆವು. ಯಾಕಂದರೆ ಬಡವನಾದ ನಾನು ಮಹಾಭಾರತದ ಪ್ರಿಂಟಿಗಾಗಿ ೧೩ ಸಾವಿರ ರೂಪಾಯಿ ಸಾಲವಮಾಡುವಾಗ ಎಷ್ಟು ಕಷ್ಟಪಟ್ಟಿರಬಹುದೆಂಬುದನ್ನು ತಿಳಿಯಲು ಶ್ರೀನಿವಾಸನೆ ಸಮರ್ಥನು. ನಾನು ಋಣವಿಮೋಚನೆಗಾಗಿ ಭಗವಂತನನ್ನು ಹೀಗೆ ಪ್ರಾರ್ಥಿಸುವೆನು. ಲೋಕೇಶನಾದ ನೀನು ಸಾಲಕ್ಕಾಗಿ ಪೇಚಾಡಿರಲು ಕ್ಷುದ್ರನಾದ ನಾನು ನೀಗಲಾರದ ಸಾಲದಿಂದ ಎಷ್ಟು ಹಣ್ಣಾಗಿರಬಹುದೆಂಬುದನ್ನು ನನ್ನ ಹೃದಯಸ್ಥನಾದ ನೀನು ತಿಳಿದು ನನ್ನನ್ನು ಋಣಮುಕ್ತನಾಗಿ ಮಾಡಿ ಉದ್ಧರಿಸು. ಲಕ್ಷ್ಮೀಪತಿಯಾದ ನಿನಗೆ ಸಾಲವು ಬಹಳವಾಗಿ ಒಪ್ಪಬಹುದು. ಆದರೆ ಹುಟ್ಟುಬಡವನಾದ ನಾನು ಕೈಕೊಂಡಿದ್ದ ಪರೋಪಕಾರದ ಕಾರ್ಯಕ್ಕಾಗಿ ಮೇಲಿಂದ ಮೇಲೆ ಮಂದಿಯ ಮೋರೆ ನೋಡಬೇಕಾಗಿರಲು, ನನಗೆ ಸಾಲವು ಒಪ್ಪಬಹುದೇ? ಶ್ರಿಯಃ ಪತಿಯೇ, ನಿನ್ನ ಕೃಪೆಯಿಂದ ನಾನು ಋಣವಿಮೋಚನೆಯ ಸುದಿನವನ್ನು

ಕಂಡೇನೇನು? ಅಂಥ ಘಟನದಲ್ಲಿ ನಾನು ಪುನರ್ಜನ್ಮವನ್ನು ಹೊಂದಿದವನಂತೆ ವಿದ್ಯಾದಾನಾದಿ ಪರೋಪಕಾರದ ಕಾರ್ಯಗಳಲ್ಲಿ ಜಾಗೃತಿಯನ್ನೂ, ತತ್ಪರತೆಯನ್ನೂ ತೋರಬಹುದೇನು?"

ಗಳಗನಾಥರ ಈ ಮೊರೆಯನ್ನು ಶ್ರೀಯಃಪತಿಯು ಮಹಾಭಾರತಾನುವಾದದ ಎರಡನೇ ಸಂಪುಟದ ಮಟ್ಟಿಗೆ ಮಾತ್ರ ಕೇಳಿದನೆನ್ನಬೇಕು. ಅದರ ಪೀಠಿಕೆಯಲ್ಲಿ ಗಳಗನಾಥರು 'ಕಾರ್ಯವು ಬಲು ದೊಡ್ಡದು; ನಲವತ್ತು ಸಹಸ್ರ ರೂಪಾಯಿ ವೆಚ್ಚವಾದಾಗ ಮುಗಿಯುವಂತಹದು. ಕಾಲ ನೋಡಿದರೆ ಪ್ರತಿಕೂಲ. ಈ ಸ್ಥಿತಿಯಲ್ಲಿ ನಮ್ಮಿಂದ ಕಾರ್ಯದಲ್ಲಿ ವಿಲಂಬವಾದದ್ದಕ್ಕಾಗಿ ಕ್ಷಮಿಸಿ, ಎಂದಿನಂತೆ ಮುಂದಾದರೂ ನಮ್ಮನ್ನು ರಕ್ಷಿಸಬೇಕು' ಎಂದು ಕನ್ನಡಿಗರಲ್ಲಿ ಪುನಃ ಪ್ರಾರ್ಥನೆ ಮಾಡಿದರು.

ಆದರೆ ಇದಾವುದೂ ಫಲಕೊಡಲಿಲ್ಲ. ಮಹಾಭಾರತದ ಮುಂದಿನ ಸಂಪುಟಗಳು ಹೊರಬರಲೇ ಇಲ್ಲ. 'ಈವರೆಗೆ ಭಾರತವನ್ನು ಬರೆಯತೊಡಗಿರುವವರು ಬಹುಶಃ ಅದನ್ನು ಪೂರ್ಣಮಾಡಿರುವದಿಲ್ಲ' ಎಂಬ ಪ್ರತೀತಿಯು ಗಳಗನಾಥರ ವಿಷಯದಲ್ಲಿ ಕೊನೆಗೂ ನಿಜವಾಯಿತು! ಮೊಮ್ಮಕ್ಕಳ ಬಲಿ ತೆಗೆದುಕೊಂಡುದೂ ವ್ಯರ್ಥವಾಯಿತು. ಅದರ ಕಹಿನೆನಪು ಬಂದಾಗೆಲ್ಲ ಅವರ ಮನಸ್ಸು ಎಷ್ಟೊಂದು ನೊಂದುಕೊಂಡಿರಬೇಡ!

ಕ್ರಿ.ಶ. ೧೯೪೯ರಂದು ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಹಾವೇರಿಯಲ್ಲಿ ನಡೆಸಬೇಕೆಂದು ಗೊತ್ತಾಗಿದ್ದಿತು. ಊರ ಹಿರಿಯರಾದ ಗಳಗನಾಥರೇ ಅದರ ಸ್ವಾಗತಾಧ್ಯಕ್ಷರಾಗಿದ್ದರು. ಹಾವೇರಿಯಲ್ಲಿ ಸಾಹಿತ್ಯಿಕ ವಾತಾವರಣವನ್ನು ನಿರ್ಮಿಸಿದವರೇ ಅವರಲ್ಲವೆ. ಇದು ಅವರ ಕೊನೆಯ ಸಾರ್ವಜನಿಕ ಕಾರ್ಯವೆನ್ನಬೇಕು. ತೃತೀಯಾಶ್ರಮದ ಕೊನೆಯ ಘಟ್ಟದಲ್ಲಿದ್ದ ಅವರ ಕಾರ್ಯಕ್ಷೇತ್ರವು ಮನೆಯಲ್ಲಿನ ಧರ್ಮಕಾರ್ಯ, ಅತಿಥಿ ಸೇವೆ ಹಾಗೂ ಗ್ರಂಥ ಮಾರಾಟಕ್ಕಾಗಿ ಓಡಾಟ – ಇಷ್ಟಕ್ಕೆ ಸೀಮಿತವಾಗಿದ್ದಿತು.

ಅಂತೆಯೇ, ೧೯೩೩–೧೯೩೮ – ಈ ಐದು ವರ್ಷಗಳಲ್ಲಿ ಗಳಗನಾಥರ ಯಾವ ಹೊಸ ಗ್ರಂಥವೂ ಹೊರಬರಲಿಲ್ಲ. ೧೯೩೯ರಲ್ಲಿ ಮಾತ್ರ ಮತ್ತೆ ಲೇಖನಿಯನ್ನು ಎತ್ತಿಕೊಂಡರು. ಅದರ ಕಾರಣವೆಂದರೆ ಹಿಂದಿನ ವರ್ಷ ತಮಗಿದ್ದ ಸುಮಾರು ೯ ಸಾವಿರ ರೂಪಾಯಿ ಸಾಲ ತೀರಿಸುವದರ ಸಲುವಾಗಿ ಒಬ್ಬ 'ಧನಕೋಶ' ಜನರೊಡನೆ ಕಂತಿನಿಂದ ಸಾಲ ಮುಟ್ಟಿಸಲು ಆಹ್ವಾನ

ಮಾಡಿಕೊಂಡಿದ್ದರು. ಒಟ್ಟಿನ ವಾರ್ಷಿಕ ಕಂತು ೧,೩೦೦ ರೂಪಾಯಿ. ಅವಕ್ಕಾಗಿ ಐದು ಪುಸ್ತಕಗಳನ್ನು ಆ ವರ್ಷ ಮುದ್ರಿಸಬೇಕೆಂಬ ನಿರ್ಧಾರ ಮಾಡಿದರು. ಈ ಸಮಯದಲ್ಲಿ ಪೂರ್ವೋಕ್ತ ರಂಗಯ್ಯನವರಿಗೆ ಅವರು ಬರೆದ ಒಂದು ಪತ್ರ ಇಂತಿದೆ:

"ನೀವು 'ಕ್ರಮ ಜರುಗಿಸ'ಬೇಕಾಗುವದೆಂದು ಬರೆದದ್ದನ್ನು ಓದಿ ವಿಷಾದವಾಯಿತು. ಅಲ್ಲಿಯವರೆಗೆ ಯಾವ ಧನಕೋ ಜನರನ್ನು ಹೋಗಗೊಡುವದಿಲ್ಲ. ಅವರೂ ಹೋಗುವ ಹಾಗಿಲ್ಲ. ನೀವು ನಮಗೆ ೨,೦೦೦ ರೂಪಾಯಿ ಸಾಲವಾಗಿ ಕಾರ್ಡಿನ ಮೇಲೆ ಕೊಟ್ಟು ದೊಡ್ಡ ಮನಸ್ಸಿನಿಂದ ತೀರಿಸಿಕೊಂಡಿರುತ್ತೀರಿ. ಇನ್ನು ನಾನು ಯಾವ ಧನಕೋ ಜನರಿಗೂ ತ್ರಾಸವಾಗಬಾರದೆಂದು (ನನ್ನ ಎಲ್ಲ ಇಸ್ಟೇಟ ಅಡವು ಹಾಕಿ ) ಅವಾರ್ಡ್ ಮಾಡಿ ಕೊಟ್ಟಿರುತ್ತೇನೆ. ಮತ್ತು ಅವರೆಲ್ಲರೂ ಬಡ್ಡಿ ನಿಲ್ಲಿಸಿ ಕಂತ ಮಾಡಿಕೊಂಡಿರುತ್ತಾರೆ. ನೀವು ಆರಂಭಕ್ಕೆ ನಮ್ಮ ಪ್ರೆಸ್ಸು ಚಾಲೂ ಮಾಡಿಸಿ ಕೀರ್ತಿ ಪಡೆದಿರುತ್ತೀರಿ. ಈಗೂ ದೊಡ್ಡ ಮನಸ್ಸಿನಿಂದ ನಮ್ಮ ಕಂತ ಮುಟ್ಟಿಸಿಕೊಂಡು ಎಲ್ಲರಂತೆ ಕೀರ್ತಿ ಪಡೆಯಬೇಕು. ಲೋಭವಿರಬೇಕು. ಇ.ವಿ." (೧೩-೭-೧೯೩೮)

ಆ ವರ್ಷ ಬಂದ **ನಳಚರಿತ್ರೆ**ಯು ಹೊಸ ಲೇಖವೇನೂ ಅಲ್ಲ. ವನಪರ್ವದಲ್ಲಿ ಬಂದ ನಳದಮಯಂತೀ ಕಥೆಯನ್ನು ಸ್ತ್ರೀ ವಿಷಯಕವಾದ 'ರಹಸ್ಯ' ಪ್ರಬಂಧಗಳನ್ನೂ ಸೇರಿಸಿ ಚಿಕ್ಕ ಪುಸ್ತಕವನ್ನಾಗಿ ಮಾಡಿದರು. ಎರಡನೆಯ ಪ್ರಕಟಣೆಯಾದ ಸ್ವರಾಜ್ಯ ಸುಗಂಧವು 'ಸ್ವತಂತ್ರ, ಐತಿಹಾಸಿಕ, ರಹಸ್ಯಪೂರ್ಣ ಬೋಧಪ್ರದ ಕಾದಂಬರಿಯು'. ಎರಡು ತಿಂಗಳಲ್ಲಿ ಬರೆದು ಮುಗಿಸಲಾದ ಕಾದಂಬರಿಯು ಇತರ ಕಾದಂಬರಿಗಳಂತೆಯೇ ವಾಚನದ ಔತ್ಸುಕ್ಯವನ್ನೂ ಕಾಯ್ದುಕೊಂಡಿದ್ದುದು ಅಚ್ಚರಿಯ ಸಂಗತಿ. ಮುಸಲ್ಮಾನರ ವಶದಲ್ಲಿದ್ದ ಕಲ್ಯಾಣಕೋಟೆಯನ್ನು ಶಿವಾಜಿಯ ಸರದಾರರಾದ ನೇತಾಜಿ ಪಾಲಕರ, ಆಬಾಜಿ ಸೋನದೇವ ಮತ್ತು ವೆಂಕಾಜಿ ವಾಘ - ಇವರು ವಶಪಡಿಸಿಕೊಂಡ ಕಥೆ ಇದರಲ್ಲಿದೆ. ಶಿವಾಜಿಯ ಪರನಾರೀ ಸೋದರತ್ವವು ಪ್ರಾಸಂಗಿಕವಾಗಿ ವ್ಯಕ್ತವಾಗಿದೆ.

"ಈ ಕಾದಂಬರಿಯ ವಿಷಯದಲ್ಲಿ ಎರಡು ಮಾತು ಬರೆಯುವದು ಅವಶ್ಯವಾಗಿದ್ದರೂ ನಮಗೆ ಬೇರೆ ಪುಸ್ತಕಗಳನ್ನು ಬೇಗನೆ ಬರೆಯುವ

ಅವಸರವಿದ್ದದ್ದರಿಂದ ಈಗ ನಾವು ಒಂದು ಮಾತನ್ನು ಕೂಡ ಬರೆಯುವದಿಲ್ಲ. ಆದರೆ ಈ ಪುಸ್ತಕ ಮೊದಲು ಮಾಡಿಕೊಂಡು ನಾವು ಇನ್ನು ಮೇಲೆ ಬರೆಯುವ ಪುಸ್ತಕಗಳು 'ಸಾಲ ತೀರಿಸುವ ಪುಸ್ತಕ'ಗಳಾಗಿರುವವೆಂಬುದನ್ನು ಮಾತ್ರ ನಮ್ಮ ಕನ್ನಡಿಗರಿಗೆ ವಿನಯದಿಂದ ಅರಿಕೆ ಮಾಡಿಕೊಳ್ಳುವೆವು. ನಮಗೆ ಹೋದ ಪುಷ್ಯಮಾಸಕ್ಕೆ ಎಪ್ಪತ್ತು ವರ್ಷಗಳು ತುಂಬಿಹೋದುವು. ಆದ್ದರಿಂದ ಕನ್ನಡಿಗರು ನಮ್ಮ ಸಾಲವನ್ನು ಬೇಗನೆ ತೀರಿಸಿದರೆ, ನಮ್ಮ ವೃದ್ಧಾಪ್ಯದ ಕಾಲದ ಕಷ್ಟತರವಾದ ಸಂಚಾರದ ಕಾರ್ಯವನ್ನು ಮುಗಿಸಿಬಿಟ್ಟು ಶೇಷಾಯುಷ್ಯವನ್ನು ಈಶ್ವರಾರಾಧನೆ, ಅತಿಥಿಸೇವೆ, ಗೋಸೇವೆ ಮುಂತಾದ ತಾರಕ ಕಾರ್ಯಗಳನ್ನು ಮಾಡುತ್ತ ಶಾಂತಿದಾಯಕಗಳಾದ ಆಧ್ಯಾತ್ಮಿಕ ಗ್ರಂಥಗಳನ್ನು ಬರೆಯುತ್ತ ಕಳೆದು, ಸ್ವಸ್ಥವಾಗಿ ಮನೆಯಲ್ಲಿರಬೇಕೆಂದು ಮಾಡಿದ್ದೇವೆ."

ಹಾಗೆ ಹೊರಬಂದ ಮುಂದಿನ ಪುಸ್ತಕಗಳೆಂದರೆ **ದುರ್ಗದ ಬಿಚ್ಚುಗತ್ತಿ ಮತ್ತು ಕಲಿ-ಕುಠಾರ**. ಮೊದಲಿನದು ಚಿತ್ರದುರ್ಗದ ಪಾಳೆಯಗಾರಿಕೆಗೆ ಸಂಬಂಧಪಟ್ಟುದು. ಭರಮನಾಯಕ ಮತ್ತು ಮುದ್ದಣ್ಣ ಇವರ ನಡುವಿನ ಘರ್ಷಣೆಯ ಕಥೆಯಲ್ಲಿ ಮುರಗೀಶ ಗುರುಗಳು ಮತ್ತು ಓರ್ವ ರಣ ಹುಚ್ಚಿ ಇವರ ಅದ್ಭುತರಮ್ಯ ಪಾತ್ರಗಳು ಬಂದಿವೆ. ಈ ಕಾದಂಬರಿಯಲ್ಲಿ ಕಥಾಭಾಗವು ಕಡಿಮೆ. ಮೊದಲಿನ ಎರಡು ಪ್ರಕರಣಗಳು ಚಿತ್ರದುರ್ಗದ ಚರಿತ್ರೆಗೂ, ೧೧-೧೩ ಪ್ರಕರಣಗಳು ಮುರಗೀಶರ ಉಪದೇಶಕ್ಕೂ ಮೀಸಲಾಗಿವೆ.

ಇದು ಕಾದಂಬರಿಯ ಪ್ರಥಮ ಭಾಗ. "ಮುಂದೆ ಏನಾಯಿತೆಂಬುದನ್ನು ಇಲ್ಲಿ ಹೇಳಲಾಗುವದಿಲ್ಲ. ಈ ಕಾದಂಬರಿಯ ಎರಡನೆಯ ಭಾಗವಾದ 'ಸತ್ಸಮಾಗಮ ಪ್ರಭಾವ' ಎಂಬುದನ್ನು ಬರೆಸುವದು ಶ್ರೀ ಮುರಗೀಶ ಗುರುವನ್ನೇ ಕೂಡಿರುವದರಿಂದ ಈಗ ಸದ್ಯಕ್ಕೆ ನಾವು ಲೇಖನಿಯನ್ನು ಕೆಳಗಿಟ್ಟು ಬಿಡುವೆವು." ಎಂಬ ಹೇಳಿಕೆಯಿಂದ ಈ ಕೃತಿ ಮುಕ್ತಾಯವಾಗಿದೆ. ಎರಡನೆಯ ಭಾಗ ಹೊರಬರಲೇ ಇಲ್ಲ. ಆದರೆ 'ಕಲಿ ಕುಠಾರ' ಕಾದಂಬರಿಯ ಎರಡನೆಯ ಭಾಗವು ಮೊದಲಿಗೆ ಪ್ರಕಟವಾಯಿತು! ಇದು ಲೋಕಾಪುರ ಪೀಠದ ಚರಿತ್ರ ಗ್ರಂಥ. ಈ ಪೀಠದ ಮೂಲಪುರುಷರಾದ ಪರಮಹಂಸರು ಅವಧೂತ ಪಂಥೀಯರು, "ಚರಿತ್ರದ ಒಂದನೆಯ ಭಾಗವನ್ನು ಮುದ್ರಿಸದಿದ್ದುದು ವಾಚಕರಿಗೆ ಅಸಮಂಜಸವಾಗಿ ತೋರಿದ್ದರೆ ಆಶ್ಚರ್ಯವೇನಿಲ್ಲ; ಆದರೆ ನನ್ನ ಹಾಗು

ಲೋಕಾಪುರ ಪೀಠದ ಋಣಭಾರದ ದುಸ್ಸಹತೆ, ಸಂಪೂರ್ಣ ಗ್ರಂಥದ ಮುದ್ರಣ ಕಾರ್ಯಕ್ಕೆ ಬೇಕಾಗುವಷ್ಟು ದ್ರವ್ಯದ ಅನುಕೂಲತೆಯು ಆಗದೆಯಿದ್ದದ್ದು, ಚರಿತ್ರದ ಒಂದನೆಯ ಭಾಗದಲ್ಲಿಯ ವಿವಿಧ ವಿಷಯಗಳ ಗಹನತೆ, ಸಾಲ ತೀರಿಸುವ ಐದು ಹೊಸ ಪುಸ್ತಕಗಳನ್ನು ಮುದ್ರಿಸಿಕೊಂಡೇ ಗ್ರಂಥ ಪ್ರಸಾರ ಮಡಬೇಕಾದ ಪರಿಸ್ಥಿತಿ - ಇವು ಸದ್ಯದ ಪ್ರಕಟನೆಗೆ ಕೊಟ್ಟ ಕಾರಣಗಳಾಗಿವೆ. ಇದರ ಮೊದಲನೆಯ ಭಾಗವು ಆಮೇಲೆಯೂ ಹೊರಬರಲಿಲ್ಲ. ಇಂಥ ಅಪೂರ್ಣ ಕೃತಿಗಳಲ್ಲಿ' 'ಹರಿವಂಶ' ಪುರಾಣದ ಅನುವಾದವನ್ನೂ ಸೇರಿಸಬೇಕು.

ಬರೆಯಲೆಂದು ಅವರು ಹೊಳಹು ಹಾಕಿಕೊಂಡಿದ್ದ ಕೃತಿಗಳು ಅವೆಷ್ಟೋ? ಕೆಲವುಗಳ ಸುಳುಹು ಮಾತ್ರ ದೊರೆತಿದೆ. ಮಾನಪೀ ಸುಖ ಅಥವಾ ಚಾಣಕ್ಯನ ಸುಖಸೂತ್ರಗಳು ಎಂಬ ಗ್ರಂಥವನ್ನು ಬರೆದು ಅದನ್ನು ಬಿ.ಎಂ.ಶ್ರೀ.ಯವರಿಗೆ ಅರ್ಪಿಸಬೇಕೆಂದು ಮಾಡಿದ್ದರು. ಅವರಲ್ಲಿ ರಾಜಸತ್ತೆ, ಗೃಹಶಿಕ್ಷಣ, ಸಾಮಾಜಿಕ ಕರ್ತವ್ಯ, ಲೇಖನ ಕಾರ್ಯ, ಧರ್ಮಸಮನ್ವಯ - ಇವೇ ಮುಂತಾದ ವಿಷಯಗಳು ಸಮಾವೇಶಗೊಳ್ಳಲಿದ್ದುವು. ಇವು ಕೆಲವು ವಿಷಯಗಳ ಪೂರ್ವಸಾರವನ್ನು (preview) ಗಳಗನಾಥರು ತಮ್ಮ 'ಸದ್ಗುರು ಪ್ರಭಾವ' ಗ್ರಂಥದಲ್ಲಿ ಕೊಟ್ಟಿದ್ದಾರೆ.

'ಕನ್ನಡ ಭಾಷೆಯ ಏಕೀಕರಣ ಸಾಧನವಾದ ಉದ್ಬೋಧಕ ಗದ್ಯ ಪದ್ಯ ರತ್ನಮಾಲಾ ಅಥವಾ ಮಾನಪೀ ಹಿತಾದರ್ಶ' ಎಂಬ ಕೃತಿಯ ೧೫- ೨೦ ಪುಟಗಳ ಹಸ್ತಪ್ರತಿಯು ದೊರೆತಿದ್ದು ಅದರಲ್ಲಿ ಮಕ್ಕಳ ಮಾನಸಿಕ ಅಭಿವೃದ್ಧಿಯ ತಾತ್ವಿಕ ವಿವೇಚನೆಯಿದೆ. ಮನುಷ್ಯನು ತನ್ನ ಬುದ್ಧಿವಂತಿಕೆಯ ಗೌರವಕ್ಕನುಸರಿಸಿ ಅದರ ಸಾಫಲ್ಯವನ್ನು ಮಾಡಿಕೊಳ್ಳಬೇಕಾದರೆ ತನ್ನ ದೇಹರಕ್ಷಣೆಯ ಆದ್ಯಕರ್ತವ್ಯದೊಡನೆ ಆತ್ಮೋನ್ನತಿಯ ಕರ್ತವ್ಯಗಳನ್ನು ಜರುಗಿಸುತ್ತ ಹೋಗಬೇಕಾಗುವುದು - ಎಂದಿದ್ದಾರೆ. ಆ ಕರ್ತವ್ಯಗಳೆಂದರೆ :

ನೀತಿ-ಮತ್ತೆ
ದೈವೀಭಾವ — ಬಾಲ್ಯ
ಧಾರ್ಮಿಕ ಬುದ್ಧಿ — ಕುಮಾರಕ
— ಪ್ರೌಢ
ಶೀಲ ಸಂವರ್ಧನ — ಮುಪ್ಪು
ಭಕ್ತಿ

ಪೌರುಷ
ಔದಾರ್ಯ / ತ್ಯಾಗಬುದ್ಧಿ

ನಿಸ್ಪೃಹತೆ/ವೈರಾಗ್ಯ
ಶಾಂತಿ ಅಥವಾ ಮೋಕ್ಷ

ಮೊದಲಿನ ಐದು ವಿಷಯಗಳನ್ನು ಕುರಿತ ವಿಸ್ತಾರ ವಿವೇಚನೆ ಈ ಯೋಜಿತ ಗ್ರಂಥದ ಉದ್ದೇಶವಾಗಿದ್ದಿತು.

ಗಳಗನಾಥರು ಮುಮ್ಮಡಿ ಕೃಷ್ಣರಾಜ ಒಡೆಯರ ಬಗ್ಗೆ ಗ್ರಂಥವನ್ನು ಬರೆಯಬೇಕೆಂದಿದ್ದರು. ಪ್ರಜಾಸತ್ತೆಗಿಂತ ಪ್ರಜಾಜನರ ಹಿತವನ್ನು ಬಯಸುವ ರಾಜಸತ್ತೆಯೇ ಹಿತಕರವೆಂದು ಅವರು ನಿಶ್ಚಲವಾಗಿ ನಂಬಿದ್ದರಷ್ಟೆ. ಸನಾತನ ಧರ್ಮವನ್ನು ಎತ್ತಿ ಹಿಡಿದು ಅಸಂಖ್ಯ ದಾನಧರ್ಮಾದಿಗಳನ್ನು ಮಾಡುತ್ತಿದ್ದ ಹಾಗೂ ಅನೇಕ ಪೌರಾಣಿಕ ಕೃತಿಗಳನ್ನು ಪ್ರಕಟಿಸಿದ ಮುಮ್ಮಡಿಯವರು ಗಳಗನಾಥರಿಗೆ ಆದರ್ಶ ರಾಜನಾಗಿ ಕಂಡದ್ದು ಸಹಜವೇ. ಗಳಗನಾಥರು ಮುಖ್ಯತಃ, ಸನಾತನ ರಾಜರ್ಷಿಗಳ ಹಿನ್ನೆಲೆಯಲ್ಲಿ ಮುಮ್ಮಡಿಯವರ ಪ್ರಜಾಹಿತಾದರ್ಶವನ್ನು ಕೊಡಬಯಸಿದ್ದರೆಂಬುದು ಅದರ ವಿಷಯಾನುಕ್ರಮಣಿಕೆಯಿಂದ ತಿಳಿದುಬರುತ್ತದೆ.

ಶ್ರೀಮನ್ಮಹಿಸೂರ ಸಂಸ್ಥಾನದ

ಮುಮ್ಮಡಿ

**ಶ್ರೀ ಕೃಷ್ಣರಾಜ ಒಡೆಯರು**

ಅರ್ಥಾತ್

**ಪ್ರಜಾದರ್ಶ**

ವಿಷಯಾನುಕ್ರಮಣಿಕೆ :



ಗ.ಮಾ.

೨೦. ರಾಜರ್ಷಿತ್ವ
೨೧. ಪ್ರಜಾವಾತ್ಸಲ್ಯ ವೈಭವ
೨೨. ಕಾರ್ಯಕುಶಲತೆ
೨೩. ರಾಜನಿಷ್ಠಾಸಂಭ್ರಮ
೨೪. ಪ್ರಭುತ್ವದಲ್ಲಿಯ ಗಾಂಭೀರ್ಯ
೨೫. ಪಾರತ್ರಿಕ ದೃಷ್ಟಿ
೨೬. ರಾಜ್ಯಪಾಲರ ಪದ್ಧತಿಯಲ್ಲಿಯ ಅಪೂರ್ವತೆ
೨೭. ರಾಜನಿಷ್ಠಾ ಪ್ರದರ್ಶನಗಳು
೨೮. ನಾ ವಿಷ್ಣುಃ ಪೃಥಿವೀ ಪತಿತ್ವ
೨೯. ಅಶಾಂತಿಯ ರೂಪಾಂತರವು - ಶಾಂತಿಯಲ್ಲಿ
೩೦. ಉಪಸಂಹಾರ

ತಾ॥ ೯-೩-೪೦ ಇ. ಶಕೆ ೧೮೬೧ ಪ್ರಮಾಥಿ ಫಾಲ್ಗುನ ಶುಕ್ಲ ದ್ವಿತೀಯಾ ರವಿವಾರ.

೩೧. ಸದ್ಭಾವ ಸೌಂದರ್ಯ
೩೨. ಶೀಲಸಂಪತ್ತು
೩೩. ಸದ್ಗುಣ ಸಂಭ್ರಮ
೩೪. ಪುಣ್ಯಪ್ರಭಾವ
೩೫. ನಾ ವಿಷ್ಣುಃ ಪೃಥಿವೀ ಪೃಥಿವ್ಯಾ"

ಈ ಹೊಳಹನ್ನು ಹಾಕಿದ ತಾರೀಖನ್ನು ಗಮನಿಸಬೇಕು. ತಮ್ಮ ೭೧ನೆಯ ವಯಸ್ಸಿನಲ್ಲಿ ಅದೆಂಥ ಲೇಖನ ಸಾಹಸಕ್ಕೆ ಇಳಿದಿದ್ದರು?

ಬರೆಯಬೇಕೆಂದಿದ್ದ ಈ ಕೃತಿಗಳು, ಅದರಂತೆ ಪೌರಾಣಿಕ ಗ್ರಂಥಗಳ ರಹಸ್ಯ ವಿವರಣೆ - ಇವನ್ನು ಪರಿಶೀಲಿಸಿದಾಗ ಎರಡು ಮಾತುಗಳು ನಿಷ್ಪನ್ನವಾಗುವವು. ಒಂದು, ಅವರ ವಿಚಾರಧಾರೆಯಲ್ಲಿಯ ಮೌಲಿಕತೆ, ಇನ್ನೊಂದು ಅವರಲ್ಲಿದ್ದ ತೀವ್ರ ಸಾಮಾಜಿಕ ಪ್ರಜ್ಞೆ.

ಗಳಗನಾಥರು ಮರಾಠೀ ಕಾದಂಬರಿಗಳನ್ನು ಅನುವಾದಿಸಿದವರು - ಎಂಬ ಸ್ಥೂಲ ಅಭಿಪ್ರಾಯಕ್ಕೆ ಇದು ವಿರೋಧಿಯಾಗಿದೆ. ಅವರ ಕಾದಂಬರಿಗಳಲ್ಲಿಯೇ ಕೆಲವು ಸಂಪೂರ್ಣ ಸ್ವತಂತ್ರವಾಗಿವೆ. ಇನ್ನು ಹಲವು,

ಎರಡು ಮೂರು ಗ್ರಂಥಗಳ ಆಧಾರದಿಂದ ರೂಪಿತವಾಗಿವೆ, ಉಳಿದವುಗಳು ಕೂಡ ಮೂಲವನ್ನು ಚಾಚೂ ತಪ್ಪದಂತೆ ಅನುಸರಿಸಿದವುಗಳಲ್ಲ ಎಂಬುದನ್ನೂ ನೋಡಿದ್ದೇವೆ. ಅನುವಾದಿತ ಧಾರ್ಮಿಕ ಬರವಣಿಗೆಗೂ ಇದು ಬಹುಮಟ್ಟಿಗೆ ಅನ್ವಯಿಸುತ್ತದೆ.

ಹಳೆಯದನ್ನು ಎತ್ತಿಹಿಡಿಯುವದನ್ನೇ ತಮ್ಮ ಲೇಖನಿಯ ಗುರಿಯನ್ನಾಗಿ ಇಟ್ಟುಕೊಂಡಿದ್ದ ಗಳಗನಾಥರು ಕಣ್ಣುಮುಚ್ಚಿ ಪರಿಸರದ ಪರಿಜ್ಞಾನವಿಲ್ಲದೇ ಹಾಗೆ ಮಾಡಿದವರಲ್ಲ. ಇಂದಿನ ನಮ್ಮ ಜೀವನ, ಆರ್ಷೇಯ ಪರಂಪರೆಯ ತಳಹದಿಯ ಮೇಲೆ ಹೇಗೆ ರೂಪುಗೊಳ್ಳಬೇಕೆಂಬುದನ್ನು ಅವರು ತೋರಿಸಿ ಕೊಟ್ಟರು.

ಅವರು ಪಂಡಿತರಲ್ಲದಿದ್ದರೂ ತಕ್ಕಮಟ್ಟಿಗೆ ಧರ್ಮಶಾಸ್ತ್ರಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಆ ಬಂಡವಲದ ಅತಿ ಹೆಚ್ಚಿನ ಉಪಯೋಗ ಅವರು ಮಾಡಿಕೊಂಡರು. ಅವುಗಳ ತಾತ್ವಿಕ ವಿವೇಚನೆಗಿಂತ ವ್ಯವಹಾರ ದೃಷ್ಟಿಯನ್ನಿಟ್ಟುಕೊಂಡು, ಪುರಾಣ ಕಥನಗಳ ಮೂಲಕ ಸದ್ಧರ್ಮಬೋಧೆಯನ್ನು ಮಾಡಲೆಳಸಿದರು. ಸುಲಲಿತವಾಗಿ ಧಾರ್ಮಿಕ ವಿಷಯಗಳನ್ನು ಬರೆದವರಲ್ಲಿ ಗಳಗನಾಥರೇ ಅಗ್ರಗಣ್ಯರೆನ್ನಬೇಕು.

ಅವರ ದೃಷ್ಟಿಯಲ್ಲಿ ಇಂದಿನ ಮಾನವನ ಬದುಕು ಹಸನಾಗುವುದಕ್ಕೆ ಮೂರು ಅಂಶಗಳು ಮಹತ್ವದವಾಗಿದ್ದುವು. ಸತ್‌ಶೀಲ, ಸದ್ಗುರು ಸಮಾಗಮ ಮತ್ತು ಧರ್ಮನಿಷ್ಠೆ. ವ್ಯಕ್ತಿಯ ಯೋಗ್ಯತೆ ಅಥವಾ ರಾಷ್ಟ್ರದ ಯೋಗ್ಯತೆಯು - ಅವುಗಳ ಉತ್ಕರ್ಷಾಪಕರ್ಷದಿಂದ ಇಲ್ಲವೆ ಐಶ್ವರ್ಯ ದಾರಿದ್ರ್ಯಗಳಿಂದಲ್ಲ ಸತ್‌ಶೀಲದಿಂದ ನಿರ್ಣಯಿಸಲ್ಪಡುತ್ತದೆ. ಶೀಲವಿದ್ದಲ್ಲಿ ಸಕಲೈಶ್ವರ್ಯವೂ ಜಯವೂ ಸಿದ್ಧ' ಎಂದು ಖಚಿತವಾದ ನಿಲುವೆಯನ್ನು ತಾಳಿದ್ದರು. ಎರಡನೆಯದಾಗಿ 'ಈ ಜಗತ್ತೇ ಗುರುಸ್ವರೂಪವಾಗಿರುವದರಿಂದ ಸದ್ವೃತ್ತಿಯ ಪುಣ್ಯಶಾಲಿಗಳಿಗೆ ಅವರು ಇದ್ದಲ್ಲಿ ಗುರುವು ನಿಶ್ಚಯವಾಗಿ ಪ್ರಕಟವಾಗುವನು ಮತ್ತು ಸಂಕಟಗಳನ್ನು ದೂರಮಾಡುವನು'ಎಂದು ನಂಬಿದುದಕ್ಕಂತೂ ಅವರ ಸಮಗ್ರ ಜೀವನವೇ ಒಂದು ನಿದರ್ಶನ ಮತ್ತು ಅದನ್ನು ಬೇಸರವಿಲ್ಲದೆ ಒಂದೇ ಸಮನೆ ಬೋಧಿಸಿದರು.

ಅವರ ಧರ್ಮನಿಷ್ಠೆಯು ವಿಶಿಷ್ಟವಾಗಿದ್ದಿತು. ಅವರ ದೃಷ್ಟಿಯಲ್ಲಿ ಧರ್ಮವೆಂದರೆ ಶಿಸ್ತು..... ಯಾವ ಧರ್ಮದ ಶಿಸ್ತನ್ನು ಹಿಡಿದರೂ ಆ ಶಿಸ್ತಿನ

ಯೋಗ್ಯತೆಯಂತೆ ಅವನ ಕಲ್ಯಾಣವಾಗುತ್ತದೆ ಎಂದು ಭಾವಿಸಿದ್ದರು. ಅದಕ್ಕೂ ಮುಂದೆ ಹೋಗಿ, 'ಜನಹಿತವೇ ಎಲ್ಲ ಧರ್ಮಗಳ ಗುರಿಯಾಗಿರುವದರಿಂದ ಯಾವ ಧರ್ಮವೂ ತಿರಸ್ಕರಣೀಯವಲ್ಲ' ಆದ ಕಾರಣ ಪರಧರ್ಮ ಸಹಿಷ್ಣುತೆಯು ಸ್ವಧರ್ಮನಿಷ್ಠರಲ್ಲಿ ಇರಬೇಕಾದ ಗುಣವೆಂದೂ ಅವರು ಒತ್ತಿ ಹೇಳಿದ್ದಾರೆ.

ಇಂದಿನವರ ಶಿಥಿಲ ಧರ್ಮವೃತ್ತಿಯನ್ನು ಅವರು ಟೀಕಿಸುತ್ತಿದ್ದುದು ಸಹಜವೇ ಆಗಿದೆ. ಚಿದಂಬರ ಚರಿತ್ರೆಯನ್ನು ಬರೆಯುವ ಕಾಲಕ್ಕೆಯೇ ಅದು ಕಂಡುಬಂದಿದೆ. ಸದ್ಬೋಧಚಂದ್ರಿಕೆಯ ಬಿಡಿಲೇಖನಗಳಲ್ಲಿಯೂ ವ್ಯಕ್ತವಾಗಿದೆ.

'ನಾವು ನಾಸ್ತಿಕ ಪಂಥವನ್ನು ಸ್ವೀಕರಿಸಹತ್ತಲು ನಮ್ಮಲ್ಲಿ ದೇವ ಲಂಡತನವೂ ಪಿತೃಲಂಡತನವೂ ಹೆಚ್ಚಿದುವು. ಹಿರಿಯರು ಕಿರಿಯರೆಂಬ ತಾರತಮ್ಯವೂ ಇಲ್ಲದಾಯಿತು. ನಮ್ಮ ಅನುಭವವೇ ಅನುಭವವೆಂತಲೂ ನಮ್ಮ ಅನುಭವಕ್ಕೆ ಬಾರದ ಸಂಗತಿಗಳು ನಂಬತಕ್ಕವಲ್ಲವೆಂತಲೂ ನಾವು ಪ್ರತಿಪಾದಿಸಹತ್ತಿದೆವು. ಧರ್ಮಗ್ರಂಥಗಳ ಮೇಲಿನ ನಮ್ಮ ವಿಶ್ವಾಸವು ಹಾರಿತು. ಅವನ್ನು ಧೂರ್ತರು ಸ್ವಹಿತಕ್ಕಾಗಿ ಬರೆದರೆಂಬ ಅಭಿಪ್ರಾಯವನ್ನು ಹಿಂದುಮುಂದು ನೋಡದೆ ಕೊಡಹತ್ತಿದೆವು.'

ಇದರ ಪರಿಣಾಮವೇನಾಯಿತು? ದಿನದಿನಕ್ಕೆ ಜಗತ್ತಿನಲ್ಲಿ ಅಶಾಂತಿಯು ಹೆಚ್ಚುತ್ತ ಉಂಡವನಿಗೂ ಸುಖವಿಲ್ಲ, ಉಪವಾಸವಿದ್ದವನಿಗೂ ಸುಖವಿಲ್ಲವೆಂಬಂತೆ, ಜಗತ್ತಿಗೆ ಬೆಂಕಿ ಹಚ್ಚಿದ ಹಾಗಾಗಿ ತಾಪದ ಸಾಮ್ರಾಜ್ಯವು ತೀವ್ರವಾಗುತ್ತ ಸರ್ವತ್ರ ವಿಷಮತೆಯು ಒಡೆದು ಕಾಣುತ್ತಿರುವದು. ಹಿತದ ಮಾರ್ಗವನ್ನು ಕೆಡಿಸಿ ಅಹಿತದ ಮಾರ್ಗವನ್ನು ರಾಜಮಾರ್ಗವಾಗಿ ಮಾಡುವ ಹಾಗೂ ಕಲಿಪ್ರಭೆಯಿಂದ ರಮ್ಯರಾಗಿ ತೋರುವ ಶ್ರೇಷ್ಠ ಅಹಂಕಾರಿಗಳೇ ಈಗಿನ ರಾಷ್ಟ್ರಗುರುಗಳು! ಅವರ ಈಗಿನ ಅಪಕ್ವ ಚಂಚಲವೃತ್ತಿಯ ಆಧಿಪತ್ಯದಲ್ಲಿ ಧರ್ಮಕ್ಕೆ ಸ್ಥಿರತ್ವವಿಲ್ಲ; ಇವೆಲ್ಲವೂ ಸ್ವಾರ್ಥಪರಾಯಣತೆಯ ಸ್ವಚ್ಛಂದ ವೃತ್ತಿಯಲ್ಲಿ ದಿನಕ್ಕೊಂದು ಚಂದದಿಂದ ಬದಲಾಗುತ್ತ 'ಪಿಂಡಗಳಷ್ಟು ಪ್ರಕೃತಿಗಳು' ಎಂಬ ವ್ಯಾವಹಾರಿಕ ಸಿದ್ಧಾಂತವೇ ಎಲ್ಲದರ ಜೀವಾಳವಾಗಿ ಹೋಗಿದೆ. ಈಗ ಯಾರ ಹಂಗು ಯಾರಿಗೂ ಉಳಿಯದೆ ಹುಡುಗರಿಂದ ಹಿರಿಯರವರೆಗೆ ಪ್ರತಿಯೊಂದು ವ್ಯಕ್ತಿಯು, 'ಸ್ವಾತಂತ್ರ್ಯ ಸ್ವಾತಂತ್ರ್ಯ' ಎಂದು ಕೂಗುತ್ತ ಸರ್ವತಂತ್ರ

ಸ್ವತಂತ್ರ ಈಶ್ವರ ಸ್ವರೂಪವನ್ನು ಹೊಂದಿಬಿಡುತ್ತಲಿವೆ! ಅಂದ ಬಳಿಕ ಯಾರು ಯಾರಿಗೆ ಹೇಳಬೇಕು, ಯಾರು ಯಾರ ಮಾತು ಕೇಳಬೇಕು?"

– ಈ ವಿಶ್ಲೇಷಣೆಯ ತಾತ್ಕಾಲಿಕ ಪ್ರಚೋದನೆ ಏನೇ ಇದ್ದಿರಲಿ, ಪ್ರಸಕ್ತ ಸಮಾಜದ ಈ ಪರಿಸ್ಥಿತಿಯು ಇಂದಿನ ಇಪ್ಪತ್ತನೆಯ ದಶಕದಲ್ಲಿ ಇನ್ನಷ್ಟು ಉಲ್ಬಣಗೊಂಡಿದ್ದನ್ನು ನಾವು ಕಾಣುತ್ತಿದ್ದೇವೆ.

ಇಂತು ಜನರ ಬದುಕು ಹಸನಾಗಬೇಕು ಎಂಬ ಏಕಮೇವ ಉದ್ದೇಶದಿಂದ, ಅವರು ಲೇಖನಿಯನ್ನು ಎತ್ತಿದರು. ತಮ್ಮ ಸಂಭಾಷಣೆ, ಸಾರ್ವಜನಿಕ ಭಾಷಣಗಳಲ್ಲಿ ಅದನ್ನೇ ಹೇಳುತ್ತಿದ್ದರು. ಅವರ ನಿತ್ಯ ಜೀವನವಾದರೂ ಅದೇ ಉದ್ದೇಶದಿಂದ ಪ್ರೇರಿತವಾಗಿದ್ದಿತು. ಅದರ ಪರಿಣಾಮವಾಗಿ ಅವರ ಸಂಪರ್ಕವನ್ನು ಹೊಂದಿದ ನೂರಾರು ಜನರೂ ಸಹಸ್ರಾಂತರ ಓದುಗರೂ ಆ ಪ್ರಭಾವಕ್ಕೆ ಒಳಗಾದರೆಂಬ ಮಾತು ಬಲು ದೊಡ್ಡದು. ಗಳಗನಾಥರು ಹಿಂದಿನ ಜನ್ಮದಲ್ಲಿ ಓರ್ವ ಸಾಧಕರಾಗಿ ಬಾಳಿದ್ದಿರಬೇಕು. ಆದೀಗ ಪೂರ್ಣತ್ವವನ್ನು ಹೊಂದುವದಕ್ಕೆ ಧಡಪಡಿಸುತ್ತಿತ್ತೆನ್ನಬಹುದು. ಅದರ ಸೆಳೆತ ಇಷ್ಟೊಂದು ಬಲವತ್ತರವಾಗಿತ್ತಲ್ಲ – ದಿನ ಹೋದಹೋದಂತೆ, ಧರ್ಮದ ಶಿಥಿಲತೆಯು ಹೆಚ್ಚಾದಂತೆ ಇವರ ಧರ್ಮನಿಷ್ಠೆಯು ಮತ್ತಷ್ಟು ಆಳವಾಗುತ್ತ ನಡೆಯಿತು. ಹೊಸಕಾಲದ ಪ್ರವಾಹದೆದುರು ಈಸಲು ಇಳಿವಯಸ್ಸಿನಲ್ಲಿಯೂ ಹಿಂದೆ ಮುಂದೆ ನೋಡಲಿಲ್ಲ.

ಆಮೇಲೆ ಅವರು ಬದುಕಿ ಇದ್ದುದು ಎರಡು ವರ್ಷ ಮಾತ್ರ. ಕರುಳಿನ ಕ್ಯಾನ್ಸರ್ ಅವರ ದೇಹದೊಳಗೆ ಅವರಿಗರಿಯದಂತೆಯೇ ಮೆಲ್ಲನೆ ಹರಡುತ್ತ ಸಾಗಿದ್ದಿತು. ಆಗೂ ಬಿಡುವಿಲ್ಲದ ದುಡಿಮೆ ಅವರದು. ಗ್ರಂಥ ಬರೆಯಲು ವಿಷಯದ ಹೊಳಹುಗಳಿದ್ದುವು. ಮುದ್ರಿಸಲು ಸ್ವಂತದ ಮುದ್ರಣಾಲಯ ಇದ್ದಿತು. ಮಾರಾಟ ಮಾಡಲು ಪುಸ್ತಕಗಳೂ ಇದ್ದುವು. ಮನಸ್ಸು ಕಾರ್ಯ ತತ್ಪರವಾಗಲು ಒಂದೇ ಸವನೆ ಪರಿತಪಿಸುತ್ತಿತ್ತು. ಆದರೆ ಮುಪ್ಪಿನಿಂದ ಸೊಪ್ಪಾದ ದೇಹಕ್ಕೆ ಆ ಮಟ್ಟಿನ ದಾರ್ಢ್ಯವಿರಲಿಲ್ಲ.

ಕರುಳಿನ ಗಂಟಿನ ನೋವು ಹೆಚ್ಚಾಗಲು ಸ್ಥಳಿಕ ಡಾಕ್ಟರರಲ್ಲಿಗೆ ತೋರಿಸಹೋದರು. ಮಧ್ಯಾಹ್ನದ ಸಮಯ; ಸಾಕಷ್ಟು ಹೊತ್ತು ಕಾಯ್ದರೂ ಇವರಿಗೆ ಕರೆ ಬರಲಿಲ್ಲ. ಈ ಅನಾದರ ಸರಿಬಾರದೇ ಮನೆಗೆ ಮರಳಿದರು. ಕೊನೆಗೆ ಚಿಕಿತ್ಸೆಗಾಗಿ ಬೆಂಗಳೂರಿಗೇ ಹೋಗುವುದೆಂದು ಮನೆಯಲ್ಲಿ

ನಿರ್ಧಾರವಾಯಿತು. ಆಸ್ಪತ್ರೆಯಲ್ಲಿರುವಾಗಲೂ ಗ್ರಂಥ ಮಾರಾಟದ ಚಿಂತೆ, ಅತಿಥಿ ಸತ್ಕಾರದ ಚಿಂತೆ, ಅದಕ್ಕಾಗಿ ಪತ್ರವ್ಯವಹಾರ ಸಾಗಿಯೆ ಇದ್ದಿತು. ಆಗಿನ ದಿನಗಳಲ್ಲಿ ಹಾವೇರಿಯ ಮನೆಗೆ ಬರೆದ ಒಂದು ಪತ್ರಕ್ಕೆ ಉತ್ತರವಾಗಿ 'ಕೃಷ್ಣ'ನು ದಿನಾಂಕ ೧೪-೪-೪೨ರಂದು 'ತಮ್ಮ ಅಪ್ಪಣೆಯ ಪ್ರಕಾರ ಗೋವುಗಳ ಸೇವೆಯನ್ನು ಅವು ತೃಪ್ತಿ ಹೊಂದುವಂತೆ ಮಾಡುತ್ತಿದ್ದೇವೆ. ಬ್ರಾಹ್ಮಣ, ಅತಿಥಿ ಗುರುಗಳ ಸೇವೆಯನ್ನೂ ಚೆನ್ನಾಗಿ ಮಾಡುತ್ತಲಿದ್ದೇವೆ' ಎಂದು ಬರೆದು ಸಮಾಧಾನಪಡಿಸಿದನು.

ಆಮೇಲೆ ಅವರು ಬದುಕಿ ಇದ್ದುದು ಒಂದೇ ವಾರ. ಆಪರೇಷನ್ ಯಶಸ್ವಿಯಾಗಿದ್ದರೂ ದೇಹದ ತ್ರಾಣ ಉಳಿದಿರಲಿಲ್ಲ. ಸಾವು ಸಮೀಪಿಸಿದಾಗ ಅವರ ಮನೆ ಜನ, ಬೆಂಗಳೂರಿನಲ್ಲಿದ್ದ ಮಿತ್ರವರ್ಗದವರಲ್ಲಿ ಅನೇಕರು ಬಳಿಯಲ್ಲಿಯೆ ಇದ್ದರು. 'ನನ್ನ ಮರಣಕ್ಕಾಗಿ ಶೋಕಿಸಬೇಡಿರಿ. ನನ್ನ ಪುಸ್ತಕಗಳು ಇರುವವರೆಗೆ ಅವುಗಳ ಪ್ರಕಟನೆ ಮುಂದುವರಿಯುವವರೆಗೆ ನಾನು ಬದುಕಿ ಇದ್ದೇನೆ ಎಂದೇ ತಿಳಿಯಿರಿ' ಎಂಬ ಸಮಾಧಾನವನ್ನು ಹೇಳಿದರು. ಅವರು ನಶ್ವರದೇಹವನ್ನು ಬಿಟ್ಟು ಇಲ್ಲಿಂದ ಹೊರಟುಹೋದುದು ದಿನಾಂಕ ೨೨ ಏಪ್ರಿಲ್ ೧೯೪೨ರಂದು. ಅವರೆಂದಂತೆ ಗ್ರಂಥ ಸಮುದಾಯವನ್ನುಳಿದು, ಬೇರಾವ ಲೌಕಿಕ ಸಂಪತ್ತನ್ನೂ ಅವರು ತಮ್ಮ ಸಂಸಾರಕ್ಕೆಂದು ಬಿಟ್ಟು ಹೋಗಿರಲಿಲ್ಲ. ೧೦ ದಿನಗಳ ಮೇಲಿನ ಅವರ ಕರ್ಮದ ವೆಚ್ಚಕ್ಕೆ ಆ ಅವಧಿಯಲ್ಲಿ ಮಾರಾಟವಾದ ಪುಸ್ತಕಗಳು ನೆರವಾದುವೆಂಬುದು - ಶೋಚನೀಯವಾದರೂ ಸತ್ಯಸಂಗತಿಯಾಗಿದೆ.

'ನನ್ನ ಕರ್ನಾಟಕವು ನನ್ನನ್ನು ಪ್ರೀತಿಸಿ ಸಂಭಾವಿಸುತ್ತ ಬಂದ ಉಪಕಾರಕ್ಕಾಗಿ, ದೇಹವಿರುವವರೆಗೆ ಸಂತತವಾಗಿ ಅದರ ಸೇವೆ ಮಾಡುವದು ನನ್ನ ಪವಿತ್ರ ಕರ್ತವ್ಯ' ಎಂದು ನೆರೆನಂಬಿ ತಮ್ಮ ಕಾದಂಬರಿಗಳ ಮೂಲಕ ಅಸಂಖ್ಯ ಓದುಗರನ್ನು ಸೃಷ್ಟಿಸಿದ, ತಮ್ಮ ಧಾರ್ಮಿಕ ಬರವಣಿಗೆ - ಪರಿಶುದ್ಧಾಚರಣೆಗಳಿಂದ ಸಾವಿರಾರು ಜನರ ಬದುಕನ್ನು ಹಸನಾಗಿಸಲು ಅಹರ್ನಿಶಿ ದುಡಿದ ಒಂದು ಮಹಾನ್ ಜೀವ ಕಣ್ಮರೆಯಾಯಿತು. ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ಯುಗದ ಸಮಾಪ್ತಿಯಾಯಿತು.

***

# ನಾಮಸೂಚಿ

[ವ್ಯಕ್ತಿ, ಪಾತ್ರ, ಗ್ರಂಥ, ಲೇಖನ, ಸ್ಥಳ]

ಸೂಚನೆ : ಬೇರ ಬೇರೆ ಗ್ರಂಥಗಳ ಹಾಗೂ ಲೇಖನಗಳ ಹೆಸರನ್ನು ' ' ಈ ಅವತರಣ ಚಿಹ್ನೆಯಲ್ಲಿ ಕೊಟ್ಟಿದೆ. ಗಳಗನಾಥರ ಗ್ರಂಥಗಳು ಮಾತ್ರ ದಪ್ಪಕ್ಷರಗಳಲ್ಲಿವೆ.

***

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೪ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಚಿತ್ರದುರ್ಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೬ನೆಯ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮.